ಸಂಪುಟ 6, ಸಂಚಿಕೆ 11

ಡಿಸೆಂಬರ್ 1-15, 2025

ಉಚಿತ ವಿತರಣೆಗಾಗಿ

# ನ್ಯೂ ಇಂಡಿಯಾ ಸಮಾಚಾರ

International Year of Cooperatives 2025

Cooperatives Build a Better World






## ಸಹಕಾರಿ ಸಂಸ್ಥೆಗಳಿಂದ

## ವಿಕಸಿತ ಭಾರತದ ಹಾದಿಯ ಸದುಪಯೋಗ

ಸಹಕಾರ್ ಸೇ ಸಮೃದ್ಧಿ ಮಂತ್ರದೊಂದಿಗೆ, ಸಹಕಾರಿ ಆಧಾರಿತ ಆರ್ಥಿಕ ಮಾದರಿಯು ಭಾರತದ ಪ್ರಗತಿಯ ಚಾಲಕಶಕ್ತಿಯಾಗಿ ಮಾರ್ಪಟ್ಟಿದೆ. ಭಾರತವು ಈಗ 2047ರ ವೇಳೆಗೆ ವಿಕಸಿತ ರಾಷ್ಟ್ರವಾಗಲು ಸಜ್ಜಾಗಿದೆ.

ಇ-ಪ್ರತಿಗಾಗಿ

## ಬಿಹಾರ ವಿಧಾನಸಭಾ ಚುನಾವಣೆ-2025

# ಫಲಿತಾಂಶಗಳ ಮೇಲೆ ಒಂದು ನೋಟ

ಬಿಹಾರ ರಾಜ್ಯವನ್ನು ಪ್ರಜಾಪ್ರಭುತ್ವದ ತಾಯಿ ಎಂದು ಕರೆಯಲಾಗುತ್ತದೆ. ಬಿಹಾರ ವಿಧಾನಸಭಾ ಚುನಾವಣೆ 2025ರಲ್ಲಿ ದಾಖಲೆಯ ಮತದಾನ, ಮತದಾರರು ಸಾಮಾಜಿಕ ನ್ಯಾಯಕ್ಕಾಗಿ ಮತ ಚಲಾಯಿಸುತ್ತಿದ್ದಾರೆ ಎಂಬುದಕ್ಕೆ ಸಾಕ್ಷಿಯಾಗಿದೆ, ಅಲ್ಲಿ ಪ್ರತಿ ಕುಟುಂಬವು ಸಮಾನತೆ, ಗೌರವ ಮತ್ತು ಅವಕಾಶಗಳನ್ನು ಪಡೆಯುತ್ತದೆ. ಪ್ರಜಾಪ್ರಭುತ್ವದ ಹಬ್ಬದ ಈ ಆಚರಣೆಯ ಸಂದೇಶವೆಂದರೆ ಭಾರತೀಯ ನಾಗರಿಕರು ಈಗ ವಿಕಸಿತ ಭಾರತ ನಿರ್ಮಾಣಕ್ಕಾಗಿ ಅಭಿವೃದ್ಧಿ, ವೇಗದ ಅಭಿವೃದ್ಧಿಯನ್ನು ಮಾತ್ರ ಬಯಸುತ್ತಾರೆ.

**ಬರೆದ ದಾಖಲೆಗಳು**

ಭಾರತದ ಚುನಾವಣಾ ಆಯೋಗವು 2025ರ ಬಿಹಾರ ವಿಧಾನಸಭಾ ಚುನಾವಣೆಯನ್ನು ಶೇ. 67.13ರಷ್ಟು ಮತದಾನದೊಂದಿಗೆ ಯಶಸ್ವಿಯಾಗಿ ನಡೆಸಿತು, ಇದು 1951ರ ನಂತರ ಅತ್ಯಧಿಕವಾಗಿದೆ.

1951 ರಿಂದ ಬಿಹಾರದಲ್ಲಿ ಶೇಕಡಾ 71.78ರಷ್ಟು ಮತದಾನದೊಂದಿಗೆ ಮಹಿಳಾ ಮತದಾರರ ಅತ್ಯಧಿಕ ಭಾಗವಹಿಸುವಿಕೆ.




*ಮೂಲ: ಭಾರತದ ಚುನಾವಣಾ ಆಯೋಗ*

> **ಇಂದು, ಬಿಹಾರವು ನಿಮ್ಮನ್ನು ಸ್ವಾಗತಿಸಲು ಸಿದ್ಧವಾಗಿದೆ ಎಂದು ನಾನು ದೇಶ ಮತ್ತು ಪ್ರಪಂಚದಾದ್ಯಂತದ ಹೂಡಿಕೆದಾರರಿಗೆ ಹೇಳುತ್ತೇನೆ. ದೇಶ ಮತ್ತು ಪ್ರಪಂಚದಾದ್ಯಂತ ವಾಸಿಸುತ್ತಿರುವ ಬಿಹಾರದ ಮಕ್ಕಳಿಗೆ ಬಿಹಾರದಲ್ಲಿ ಹೂಡಿಕೆ ಮಾಡಲು ಇದು ಅತ್ಯಂತ ಸೂಕ್ತ ಸಮಯ ಎಂದು ನಾನು ಹೇಳುತ್ತೇನೆ. ಇಂದು ನಾನು ಬಿಹಾರದ ಪ್ರತಿಯೊಬ್ಬ ತಾಯಿ, ಪ್ರತಿ ಯುವಕ, ಪ್ರತಿಯೊಬ್ಬ ರೈತ ಮತ್ತು ಪ್ರತಿ ಬಡ ಕುಟುಂಬಕ್ಕೆ ಇದನ್ನು ಹೇಳಲು ಬಯಸುತ್ತೇನೆ: ನಿಮ್ಮ ನಂಬಿಕೆ ನನ್ನ ಪ್ರತಿಜ್ಞೆಯಾಗಿದೆ. ನಿಮ್ಮ ಭರವಸೆಯೇ ನನ್ನ ಸಂಕಲ್ಪ, ಮತ್ತು ನನ್ನ ಯುವ ಸ್ನೇಹಿತರ ಆಕಾಂಕ್ಷೆಗಳು ನನಗೆ ಸ್ಫೂರ್ತಿ. ಒಟ್ಟಾಗಿ, ನಾವು ಸಮೃದ್ಧ ಮತ್ತು ಅಭಿವೃದ್ಧಿ ಹೊಂದಿದ ಬಿಹಾರವನ್ನು ನಿರ್ಮಿಸುತ್ತೇವೆ.**
>
> ನರೇಂದ್ರ ಮೋದಿ, ಪ್ರಧಾನಮಂತ್ರಿ

# ನ್ಯೂ ಇಂಡಿಯಾ ಸಮಾಚಾರ

ಸಂಪುಟ 6, ಸಂಚಿಕೆ 11 | ಡಿಸೆಂಬರ್ 1-15, 2025

ಪ್ರಧಾನ ಸಂಪಾದಕರು
**ಧೀರೇಂದ್ರ ಓಝಾ**
ಪ್ರಧಾನ ಮಹಾನಿರ್ದೇಶಕರು,
ಪ್ರೆಸ್ ಇನ್‌ಫರ್ಮೇಶನ್ ಬ್ಯುರೋ
ನವದೆಹಲಿ

ಹಿರಿಯ ಸಲಹಾ ಸಂಪಾದಕ
**ಸಂತೋಷ್ ಕುಮಾರ್**

ಸಲಹಾ ಸಂಪಾದಕ
**ವಿಭೋರ್ ಶರ್ಮಾ**

ಹಿರಿಯ ಸಹಾಯಕ ಸಲಹಾ ಸಂಪಾದಕ
**ಪವನ್ ಕುಮಾರ್**

ಸಹಾಯಕ ಸಲಹಾ ಸಂಪಾದಕ
**ಅಖಿಲೇಶ್ ಕುಮಾರ್**
**ಚಂದನ್ ಕುಮಾರ್ ಚೌಧರಿ**

ಭಾಷಾ ಸಂಪಾದಕರು
**ಸುಮಿತ್ ಕುಮಾರ್** (ಇಂಗ್ಲಿಷ್)
**ರಜನೀಶ್ ಮಿಶ್ರಾ** (ಇಂಗ್ಲಿಷ್)
**ನದೀಮ್ ಅಹ್ಮದ್** (ಉರ್ದು)

ಪ್ರಧಾನ ವಿನ್ಯಾಸಕರು
**ಶ್ಯಾಮ್ ತಿವಾರಿ**

ಹಿರಿಯ ವಿನ್ಯಾಸಕರು
**ಫೂಲ್ ಚಂದ್ ತಿವಾರಿ**

ವಿನ್ಯಾಸಕರು
**ಅಭಯ್ ಗುಪ್ತಾ**
**ಸತ್ಯಂ ಸಿಂಗ್**




13 ಭಾಷೆಗಳಲ್ಲಿ ಲಭ್ಯವಿರುವ ನವಭಾರತದ ಸುದ್ದಿಗಳನ್ನು ಓದಲು ಕ್ಲಿಕ್ ಮಾಡಿ
https://newindiasamachar.pib.gov.in/news.aspx

ನ್ಯೂ ಇಂಡಿಯಾ ಸಮಾಚಾರ ಹಿಂದಿನ ಸಂಚಿಕೆಗಳನ್ನು ಓದಲು ಕ್ಲಿಕ್ ಮಾಡಿ:
https://newindiasamachar.pib.gov.in.archive.aspx

'ನ್ಯೂ ಇಂಡಿಯಾ ಸಮಾಚಾರ'ದ ನಿಯಮಿತ ಅಪ್ಡೇಟ್‌ಗಳಿಗಾಗಿ **@NISPIBIndia** ಅನ್ನು ಟ್ವಿಟ್ಟರ್‌ನಲ್ಲಿ ಅನುಸರಿಸಿ

# ಒಳ ಪುಟಗಳಲ್ಲಿ...

**ಮುಖಪುಟ ಲೇಖನ** ಅಂತಾರಾಷ್ಟ್ರೀಯ ಸಹಕಾರಿ ವರ್ಷ 2025

## ಸಹಕಾರಿ ಸಂಘಗಳು
### ಒಂದು ಸಮೃದ್ಧ ಸಮಾಜಕ್ಕೆ ಉತ್ತೇಜನ



ಸಣ್ಣ ಸಂಗತಿಗಳೂ, ಸಣ್ಣ ಸಂಪನ್ಮೂಲಗಳನ್ನು ಒಟ್ಟುಗೂಡಿಸಿದಾಗ, ಉತ್ತಮ ಫಲಶ್ರುತಿ ಸಾಧಿಸಬಹುದು. ನಮ್ಮ ಧರ್ಮಗ್ರಂಥಗಳ ಈ ಮಂತ್ರವು ಭಾರತದಲ್ಲಿ ಅಭಿವೃದ್ಧಿಗೊಂಡ ಪ್ರಾಚೀನ ಪದ್ಧತಿಯಾದ ಸಹಕಾರಿ ವ್ಯವಸ್ಥೆಗೆ ಹೆಚ್ಚು ಮಹತ್ವದ್ದಾಗಿದೆ. ಕಳೆದ ಕೆಲವು ವರ್ಷಗಳಲ್ಲಿ, ಕೇಂದ್ರ ಸರ್ಕಾರವು ದಶಕಗಳಿಂದ ಭಾರತೀಯ ಸಂಸ್ಕೃತಿಯೊಂದಿಗೆ ವಿಶೇಷ ಸಹಬಾಳ್ವೆ ಹೊಂದಿದ್ದ ಸಹಕಾರಿ ಕ್ಷೇತ್ರಕ್ಕೆ ಆಮೂಲಾಗ್ರ ಬದಲಾವಣೆಗಳನ್ನು ತಂದಿದೆ ಮತ್ತು ಹೊಸ ಚೈತನ್ಯ ತುಂಬಿದೆ. ಇದರ ಪರಿಣಾಮವಾಗಿ, ಸಹಕಾರಿ ಆಧಾರಿತ ಆರ್ಥಿಕ ಮಾದರಿಯು ಭಾರತದ ಬೆಳವಣಿಗೆಯ ಪ್ರಮುಖ ಚಾಲಕ ಶಕ್ತಿಯಾಗಿ ಮಾರ್ಪಟ್ಟಿದೆ, 2047 ರ ವೇಳೆಗೆ ವಿಕಸಿತ ಭಾರತದ ಗುರಿಯನ್ನು ಸಾಕಾರಗೊಳಿಸಿದೆ. | 12-31



ವಂದೇ ಮಾತರಂ ಗೀತೆಯ 150 ವರ್ಷಗಳ ಸ್ಮರಣೆ

**ವಂದೇ ಮಾತರಂ...**
ಸ್ವಾತಂತ್ರ್ಯ ಹೋರಾಟಗಾರರ ಗೀತೆ



ವಂದೇ ಮಾತರಂನ 150ನೇ ವರ್ಷ. ವರ್ಷವಿಡೀ ಸ್ಮರಣಾರ್ಥ ಕಾರ್ಯಕ್ರಮಕ್ಕೆ ಚಾಲನೆ. | 10-11

**ಭಯೋತ್ಪಾದನೆಯನ್ನು ಸಹಿಸುವುದಿಲ್ಲ ಪಿತೂರಿಗಾರರನ್ನು ಬಿಡುವುದಿಲ್ಲ.**



ಭಯೋತ್ಪಾದನೆ ವಿರುದ್ಧ ಪ್ರಧಾನಿ ಮೋದಿಯವರ ಕಠಿಣ ಸಂದೇಶ | 8-9


**ಸುದ್ದಿ ತುಣುಕುಗಳು** | 4-5

**ವ್ಯಕ್ತಿತ್ವ: ನಂದಲಾಲ್ ಬೋಸ್**
ಸಂವಿಧಾನದ ಪುಟಗಳಿಗೆ ಭಾರತೀಯ ಅಸ್ಮಿತೆಯನ್ನು ತುಂಬಿದವರು | 6-7

**ಬುಡಕಟ್ಟು ಕಲ್ಯಾಣವು ಕೇಂದ್ರ ಸರ್ಕಾರದ ಪ್ರಥಮ ಆದ್ಯತೆ**
ಭಗವಾನ್ ಬಿರ್ಸಾ ಮುಂಡಾ ಅವರ 150 ನೇ ವಾರ್ಷಿಕೋತ್ಸವದಂದು ಪ್ರಧಾನಮಂತ್ರಿಯವರ ಭಾಷಣ | 32-33

**ಅಂತಾರಾಷ್ಟ್ರೀಯ ದಿವ್ಯಾಂಗರ ದಿನ - ಡಿಸೆಂಬರ್ 3**
ಬೆಂಬಲದಿಂದ ಸ್ವಾವಲಂಬನೆಯವರೆಗೆ | 34-35

**ಎನ್.ಎ.ಎಲ್.ಎಸ್.ಎ.ಯ 20ನೇ ರಾಷ್ಟ್ರೀಯ ಸಮ್ಮೇಳನ**
ಸರ್ವರಿಗೂ ನ್ಯಾಯದ ಲಭ್ಯತೆಯು ಸಾಮಾಜಿಕ ನ್ಯಾಯದ ಅಡಿಪಾಯವಾಗಿದೆ | 36-37

**4 ಹೊಸ ವಂದೇ ಭಾರತ್ ರೈಲುಗಳಿಗೆ ಹಸಿರು ನಿಶಾನೆ ತೋರಿದ ಪ್ರಧಾನಿ ಮೋದಿ**
ಭಾರತದಾದ್ಯಂತ 164+ ಹೊಸ ವಂದೇ ಭಾರತ್ ರೈಲುಗಳ ಕಾರ್ಯಾಚರಣೆ | 38-39

**'ದೇವಭೂಮಿ ಉತ್ತರಾಖಂಡ್': ಭಾರತದ ಆಧ್ಯಾತ್ಮಿಕ ಜೀವನದ ಎದೆಬಡಿತ**
ಉತ್ತರಾಖಂಡದ ರಜತ ಮಹೋತ್ಸವ ಸಂದರ್ಭದಲ್ಲಿ ಪ್ರಧಾನಮಂತ್ರಿ ಮೋದಿಯವರ ಭಾಷಣ | 40-41

**ಪರಮಾಣು ವಿದ್ಯುತ್ ಸ್ಥಾವರಗಳು ಎಲ್ಲಾ ರೀತಿಯ ವಿಪತ್ತುಗಳಿಂದ ಸುರಕ್ಷಿತ**
ಪರಮಾಣು ಶಕ್ತಿಯ ಬಗ್ಗೆ ವಿಶೇಷ ವರದಿ | 42-43

**ನವ ಭಾರತದ ಕ್ರೀಡಾ ಮನೋಭಾವದ ಸಂಕೇತ**
ಮಹಿಳಾ ವಿಶ್ವಕಪ್ ಚಾಂಪಿಯನ್ಸ್ ನೊಂದಿಗೆ ಪ್ರಧಾನಮಂತ್ರಿ ಮೋದಿ ಸಂವಾದ | 44-45

**ಕೇಂದ್ರ ಸಚಿವ ಸಂಪುಟದ ನಿರ್ಣಯಗಳು**
ಸ್ವಾವಲಂಬನೆಗಾಗಿ ರಫ್ತು ಮಿಷನ್ ಗೆ ಅನುಮೋದನೆ | 48




**ಭಾರತ ಮತ್ತು ಭೂತಾನ್**
**ಗಡಿಗಳ ಸೇತುವೆ, ಸಂಸ್ಕೃತಿ ಹಂಚಿಕೆ**
ಎರಡು ದಿನಗಳ ಭೂತಾನ್ ಪ್ರವಾಸಕ್ಕೆ ಪ್ರಧಾನಮಂತ್ರಿ ಮೋದಿ | 46-47


**Published & Printed By:** Kanchan Prasad, Director General, on behalf of Central Bureau Of Communication.
**Printed At:** Kaveri Print Process Pvt. Ltd. A-104, Sec-65, Noida-201301 U.P.
**Communication Address:** Room No–1077, Soochna Bhwan, CGO Complex, New Delhi-110003.
**e-mail:** response-nis@pib.gov.in, **RNI No.:** DELKAN/2020/78828

# ಸಂಪಾದಕೀಯ

# ಭಾರತದ ಭವಿಷ್ಯವನ್ನು ರೂಪಿಸುತ್ತಿರುವ ಸಹಕಾರಿ ಸಂಸ್ಥೆಗಳು

**ಶುಭಾಶಯಗಳು,**

ಸಾಮಾಜಿಕ ಮತ್ತು ಆರ್ಥಿಕ ಸಮೃದ್ಧಿಯನ್ನು ಉತ್ತೇಜಿಸುವಲ್ಲಿ ಸಹಕಾರಿ ಸಂಸ್ಥೆಗಳು ಪ್ರಮುಖ ಪಾತ್ರ ವಹಿಸಿವೆ. ಅವು ಭಾರತದ ಪ್ರಜಾಪ್ರಭುತ್ವದ ಸಂರಚನೆಯನ್ನು ಬಲಪಡಿಸುವುದಲ್ಲದೆ, ಸಮಾಜದ ದುರ್ಬಲ ಮತ್ತು ಅಂಚಿನಲ್ಲಿರುವ ವರ್ಗಗಳಿಗೆ ಉತ್ತಮ ಉದ್ಯೋಗಾವಕಾಶಗಳನ್ನು ಒದಗಿಸಿ, ಸಾಮಾಜಿಕ ಹಾಗೂ ಹಣ ಪೂರಣದೊಂದಿಗೆ ಸಬಲೀಕರಣಗೊಳಿಸಲು ಪ್ರಬಲ ಸಾಧನವಾಗಿ ಕಾರ್ಯನಿರ್ವಹಿಸುತ್ತಿವೆ.

ದೇಶದಲ್ಲಿನ ಸಹಕಾರಿ ಸಂಸ್ಥೆಗಳು ಸುದೀರ್ಘ ಮತ್ತು ಶ್ರೀಮಂತ ಸಂಪ್ರದಾಯವನ್ನು ಹೊಂದಿದ್ದು, ಸ್ವಾತಂತ್ರ್ಯ ಪೂರ್ವದ ಆರ್ಥಿಕ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. 2021 ರಲ್ಲಿ ಸಹಕಾರ ಸಚಿವಾಲಯದ ಸ್ಥಾಪನೆ ಈ ವಲಯವನ್ನು ಪುನಶ್ಚೇನಗೊಳಿಸಿತು. ಇಂದು, ಭಾರತದಲ್ಲಿ 8,44,000 ಕ್ಕೂ ಹೆಚ್ಚು ಸಹಕಾರಿ ಸಂಘಗಳು ಮತ್ತು 300 ದಶಲಕ್ಷಕ್ಕೂ ಹೆಚ್ಚು ಸದಸ್ಯರಿದ್ದಾರೆ. ದೇಶವು ಸಹಕಾರಿ ಪರಿಸರ ವ್ಯವಸ್ಥೆಗೆ ಉತ್ತೇಜನ ನೀಡುತ್ತಿದೆ, ಹೊಸ ಆರ್ಥಿಕ ಮಾದರಿಯನ್ನು ಪೋಷಿಸುತ್ತಿದೆ, ಅದು ಭಾರತವನ್ನು 5 ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗುವ ಗುರಿಯನ್ನು ಸಾಧಿಸಲು ಸಹಕರಿಸುತ್ತಿದೆ ಮತ್ತು ದೇಶವನ್ನು ವೇಗದ ಅಭಿವೃದ್ಧಿಯ ಕಡೆಗೆ ಕೊಂಡೊಯ್ಯುತ್ತಿದೆ.

ಸಹಕಾರ ಸಚಿವಾಲಯ ಸ್ಥಾಪನೆಯಾದ ನಾಲ್ಕೂವರೆ ವರ್ಷಗಳಲ್ಲಿ, ಈ ವಲಯವು 100 ಕ್ಕೂ ಹೆಚ್ಚು ಆಡಳಿತಾತ್ಮಕ ಮತ್ತು ನೀತಿ ಉಪಕ್ರಮಗಳೊಂದಿಗೆ ಉತ್ತೇಜನ ಪಡೆದಿದೆ. ಪೀಪಲ್ (ಜನ), ಪ್ಲಾಟ್ ಫಾರ್ಮ್ (ವೇದಿಕೆ), ಪಿಎಸಿಎಸ್, ಪಾಲಿಸಿ (ನೀತಿ) ಮತ್ತು ಪ್ರಾಸ್ಪ್ಯಾರಿಟಿ (ಪ್ರಗತಿ) ಎಂಬ ಐದು 'ಪಿ'ಗಳನ್ನು ಆಧರಿಸಿದ ಈ ಉಪಕ್ರಮವು ಭಾರತದ ಸಹಕಾರಿ ಚಳವಳಿಯನ್ನು ಪುನಶ್ಚೇತನಗೊಳಿಸಿದೆ. "ಸಹಕಾರ್ ಸೇ ಸಮೃದ್ಧಿ" (ಸಹಕಾರದಿಂದ ಸಮೃದ್ಧಿ) ಮಂತ್ರದಿಂದ ಮಾರ್ಗದರ್ಶಿತವಾದ ಸಹಕಾರಿ ಕ್ಷೇತ್ರವು ಭಾರತದ ಭವಿಷ್ಯವನ್ನು ರೂಪಿಸುತ್ತಿದೆ. ವಿಶ್ವಸಂಸ್ಥೆಯು 2025 ಅನ್ನು ಅಂತಾರಾಷ್ಟ್ರೀಯ ಸಹಕಾರಿ ವರ್ಷವೆಂದು ಘೋಷಿಸಿತು ಮತ್ತು ಇತ್ತೀಚೆಗೆ, ಭಾರತದ ಎರಡು ಸಹಕಾರಿ ಸಂಘಗಳಾದ ಅಮುಲ್ ಮತ್ತು ಇಫ್ಕೊ ಕ್ರಮವಾಗಿ ವಿಶ್ವದ ಅಗ್ರ 10 ಸಹಕಾರಿ ಸಂಸ್ಥೆಗಳಲ್ಲಿ ಮೊದಲ ಮತ್ತು ಎರಡನೇ ಸ್ಥಾನದಲ್ಲಿವೆ. 1946ರ ಡಿಸೆಂಬರ್ 14 ರಂದು, ಅಮುಲ್ ಎಂಬ ಪ್ರಸಿದ್ಧ ಸಹಕಾರಿ ಸಂಸ್ಥೆಯನ್ನು ನೋಂದಾಯಿಸಲಾಯಿತು. ಈ ಹಿನ್ನೆಲೆಯಲ್ಲಿ, "ಸಹಕಾರ್ ಸೇ ಸಮೃದ್ಧಿ" ಈ ಸಂಚಿಕೆಯ ಮುಖಪುಟ ಲೇಖನವಾಗಿದೆ.

ವ್ಯಕ್ತಿತ್ವ ವಿಭಾಗದಲ್ಲಿ, ಭಾರತದ ಕಲಾನಿಧಿ ನಂದಲಾಲ್ ಬೋಸ್ ಬಗ್ಗೆ ಓದಿ. ಐಸಿಸಿ ಮಹಿಳಾ ವಿಶ್ವಕಪ್ ಚಾಂಪಿಯನ್ ಜತೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸಂವಾದ ಮತ್ತು ದೆಹಲಿ ಸ್ಫೋಟದ ಬಗ್ಗೆ ಅವರ ಕಠಿಣ ವಿಧಾನವು ಈ ವಿಷಯದ ಇತರ ಮುಖ್ಯಾಂಶಗಳಾಗಿವೆ. ಇದರೊಂದಿಗೆ, ಅಂತಾರಾಷ್ಟ್ರೀಯ ದಿವ್ಯಾಂಗರ ದಿನಾಚರಣೆ, ಪರಮಾಣು ಶಕ್ತಿ, ಕೇಂದ್ರ ಸಂಪುಟದ ನಿರ್ಣಯಗಳು ಮತ್ತು ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಹದಿನೈದು ದಿನಗಳ ಕಾರ್ಯಕ್ರಮಗಳ ವಿಶೇಷ ವಿಷಯಗಳು ಈ ಸಂಚಿಕೆಯ ಭಾಗವಾಗಿದೆ.

ಮಿಗಿಲಾಗಿ, ನಿಯತಕಾಲಿಕವು ಬಿಹಾರ ವಿಧಾನಸಭಾ ಚುನಾವಣೆ 2025ರ ಫಲಿತಾಂಶಗಳ ಬಗ್ಗೆ ವಿಶೇಷ ವಸ್ತುವಿಷಯ ಮುಖಪುಟದ ಒಳಗಿನ ಪುಟದಲ್ಲಿದ್ದು, ರಕ್ಷಾಪುಟದ ಹಿಂಬದಿಯಲ್ಲಿ ಡಿಸೆಂಬರ್ 6ರಂದು ಆಚರಿಸಲಾಗುವ ಬಾಬಾ ಸಾಹೇಬ್ ಡಾ.ಭೀಮರಾವ್ ಅಂಬೇಡ್ಕರ್ ಅವರ 70ನೇ ಮಹಾಪರಿನಿರ್ವಾಣ ದಿವಸ್ ವಿಷಯ ಒಳಗೊಂಡಿದೆ.

***ನಿಮ್ಮ ಸಲಹೆಗಳನ್ನು ನಮಗೆ ಕಳುಹಿಸುತ್ತಿರಿ.***



**(ಧೀರೇಂದ್ರ ಓಝಾ)**

ಹಿಂದಿ, ಇಂಗ್ಲಿಷ್ ಮತ್ತು ಇತರ 11 ಭಾಷೆಗಳಲ್ಲಿ ಲಭ್ಯವಿರುವ ಪತ್ರಿಕೆಯನ್ನು ಇಲ್ಲಿ ಓದಿ/ಡೌನ್ಲೋಡ್ ಮಾಡಿ.
*https://newindiasamachar.pib.gov.in/*

# ಅಂಚೆ ಪೆಟ್ಟಿಗೆ






**ಸರ್ಕಾರದ ನೀತಿಗಳನ್ನು ಅರ್ಥಮಾಡಿಕೊಳ್ಳಲು ಒಂದು ಅಮೂಲ್ಯವಾದ ಸಂಪನ್ಮೂಲ**

ಕೆಲ ದಿನಗಳ ಹಿಂದೆ ನನಗೆ ನ್ಯೂ ಇಂಡಿಯಾ ಸಮಾಚಾರ ನಿಯತಕಾಲಿಕವನ್ನು ಓದುವ ಅವಕಾಶ ದೊರೆಯಿತು. ಈ ನಿಯತಕಾಲಿಕವು ಅನೇಕ ವಿಧಗಳಲ್ಲಿ ಅನನ್ಯವಾಗಿದೆ. ಸರ್ಕಾರದ ನೀತಿಗಳನ್ನು ಅರ್ಥಮಾಡಿಕೊಳ್ಳಲು ಇದು ಬಹಳ ಅಮೂಲ್ಯವಾದ ಸಂಪನ್ಮೂಲವಾಗಿದೆ. ಇದು ಹೊಸ ನೀತಿಗಳು, ಸಾಮಾಜಿಕ ಸಮಸ್ಯೆಗಳು, ಅಭಿವೃದ್ಧಿ ಮತ್ತು ಇತರ ಅನೇಕ ಸರ್ಕಾರಿ ಉಪಕ್ರಮಗಳ ಬಗ್ಗೆ ಉಪಯುಕ್ತ ಮತ್ತು ವಾಸ್ತವಿಕ ಮಾಹಿತಿಯನ್ನು ಒದಗಿಸುತ್ತದೆ.
**amit.tiwari9911@gmail.com**

**ನಿಯತಕಾಲಿಕದ ಪ್ರತಿಯೊಂದು ಸಂಚಿಕೆಯೂ ಹೊಸದನ್ನು ಕಲಿಸುತ್ತದೆ**

ನ್ಯೂ ಇಂಡಿಯಾ ಸಮಾಚಾರ ನಿಯತಕಾಲಿಕದ ಮೂಲಕ, ನಾನು ಭಾರತ ಮತ್ತು ವಿದೇಶಗಳಲ್ಲಿ ನಡೆಯುವ ಎಲ್ಲಾ ಘಟನಾವಳಿಗಳ ಬಗ್ಗೆ ತಿಳಿದುಕೊಂಡಿದ್ದೇನೆ. ನಾನು ಪ್ರತಿ ಸಂಚಿಕೆಯಿಂದ ಹೊಸದನ್ನು ಕಲಿಯುತ್ತೇನೆ. ನ್ಯೂ ಇಂಡಿಯಾ ಸಮಾಚಾರ ನಿಯತಕಾಲಿಕದ ಲೇಖನಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿವೆ. ಅದರ ದೋಷರಹಿತ ವಿಷಯ ಮತ್ತು ಒಳನೋಟಗಳು ಪ್ರಚಲಿತ ವಿದ್ಯಮಾನಗಳ ಸಮಗ್ರ ತಿಳಿವಳಿಕೆಯನ್ನು ಬೆಳೆಸಲು ನನಗೆ ಸಹಾಯ ಮಾಡಿದೆ.
**dinesh_dubey1977@rediffmail.com**

**ದೇಶದ ಅಭಿವೃದ್ಧಿಯ ಬಗ್ಗೆ ಮಾಹಿತಿಯ ಕಣಜ**

ನ್ಯೂ ಇಂಡಿಯಾ ಸಮಾಚಾರ ನಿಯತಕಾಲಿಕವನ್ನು ಓದಲು ಮತ್ತು ದೇಶದ ಪ್ರಗತಿಯ ಪಯಣದ ಬಗ್ಗೆ ತಿಳಿಯಲು ಸಂತೋಷವಾಗುತ್ತದೆ. ಇದು ಬಹಳ ಅರ್ಥಪೂರ್ಣ ಅರಿವಿನ ಪತ್ರಿಕೆಯಾಗಿದೆ. ಇದು ದೇಶದ ಅಭಿವೃದ್ಧಿಯ ಬಗ್ಗೆ ಸಾಕಷ್ಟು ಮಾಹಿತಿಯನ್ನು ಒದಗಿಸುತ್ತದೆ. ಇದನ್ನು ಅದ್ಭುತ ಶೈಲಿಯಲ್ಲಿ ಪ್ರಕಟಿಸಲಾಗುತ್ತಿದೆ ಮತ್ತು ಅತ್ಯುತ್ತಮ ವಿನ್ಯಾಸದಿಂದ ಕೂಡಿದೆ.
**purshottam.79fzd@gmail.com**

**ಅಮೂಲ್ಯವಾದ ಮಾಹಿತಿಯೊಂದಿಗೆ ಸರಿಯಾದ ಮಾರ್ಗದರ್ಶನವನ್ನು ಒದಗಿಸುತ್ತದೆ**

ನಾನು ಯಾವಾಗಲೂ "ನ್ಯೂ ಇಂಡಿಯಾ ಸಮಾಚಾರ" ಪಾಕ್ಷಿಕ ನಿಯತಕಾಲಿಕವನ್ನು ಎದುರು ನೋಡುತ್ತೇನೆ. ಈ ನಿಯತಕಾಲಿಕವನ್ನು ಚೆನ್ನಾಗಿ ವಿನ್ಯಾಸಗೊಳಿಸಲಾಗಿದೆ. ವಿಷಯವು ಅಮೂಲ್ಯವಾದ ಮಾಹಿತಿಯನ್ನು ಒದಗಿಸುತ್ತದೆ ಮತ್ತು ಭಾರತ ಸರ್ಕಾರದ ಪ್ರಮುಖ ಕೆಲಸಗಳ ಬಗ್ಗೆ ನನಗೆ ತಿಳಿಸುತ್ತದೆ. ಈ ಪತ್ರಿಕೆಯು ನಮ್ಮನ್ನು ನಮ್ಮ ದೇಶದೊಂದಿಗೆ ಸಂಪರ್ಕಿಸುತ್ತದೆ, ಶಕ್ತಿಯನ್ನು ಒದಗಿಸುತ್ತದೆ ಮತ್ತು ಸರಿಯಾದ ಮಾರ್ಗದರ್ಶನವನ್ನು ನೀಡುತ್ತದೆ.
**pandittaarun@gmail.com**

**ಅಭಿವೃದ್ಧಿಯ ವೇಗವನ್ನು ನಿಖರವಾಗಿ ನಿರ್ಣಯಿಸಲು ಸಹಕಾರಿ**

ನ್ಯೂ ಇಂಡಿಯಾ ಸಮಾಚಾರ ಒಂದು ಅತ್ಯುತ್ತಮ ನಿಯತಕಾಲಿಕವಾಗಿದೆ. ಅದರ ಇತ್ತೀಚಿನ ಸಂಚಿಕೆಯು ಪ್ರಮುಖ ಮಾಹಿತಿಯಿಂದ ತುಂಬಿತ್ತು. ಮುಖಪುಟ ಲೇಖನ ತುಂಬಾ ಪ್ರಖರವಾಗಿತ್ತು. ಇತರ ಲೇಖನಗಳು ಅಷ್ಟೇ ಶೈಕ್ಷಣಿಕವಾಗಿವೆ. ಈ ನಿಯತಕಾಲಿಕದಲ್ಲಿನ ಅಂಕಿಅಂಶಗಳು ಮತ್ತು ಸಂಗತಿಗಳು ನಿಖರವಾದ ಮಾಹಿತಿಯನ್ನು ಒದಗಿಸುತ್ತವೆ, ಇದು ಅಭಿವೃದ್ಧಿಯ ವೇಗವನ್ನು ನಿಖರವಾಗಿ ನಿರ್ಣಯಿಸಲು ಸಹಾಯ ಮಾಡುತ್ತದೆ.
**anjuranip79@gmail.com**


Communication Address : Room No–1077, Soochna Bhawan, CGO Complex, New Delhi -110003. E-Mail: response-nis@pib.gov.in


Akashvani

Scan the QR code to listen to New India Samachar on All India Radio FM Gold every Saturday-Sunday from 3:10 PM to 3:25 PM.

## ಸುದ್ದಿ ತುಣುಕುಗಳು

# ಕ್ಯೂಎಸ್ ಏಷ್ಯಾ ವಿಶ್ವವಿದ್ಯಾಲಯ ಶ್ರೇಯಾಂಕದಲ್ಲಿ ಮಿಂಚಿದ ಭಾರತ

ಕ್ಯೂಎಸ್ ಏಷ್ಯಾ ವಿಶ್ವವಿದ್ಯಾಲಯ ಶ್ರೇಯಾಂಕವು ಭಾರತೀಯ ವಿಶ್ವವಿದ್ಯಾಲಯಗಳ ಸಂಖ್ಯೆಯಲ್ಲಿ ದಾಖಲೆಯ ಶೇ.1,125ರಷ್ಟು ವೃದ್ಧಿಯನ್ನು ತೋರಿಸುತ್ತದೆ. ಈ ಪಟ್ಟಿಯಲ್ಲಿ 2016ರಲ್ಲಿ ದೇಶಾದ್ಯಂತ 24 ವಿಶ್ವವಿದ್ಯಾಲಯಗಳು ಸೇರಿದ್ದರೆ, 2026 ರ ಶ್ರೇಯಾಂಕದಲ್ಲಿ ಆ ಸಂಖ್ಯೆ 294ಕ್ಕೆ ಏರಿದೆ. ಈ ಪಟ್ಟಿಯ ಪ್ರಕಾರ, ಏಷ್ಯಾದ ಟಾಪ್ 10 ವಿಶ್ವವಿದ್ಯಾಲಯಗಳಲ್ಲಿ ಐದು ಮತ್ತು ಟಾಪ್ 50 ವಿಶ್ವವಿದ್ಯಾಲಯಗಳ ಪೈಕಿ 28 ಭಾರತೀಯ ವಿಶ್ವವಿದ್ಯಾಲಯಗಳಿವೆ. ಭಾರತವು ಈಗ ಏಷ್ಯಾದ "ಸಂಶೋಧನಾ ಶಕ್ತಿ ಕೇಂದ್ರ" ವಾಗುತ್ತಿದೆ ಮತ್ತು ವಿಶ್ವವಿದ್ಯಾಲಯಗಳು ರಾಷ್ಟ್ರೀಯ ಶಿಕ್ಷಣ ನೀತಿಯಡಿ ಆಧುನಿಕ ಶಿಕ್ಷಣ, ಸಂಶೋಧನೆ ಮತ್ತು ನಾವೀನ್ಯತೆಯ ಮೂಲಕ ಜಾಗತಿಕವಾಗಿ ಹೊಸ ಅಸ್ಮಿತೆ ಪಡೆಯುತ್ತಿವೆ. ಕಳೆದ ದಶಕದಲ್ಲಿ ಶ್ರೇಯಾಂಕದಲ್ಲಿ ಭಾರತೀಯ ವಿಶ್ವವಿದ್ಯಾಲಯಗಳ ಸಂಖ್ಯೆಯಲ್ಲಿ ದಾಖಲೆಯ ಹೆಚ್ಚಳವಾಗಿರುವುದಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಸಂತಸ ವ್ಯಕ್ತಪಡಿಸಿದ್ದಾರೆ. ಸಂಶೋಧನೆ ಮತ್ತು ನಾವೀನ್ಯತೆಯತ್ತ ಗಮನ ಹರಿಸುವ ಮೂಲಕ ನಮ್ಮ ಯುವಕರಿಗೆ ಗುಣಮಟ್ಟದ ಶಿಕ್ಷಣವನ್ನು ಖಚಿತಪಡಿಸಿಕೊಳ್ಳಲು ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಅವರು ಹೇಳಿದ್ದಾರೆ. ಭಾರತದಾದ್ಯಂತ ಹೆಚ್ಚಿನ ಶಿಕ್ಷಣ ಸಂಸ್ಥೆಗಳನ್ನು ಬಲಪಡಿಸುವ ಮೂಲಕ ನಾವು ಈ ಕ್ಷೇತ್ರದಲ್ಲಿ ಸಾಂಸ್ಥಿಕ ಸಾಮರ್ಥ್ಯವನ್ನು ನಿರ್ಮಿಸುತ್ತಿದ್ದೇವೆ.





# ಚಿನ್ನದ ಗೆಲುವಿನೊಂದಿಗೆ ಇತಿಹಾಸ ನಿರ್ಮಿಸಿದ ಸಾಮ್ರಾಟ್ ರಾಣಾ



ಕೈರೋದಲ್ಲಿ ನಡೆದ ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವ ಚಾಂಪಿಯನ್ ಷಿಪ್ ನ ಪುರುಷರ 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಭಾರತದ ಸಾಮ್ರಾಟ್ ರಾಣಾ ಚಿನ್ನದ ಪದಕ ಗೆಲ್ಲುವ ಮೂಲಕ ಇತಿಹಾಸ ನಿರ್ಮಿಸಿದ್ದಾರೆ. ಈ ಗೆಲುವಿನೊಂದಿಗೆ ವೈಯಕ್ತಿಕ ಏರ್ ಪಿಸ್ತೂಲ್ ವಿಶ್ವ ಪ್ರಶಸ್ತಿ ಗೆದ್ದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ರಾಣಾ ಪಾತ್ರರಾಗಿದ್ದಾರೆ. ಪುರುಷರ 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ರಾಣಾ 243.7 ಅಂಕಗಳೊಂದಿಗೆ ಚಿನ್ನದ ಪದಕ ಗೆದ್ದರೆ, ಭಾರತದ ವರುಣ್ ತೋಮರ್ ಕಂಚಿನ ಪದಕ ಗೆದ್ದರು.

# ಬಿಹಾರದ ಗೋಗಬೀಲ್ ಕೆರೆಗೆ ರಾಮ್ಸರ್ ಸೈಟ್ ಸ್ಥಾನಮಾನ

ಪರಿಸರ ಸಂರಕ್ಷಣೆಯಲ್ಲಿ ಭಾರತ ಮತ್ತೊಂದು ಪ್ರಮುಖ ಮೈಲಿಗಲ್ಲನ್ನು ಸಾಧಿಸಿದೆ. ದೇಶದ ಜೌಗು ಪ್ರದೇಶಗಳಲ್ಲಿ ಒಂದಾದ ಗೋಗಬೀಲ್ ಸರೋವರಕ್ಕೆ ರಾಮ್ಸರ್ ಸೈಟ್ ಸ್ಥಾನಮಾನ ನೀಡಲಾಗಿದೆ. 86.63 ಹೆಕ್ಟೇರ್ ಪ್ರದೇಶದಲ್ಲಿ ವ್ಯಾಪಿಸಿರುವ ಈ ಸರೋವರವು ಬಿಹಾರದ ಕತಿಹಾರ್ ಜಿಲ್ಲೆಯಲ್ಲಿದೆ. ಈ ಸಾಧನೆಯೊಂದಿಗೆ, ಬಿಹಾರವು ಈಗ ತಮಿಳುನಾಡು ಮತ್ತು ಉತ್ತರ ಪ್ರದೇಶದ ನಂತರ ಮೂರನೇ ಸ್ಥಾನದಲ್ಲಿದೆ, ಆದರೆ ಭಾರತವು ಏಷ್ಯಾದಲ್ಲಿ ಮೊದಲ ಸ್ಥಾನದಲ್ಲಿದೆ ಮತ್ತು ಜಾಗತಿಕವಾಗಿ ಮೂರನೇ ಸ್ಥಾನದಲ್ಲಿದೆ. ಕಳೆದ 11 ವರ್ಷಗಳಲ್ಲಿ 67 ಹೊಸ ತಾಣಗಳನ್ನು ಸೇರಿಸುವುದರೊಂದಿಗೆ ದೇಶದಲ್ಲಿ ರಾಮ್ಸರ್ ತಾಣಗಳ ಸಂಖ್ಯೆ ಈಗ 94 ಕ್ಕೆ ಏರಿದೆ.



# ಗುಜರಿ ಮಾರಾಟದಿಂದ ಸುಮಾರು 4,100 ಕೋಟಿ ರೂ.

ವಿಶೇಷ ಸ್ವಚ್ಛತಾ ಅಭಿಯಾನ 5.0ರ ಅಡಿಯಲ್ಲಿ ವಿವಿಧ ಕೇಂದ್ರ ಸರ್ಕಾರಿ ಕಚೇರಿಗಳಿಂದ ಗುಜರಿ ವಿಲೇವಾರಿ ಮೂಲಕ 4,085 ಕೋಟಿ ರೂ.ಗಳಿಕೆ ಮಾಡಲಾಗಿದೆ. ತ್ಯಾಜ್ಯವನ್ನು ತೆಗೆದುಹಾಕುವ ಮೂಲಕ ಸರ್ಕಾರಿ ಕಚೇರಿಗಳನ್ನು ಸ್ವಚ್ಛಗೊಳಿಸುವ ಈ ಅಭಿಯಾನವು 2021 ರಿಂದ ನಡೆಯುತ್ತಿದೆ. ಕೇಂದ್ರ ರಾಜ್ಯ ಸಚಿವ ಡಾ.ಜಿತೇಂದ್ರ ಸಿಂಗ್ ಅವರ ಪ್ರಕಾರ, ಗುಜರಿ ಮಾರಾಟದಿಂದ ಗಳಿಸಿದ ಮೊತ್ತವು ಮೆಗಾ ಬಾಹ್ಯಾಕಾಶ ಮಿಷನ್ ಅಥವಾ ಹಲವಾರು ಚಂದ್ರಯಾನ ಬಾಹ್ಯಾಕಾಶ ಕಾರ್ಯಾಚರಣೆಗಳ ಒಟ್ಟು ಬಜೆಟ್ ಗೆ ಸಮನಾಗಿರುತ್ತದೆ. ವಿಶೇಷ ಸ್ವಚ್ಛತಾ ಅಭಿಯಾನದ ಮಹತ್ವದ ಫಲಿತಾಂಶವೆಂದರೆ ಈ ಹಿಂದೆ ತ್ಯಾಜ್ಯ ವಸ್ತುಗಳು, ಹಳೆಯ ಪೀಠೋಪಕರಣಗಳು ಮತ್ತು ತ್ಯಾಜ್ಯದಿಂದ ತುಂಬಿದ 23.175 ದಶಲಕ್ಷ ಚದರ ಅಡಿ ಜಾಗವನ್ನು ಮುಕ್ತಗೊಳಿಸಿದೆ. ಈ ಅಭಿಯಾನವು ಆರ್ಥಿಕ ಚಟುವಟಿಕೆಗಳಿಗಾಗಿ ಬೃಹತ್ ಮಾಲ್ ಅಥವಾ ಇತರ ದೊಡ್ಡ ರಚನೆಯನ್ನು ನಿರ್ಮಿಸಲು ಸಾಕಷ್ಟು ಸ್ಥಳಾವಕಾಶವನ್ನು ಮುಕ್ತಗೊಳಿಸಿದೆ.



## ಯುನೆಸ್ಕೋದ "ಕ್ರಿಯೇಟಿವ್ ಸಿಟಿ ಆಫ್ ಗ್ಯಾಸ್ಟ್ರೊನಮಿ" ಪ್ರಶಸ್ತಿ ಗೆದ್ದ ಲಕ್ನೋ

ವಿಶಿಷ್ಟ ಕಲೆ ಮತ್ತು ಸಂಸ್ಕೃತಿಗಳಿಗೆ ವಿಶ್ವಾದ್ಯಂತ ಹೆಸರುವಾಸಿಯಾದ ಲಕ್ನೋ ನಗರಕ್ಕೆ ಯುನೆಸ್ಕೋ 'ಕ್ರಿಯೇಟಿವ್ ಸಿಟಿ ಆಫ್ ಗ್ಯಾಸ್ಟ್ರೊನಮಿ' ಗೌರವವನ್ನು ನೀಡಿದೆ. ಇದು ಜಾಗತಿಕ ವೇದಿಕೆಯಲ್ಲಿ ಭಾರತದ ಕಾಲಾತೀತ ಸಂಪ್ರದಾಯಗಳು, ಸಂಸ್ಕೃತಿ ಮತ್ತು ಮೌಲ್ಯಗಳಿಗೆ ಅಭೂತಪೂರ್ವ ಮಾನ್ಯತೆ ಮತ್ತು ಗೌರವವನ್ನು ಪ್ರತಿನಿಧಿಸುತ್ತದೆ. ಈ ಗೌರವವು ತನ್ನ ವಿಶಿಷ್ಟ ಪಾಕಶಾಲೆಯ ಪರಂಪರೆ ಮತ್ತು ಶ್ರೀಮಂತ ಸಂಪ್ರದಾಯಗಳಿಗೆ ನಗರದ ಅಸಾಧಾರಣ ಕೊಡುಗೆಯನ್ನು ಪ್ರತಿಬಿಂಬಿಸುತ್ತದೆ. ಈ ಮನ್ನಣೆಯು ಲಕ್ನೋದ ಜಾಗತಿಕ ಖ್ಯಾತಿಯನ್ನು ಹೆಚ್ಚಿಸಿದೆ. ಈಗ, ಅದರ ರುಚಿಗಳು ಪ್ರಪಂಚದಾದ್ಯಂತ ತಲುಪುತ್ತವೆ. ಯುನೆಸ್ಕೋ ಲಕ್ನೋವನ್ನು 'ಗ್ಯಾಸ್ಟ್ರೊನಮಿಯ ಸೃಜನಶೀಲ ನಗರ' ಎಂದು ಘೋಷಿಸಿರುವುದಕ್ಕೆ ಸಂತಸ ವ್ಯಕ್ತಪಡಿಸಿದ ಪ್ರಧಾನಮಂತ್ರಿ ನರೇಂದ್ರ ಮೋದಿ, "ಲಕ್ನೋ ರೋಮಾಂಚಕ ಸಂಸ್ಕೃತಿಗೆ ಸಮಾನಾರ್ಥಕವಾಗಿದೆ, ಇದರ ಸಾರದಲ್ಲಿ ಉತ್ತಮ ಪಾಕಶಾಲೆಯ ಸಂಸ್ಕೃತಿ ಇದೆ. ಲಕ್ನೋದ ಈ ಅಂಶವನ್ನು ಯುನೆಸ್ಕೋ ಗುರುತಿಸಿರುವುದಕ್ಕೆ ನನಗೆ ಸಂತೋಷವಾಗಿದೆ ಮತ್ತು ಪ್ರಪಂಚದಾದ್ಯಂತದ ಜನರು ಲಕ್ನೋಗೆ ಭೇಟಿ ನೀಡಿ ಅದರ ಅನನ್ಯತೆಯನ್ನು ಅನ್ವೇಷಿಸಲು ನಾನು ಕರೆ ನೀಡುತ್ತೇನೆ ಎಂದಿದ್ದಾರೆ.



## ದ್ವಿಗುಣವಾಗಲಿದೆ "ಅಮೃತ್ ಔಷಧಾಲಯ" ಸಂಖ್ಯೆ

ಕೈಗೆಟುಕುವ ಮತ್ತು ಗುಣಮಟ್ಟದ ಔಷಧಿಗಳನ್ನು ಪೂರೈಸುವ ಉದ್ದೇಶದಿಂದ 2015 ರಲ್ಲಿ ಪ್ರಾರಂಭಿಸಲಾದ "ಅಮೃತ್ ಔಷಧಾಲಯ" ಕಳೆದ 10 ವರ್ಷಗಳಲ್ಲಿ ಲಕ್ಷಾಂತರ ರೋಗಿಗಳಿಗೆ ಶೇ.50 ರಿಂದ 90ರಷ್ಟು ಅಗ್ಗದ ಔಷಧಿಗಳು ಮತ್ತು ಕೃತಕ ಜೋಡಣೆ (ಇಂಪ್ಲಾಂಟ್) ಗಳನ್ನು ಒದಗಿಸಿದೆ. ಪ್ರಸ್ತುತ ದೇಶಾದ್ಯಂತ 255 ಅಮೃತ್ ಫಾರ್ಮಸಿಗಳಿವೆ, ಮುಂದಿನ ದಿನಗಳಲ್ಲಿ 500ಕ್ಕೆ ಹೆಚ್ಚಿಸುವ ಗುರಿ ಹೊಂದಲಾಗಿದೆ. ಅಮೃತ್ ಫಾರ್ಮಸಿಯಿಂದ 6.85 ಕೋಟಿಗೂ ಹೆಚ್ಚು ರೋಗಿಗಳು ಪ್ರಯೋಜನ ಪಡೆದಿದ್ದಾರೆ. ಈ ರೋಗಿಗಳಿಗೆ 17,000 ಕೋಟಿ ರೂ.ಗೂ ಹೆಚ್ಚು ಮೌಲ್ಯದ ಔಷಧಿಗಳನ್ನು ವಿತರಿಸಲಾಗಿದೆ, ಇದರ ಪರಿಣಾಮವಾಗಿ ಸುಮಾರು 8,400 ಕೋಟಿ ರೂ.ಗಳ ಉಳಿತಾಯವಾಗಿದೆ. ಆರೋಗ್ಯ ವ್ಯವಸ್ಥೆಯ ಪ್ರತಿಯೊಂದು ಹಂತದಲ್ಲೂ ನಾಗರಿಕರಿಗೆ ಕೈಗೆಟುಕುವ ದರದಲ್ಲಿ ಔಷಧಿಗಳು ಲಭ್ಯವಾಗುವುದನ್ನು ಖಚಿತಪಡಿಸಿಕೊಳ್ಳಲು ಪ್ರತಿ ವೈದ್ಯಕೀಯ ಕಾಲೇಜು ಮತ್ತು ಪ್ರತಿ ಜಿಲ್ಲಾ ಆಸ್ಪತ್ರೆಯಲ್ಲಿ ಅಮೃತ್ ಫಾರ್ಮಸಿ ಇರಬೇಕು ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಜೆ.ಪಿ.ನಡ್ಡಾ ಹೇಳಿದ್ದಾರೆ.



# ಸಂವಿಧಾನದ ಪುಟಗಳಿಗೆ ಭಾರತೀಯ ಅಸ್ಮಿತೆ ತುಂಬಿದವರು



ಜನನ: ಡಿಸೆಂಬರ್ 3, 1882, ಮರಣ: ಏಪ್ರಿಲ್ 16, 1966

*ಆಧುನಿಕ ಭಾರತೀಯ ಕಲೆಯ ಪಿತಾಮಹ ಎಂದು ಗುರುತಿಸಲಾದ ರಾಷ್ಟ್ರೀಯವಾದಿ ವರ್ಣಚಿತ್ರಕಾರ ನಂದಲಾಲ್ ಬೋಸ್ ಭಾರತೀಯ ಚಿತ್ರಕಲೆಯನ್ನು ಔನ್ನತ್ಯಕ್ಕೆ ಏರಿಸಿದವರು. ಕುಂಚದ ಮಾಂತ್ರಿಕರಾಗಿದ್ದ ಅವರು ಸಂವಿಧಾನದ ಪುಟಗಳ ಚಿತ್ರಣಗಳಲ್ಲಿ ಭಾರತದ ಸಾರವನ್ನು ಚಿತ್ರಿಸಿದರು ಮತ್ತು ದೇಶದ ಅತ್ಯುನ್ನತ ನಾಗರಿಕ ಗೌರವ ಭಾರತ ರತ್ನ ಮತ್ತು ಪದ್ಮಶ್ರೀ ಗಾಗಿ ರೇಖಾಚಿತ್ರಗಳನ್ನು ವಿನ್ಯಾಸಗೊಳಿಸಿದರು. ಇಂತಹ ಮಹಾನ್ ಕಲಾವಿದರ ಜನ್ಮದಿನದಂದು ಕೃತಜ್ಞವಾಗಿರುವ ರಾಷ್ಟ್ರ ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.*

ಆಧುನಿಕ ಭಾರತೀಯ ಕಲೆಯ ಪ್ರವರ್ತಕ ಮತ್ತು ಅಂತಾರಾಷ್ಟ್ರೀಯ ಖ್ಯಾತಿಯ ಕಲಾವಿದ ನಂದಲಾಲ್ ಬೋಸ್ ಅವರು ಭಾರತೀಯ ಸಂವಿಧಾನದ ಮೂಲ ಕೈಬರಹದ ಪುಟಗಳನ್ನು ಭಾರತೀಯ ಅಸ್ಮಿತೆಯಿಂದ ಶ್ರೀಮಂತಗೊಳಿಸಿದವರು. ಈ 221 ಪುಟಗಳ ದಾಖಲೆಯನ್ನು ಎಲ್ಲಾ ಪುಟಗಳಲ್ಲಿ ಮುದ್ರಿಸಲು ಸಾಧ್ಯವಾಗಲಿಲ್ಲ. ಆದ್ದರಿಂದ, ಅವರು ಸಂವಿಧಾನದ ಪ್ರತಿಯೊಂದು ವಿಭಾಗದ ಆರಂಭಕ್ಕಾಗಿ 8x13 ಇಂಚಿನ ಚಿತ್ರಗಳನ್ನು ರಚಿಸಿದರು. ಇದು ಒಟ್ಟು 22 ವಿಭಾಗ ಒಳಗೊಂಡಿದೆ. ಇದು ಭಾರತೀಯ ಸಂವಿಧಾನದ ಮೂಲ ಪ್ರತಿಯನ್ನು ಅವರ 22 ವರ್ಣಚಿತ್ರಗಳಿಂದ ಅಲಂಕರಿಸಲು ಅವಕಾಶ ಮಾಡಿಕೊಟ್ಟಿತು. ಈ 22 ವರ್ಣಚಿತ್ರಗಳು ಪೂರ್ಣಗೊಳ್ಳಲು ನಾಲ್ಕು ವರ್ಷಗಳನ್ನು ತೆಗೆದುಕೊಂಡವು. ಅವರ ಕಾರ್ಯ ಸಂವಿಧಾನದ ಐತಿಹಾಸಿಕತೆಯನ್ನು ಜೀವಂತವಾಗಿಡುವುದಲ್ಲದೆ, ಭಾರತೀಯ ಸಂಸ್ಕೃತಿ, ಶ್ರೀಮಂತ ಇತಿಹಾಸ, ಧರ್ಮ, ಸಂಪ್ರದಾಯ, ಉನ್ನತ ಮಾನವೀಯ ಮೌಲ್ಯಗಳು ಮತ್ತು ಏಕತೆಯನ್ನು ನಮಗೆ ಅರಿತುಕೊಳ್ಳುವಂತೆ ಮಾಡುತ್ತದೆ.

ಸಂವಿಧಾನವು ಭಗವಾನ್ ರಾಮ, ಬುದ್ಧ, ಮಹಾವೀರ, ಗುರು ಗೋವಿಂದ್ ಸಿಂಗ್, ಗುರುಕುಲ, ಭಗವದ್ಗೀತೆಯ ಸಂದೇಶ, ಶಿವಾಜಿ, ಲಕ್ಷ್ಮೀಬಾಯಿ, ನಳಂದ ವಿಶ್ವವಿದ್ಯಾಲಯ ಮತ್ತು ನಟರಾಜನ ಚಿತ್ರಗಳನ್ನು ಒಳಗೊಂಡಿದೆ. ಈ ವರ್ಣಚಿತ್ರಗಳ ಮೂಲಕ ಅವರು ತಮ್ಮ ದೇಶವಾಸಿಗಳಿಗೆ ದೇಶಭಕ್ತಿಯನ್ನು ಬೋಧಿಸಿದರು. ಅವರ ಪ್ರಸಿದ್ಧ ವರ್ಣಚಿತ್ರಗಳಲ್ಲಿ "ದಾಂಡಿ ಸತ್ಯಾಗ್ರಹ", "ಸಂತಾಲಿ ಕನ್ಯಾ" ಮತ್ತು "ಸತಿ ತ್ಯಾಗ" ಸೇರಿವೆ. 1930 ರಲ್ಲಿ ಉಪ್ಪಿನ ಸತ್ಯಾಗ್ರಹದ ಸಮಯದಲ್ಲಿ, ಅವರು ಬಿಳಿ ಲಿನೋಕಟ್ ಮುದ್ರಣದಲ್ಲಿ ಗಾಂಧೀಜಿಯವರ ಕಪ್ಪು ಭಾವಚಿತ್ರವನ್ನು ರಚಿಸಿದರು, ಇದು ಹೆಚ್ಚು ಮೆಚ್ಚುಗೆ ಪಡೆಯಿತು. ನಂದಲಾಲ್ ಬೋಸ್ ಡಿಸೆಂಬರ್ 3, 1882 ರಂದು ಬಿಹಾರದ ಮುಂಗೇರ್ ಜಿಲ್ಲೆಯಲ್ಲಿ ವಾಸ್ತುಶಿಲ್ಪಿ ಪೂರ್ಣಚಂದ್ರ ಬೋಸ್ ಮತ್ತು ಕ್ಷೇಮಣಿ ದಂಪತಿಗೆ ಜನಿಸಿದರು. ಅವರ ಪೂರ್ವಜರ ಗ್ರಾಮವು ಬಂಗಾಳದ ಹೂಗ್ಲಿಯಲ್ಲಿತ್ತು. ಬಾಲ್ಯದಿಂದಲೂ ಶಿಲ್ಪಕಲೆ ಮತ್ತು ಚಿತ್ರಕಲೆಯಲ್ಲಿ ಅವರ ತೀವ್ರ ಆಸಕ್ತಿಯನ್ನು ಗುರುತಿಸಿದ ಅವರ ಪೋಷಕರು ಅವರನ್ನು ಕೋಲ್ಕತ್ತಾದ ಕಲಾ ಶಾಲೆಗೆ ಸೇರಿಸಿದರು. ಆಧುನಿಕ ಭಾರತೀಯ ಕಲೆಯ ಪ್ರವರ್ತಕರಾದ ನಂದಲಾಲ್ ಬೋಸ್ ಅವರು ಚಿತ್ರಕಲೆ ಮತ್ತು ಬೋಧನೆಯ ಬಗ್ಗೆ ತಮ್ಮ ಕೆಲಸದ ಜೊತೆಗೆ ರೂಪಾವಳಿ, ಶಿಲ್ಪಕಲಾ ಮತ್ತು ಶಿಲ್ಪಾ ಚರ್ಚಾ ಎಂಬ ಮೂರು ಪುಸ್ತಕಗಳನ್ನು ಬರೆದಿದ್ದಾರೆ. 1930 ರಲ್ಲಿ, ದಾಂಡಿ ಸತ್ಯಾಗ್ರಹದ ಸಮಯದಲ್ಲಿ ಮಹಾತ್ಮಾ ಗಾಂಧಿಯವರನ್ನು ಬಂಧಿಸಿದಾಗ, ನಂದಲಾಲ್ ಬೋಸ್ ಅವರು ಗಾಂಧೀಜಿ ತಮ್ಮ ಊರುಗೋಲಿನೊಂದಿಗೆ ನಡೆಯುತ್ತಿರುವ ಚಿತ್ರವನ್ನು ಬರೆದಿದ್ದಾರೆ. ಇದು ಸ್ವಾತಂತ್ರ್ಯ ಹೋರಾಟದಲ್ಲಿ ನಂದಲಾಲ್ ಬೋಸ್ ಅವರ ಪಾಲ್ಗೊಳ್ಳುವಿಕೆಯ ಪ್ರಾರಂಭಕ್ಕೆ ಸಾಕ್ಷಿಯಾಯಿತು. ಕಲೆಗೆ ನೀಡಿದ ಕೊಡುಗೆಗಳಿಗಾಗಿ ನಂದಲಾಲ್ ಬೋಸ್ ಅವರಿಗೆ ಪದ್ಮವಿಭೂಷಣ ಪ್ರಶಸ್ತಿ ನೀಡಲಾಯಿತು. ಅಬನೀಂದ್ರನಾಥ ಟ್ಯಾಗೋರ್ ಅವರ ಶಿಷ್ಯರಾದ ನಂದಲಾಲ್ ಬೋಸ್ ಅವರು ಭಾರತದ ಸ್ವಾತಂತ್ರ್ಯ ಚಳವಳಿಗೆ ಗಮನಾರ್ಹ ಕೊಡುಗೆಗಳನ್ನು ನೀಡಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಆಗಸ್ಟ್ 25, 2019 ರಂದು ತಮ್ಮ ಮನ್ ಕಿ ಬಾತ್ ನಲ್ಲಿ ನಂದಲಾಲ್ ಬೋಸ್ ಅವರನ್ನು ಸ್ಮರಿಸಿದರು. ಗುಜರಾತ್ ನ ಹರಿಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಮೊದಲು (1937-38), ಮಹಾತ್ಮ ಗಾಂಧಿಯವರು ಶಾಂತಿನಿಕೇತನದಲ್ಲಿ ಕಲಾ ಭವನದ ಪ್ರಾಂಶುಪಾಲರಾಗಿದ್ದ ನಂದಲಾಲ್ ಬೋಸ್ ಅವರನ್ನು ಆಹ್ವಾನಿಸಿದ್ದರು ಎಂದು ಅವರು ಉಲ್ಲೇಖಿಸಿದರು. ಕಲೆಯ ಮೂಲಕ ಭಾರತದ ಜನರ ಜೀವನಶೈಲಿಯನ್ನು ಚಿತ್ರಿಸಬೇಕೆಂದು ಮತ್ತು












THE CONSTITUTION OF INDIA

WE, THE PEOPLE OF INDIA, having solemnly resolved to constitute India into a SOVEREIGN DEMOCRATIC REPUBLIC and to secure to all its citizens:
JUSTICE, social, economic and political;
LIBERTY of thought, expression, belief, faith and worship;
EQUALITY of status and of opportunity;
and to promote among them all
FRATERNITY assuring the dignity of the individual and the unity of the Nation;
IN OUR CONSTITUENT ASSEMBLY this twenty-sixth day of November, 1949, do HEREBY ADOPT, ENACT AND GIVE TO OURSELVES THIS CONSTITUTION.



**ನಂದಲಾಲ್ ಬೋಸ್ ಅವರ ಕಲಾಕೃತಿಗಳು ನಮ್ಮ ಸಂವಿಧಾನದ ಸೌಂದರ್ಯವನ್ನು ಹೆಚ್ಚಿಸುತ್ತವೆ ಮತ್ತು ಅದಕ್ಕೆ ಹೊಸ ಅಸ್ಮಿತೆ ನೀಡುತ್ತವೆ. ಅವರ ಕಲಾತ್ಮಕ ಅನ್ವೇಷಣೆಗಳು ಸಂವಿಧಾನದ ಜೊತೆಗೆ ನಂದಲಾಲ್ ಬೋಸ್ ಅವರನ್ನೂ ಅಮರಗೊಳಿಸಿವೆ.**

**ನರೇಂದ್ರ ಮೋದಿ,**
**ಪ್ರಧಾನಮಂತ್ರಿ**



ಅಧಿವೇಶನದಲ್ಲಿ ಈ ಕಲಾಕೃತಿಯನ್ನು ಪ್ರದರ್ಶಿಸಬೇಕೆಂದು ಗಾಂಧಿ ಬಯಸಿದ್ದರು.

ಬೋಸ್ ಹರಿಪುರದ ಸುತ್ತಮುತ್ತಲಿನ ಹಳ್ಳಿಗಳಿಗೆ ಭೇಟಿ ನೀಡಿದರು ಮತ್ತು ಅಂತಿಮವಾಗಿ ಗ್ರಾಮೀಣ ಭಾರತದ ಜೀವನವನ್ನು ಚಿತ್ರಿಸುವ ಕೆಲವು ಚಿತ್ರಪಟಗಳನ್ನು ರಚಿಸಿದರು. ಈ ಅಮೂಲ್ಯ ಕೃತಿಗಳು 2019 ರಲ್ಲಿ ಪ್ರಸಿದ್ಧ ಕಲಾ ಪ್ರದರ್ಶನವಾದ ವೆನಿಸ್ ಬಿಯೆನ್ನೆಲ್ ನಲ್ಲಿ ಅಪಾರ ಮೆಚ್ಚುಗೆಯೊಂದಿಗೆ ಗಮನ ಸೆಳೆದವು.

ನಂತರ, ಡಿಸೆಂಬರ್ 17, 2024 ರಂದು, ಕೇಂದ್ರ ಗೃಹ ಸಚಿವರಾದ ಅಮಿತ್ ಶಾ ಅವರು ಭಾರತೀಯ ಸಂವಿಧಾನದ 75 ವರ್ಷಗಳ ಸಂದರ್ಭದಲ್ಲಿ ರಾಜ್ಯಸಭೆಯಲ್ಲಿ ನಂದಲಾಲ್ ಬೋಸ್ ಅವರನ್ನು ಸ್ಮರಿಸಿದರು. ಲಿಖಿತ ಸಂವಿಧಾನದ ಸ್ಫೂರ್ತಿಗೆ ಅನುಗುಣವಾಗಿ, ನಂದಲಾಲ್ ಬೋಸ್ ಅವರು ಭಾರತದ ಇತಿಹಾಸ, ಧರ್ಮ, ಸಂಸ್ಕೃತಿ, ಸಂಪ್ರದಾಯಗಳು ಮತ್ತು ಮಾನವೀಯ ಮೌಲ್ಯಗಳಿಗೆ ಪ್ರಾಮುಖ್ಯತೆ ನೀಡುವ ವಿವಿಧ ಘಟನೆಗಳನ್ನು ವಿವರಿಸಿದ್ದಾರೆ ಎಂದು ಅವರು ಹೇಳಿದರು. ಅವರ ಕಲಾಕೃತಿಯಲ್ಲಿ, ಭಗವಾನ್ ರಾಮ, ಬುದ್ಧ ಮತ್ತು ಮಹಾವೀರರ ಚಿತ್ರಣಗಳನ್ನು ಕಾಣಬಹುದು, ಜೊತೆಗೆ ಗುರುಕುಲದ ಮೂಲಕ ಭಾರತದ ಪ್ರಾಚೀನ ಶಿಕ್ಷಣ ವ್ಯವಸ್ಥೆಯನ್ನು ಸಂಕೇತಿಸುವ ದೃಶ್ಯಗಳನ್ನು ಕಾಣಬಹುದು. ಈ ಕೃತಿಗಳು ನಮ್ಮ ಶಿಕ್ಷಣ ನೀತಿ ಹೇಗಿರಬೇಕು ಎಂಬ ಸಂದೇಶಗಳನ್ನು ನೀಡುತ್ತವೆ. ಭಗವದ್ಗೀತೆಯ ಚಿತ್ರಣಗಳ ಜೊತೆಗೆ, ಅವರು ದೇಶಭಕ್ತಿಯ ಪಾಠಗಳನ್ನು ಕಲಿಸುವ ಶಿವಾಜಿ ಮತ್ತು ಲಕ್ಷ್ಮೀಬಾಯಿಯ ಚಿತ್ರಗಳನ್ನು ಸಹ ಸೇರಿಸಿದರು. ಗುರುಕುಲದ ಚಿತ್ರಣವು ನಮಗೆ ಪ್ರಾಚೀನ ಕಲಿಕೆಯ ವ್ಯವಸ್ಥೆಯನ್ನು ನೆನಪಿಸುತ್ತದೆ, ಆದರೆ ನಟರಾಜನ ಚಿತ್ರವು ಜೀವನದಲ್ಲಿ ಹೇಗೆ ಸಮತೋಲನವನ್ನು ಕಾಪಾಡಿಕೊಳ್ಳಬೇಕು ಎಂಬುದನ್ನು ಸಂಕೇತಿಸುತ್ತದೆ.

ಇದಲ್ಲದೆ, ಜನವರಿ 26, 2025 ರಂದು ಗಣರಾಜ್ಯೋತ್ಸವ ಪರೇಡ್ ನಲ್ಲಿ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಸ್ತಬ್ಧಚಿತ್ರವು 75 ವರ್ಷಗಳ ಸಂವಿಧಾನದ ಭವ್ಯ ಪ್ರಯಾಣವನ್ನು ಪ್ರಸ್ತುತಪಡಿಸಿತು. ನಂದಲಾಲ್ ಬೋಸ್ ಅವರ ಕಲಾಕೃತಿಗಳನ್ನು ಶಿಲ್ಪಕಲೆಯ ಫಲಕಗಳಲ್ಲಿ ಪ್ರಮುಖವಾಗಿ ಪ್ರದರ್ಶಿಸಲಾಯಿತು. ನಂದಲಾಲ್ ಬೋಸ್ ಏಪ್ರಿಲ್ 16, 1966 ರಂದು ನಿಧನ ಹೊಂದಿದರು.

# ಭಯೋತ್ಪಾದನೆಯನ್ನು ಸಹಿಸುವುದಿಲ್ಲ ಪಿತೂರಿಗಾರರನ್ನು ಬಿಡುವುದಿಲ್ಲ...

*ರಾಷ್ಟ್ರೀಯ ಭದ್ರತೆ ಮತ್ತು ಪ್ರತಿಯೊಬ್ಬ ನಾಗರಿಕರ ಸುರಕ್ಷತೆಗೆ ತನ್ನ ಬದ್ಧತೆಯ ಅನುಗುಣವಾಗಿ, ಕೇಂದ್ರ ಸರ್ಕಾರವು ಭಯೋತ್ಪಾದನೆಯ ವಿರುದ್ಧ ಬಲವಾದ ಸಂದೇಶವನ್ನು ರವಾನಿಸಿದೆ. ನವೆಂಬರ್ 10ರ ಸಂಜೆ ದೆಹಲಿಯ ಕೆಂಪು ಕೋಟೆಯ ಬಳಿ ನಡೆದ ಭಯೋತ್ಪಾದಕ ದಾಳಿಯ ವಿರುದ್ಧ ರಾಷ್ಟ್ರವು ಒಗ್ಗಟ್ಟಾಗಿ ನಿಂತಿದೆ ಮತ್ತು ಜಗತ್ತು ಕೂಡ ಭಾರತಕ್ಕೆ ತನ್ನ ಬೆಂಬಲವನ್ನು ವ್ಯಕ್ತಪಡಿಸಿದೆ. ಈ ಹೇಡಿತನ ಮತ್ತು ಅಸಹ್ಯಕರ ಕೃತ್ಯದ ಬಗ್ಗೆ ಶೂನ್ಯ ಸಹಿಷ್ಣುತೆಯ ನೀತಿಯನ್ನು ಪುನರುಚ್ಚರಿಸಿದ ಪ್ರಧಾನಮಂತ್ರಿ ನರೇಂದ್ರ ಮೋದಿ, "ಈ ಪಿತೂರಿಯ ಹಿಂದೆ ಇರುವವರನ್ನು ನ್ಯಾಯದ ಕಟಕಟೆಗೆ ತರಲಾಗುವುದು" ಎಂದು ಹೇಳಿದರು.*

ಭಯೋತ್ಪಾದನೆಯ ವಿರುದ್ಧ ಭಾರತದ ಶೂನ್ಯ ಸಹಿಷ್ಣುತೆ ನೀತಿ ಸ್ಪಷ್ಟವಾಗಿದೆ. ಭಾರತವು ಶಾಂತಿಯನ್ನು ಪ್ರತಿಪಾದಿಸುತ್ತದೆ ಮತ್ತು ಯುದ್ಧವನ್ನು ಬಯಸುವುದಿಲ್ಲ, ಆದರೆ ಭಯೋತ್ಪಾದನೆ ಅಪಾಯವಾಗಲು ಬಿಡುವುದಿಲ್ಲ.

ಕಳೆದ 11 ವರ್ಷಗಳಲ್ಲಿ ಭಯೋತ್ಪಾದನೆಯ ವಿರುದ್ಧದ ಮೂರು ಪ್ರಮುಖ ದಾಳಿಗಳು - ಉರಿ ಸರ್ಜಿಕಲ್ ಸ್ಟ್ರೈಕ್, ಆಪರೇಷನ್ ಬಾಲಕೋಟ್ ಮತ್ತು ಆಪರೇಷನ್ ಸಿಂಧೂರ - ಆ ಸಂಕಲ್ಪ ಮತ್ತು ಬದ್ಧತೆಗೆ ಸಾಕ್ಷಿಯಾಗಿದೆ. ಭಯೋತ್ಪಾದಕರು ಭಾರತದ ಭದ್ರತೆ ಮತ್ತು ಸಾರ್ವಭೌಮತ್ವಕ್ಕೆ ಸವಾಲು ಹಾಕಿದಾಗಲೆಲ್ಲಾ, ಭಾರತದ 1.4 ಶತಕೋಟಿ ನಾಗರಿಕರು ಒಗ್ಗಟ್ಟಿನಿಂದ ಸ್ಪಂದಿಸಿದ್ದಾರೆ. ಈಗ, ದೆಹಲಿಯ ಕೆಂಪು ಕೋಟೆಯ ಬಳಿ ನಡೆದ ಹೇಡಿತನದ ಭಯೋತ್ಪಾದಕ ಕೃತ್ಯಕ್ಕೆ ಅತ್ಯಂತ ಸಂಯಮದ ವಿಧಾನವನ್ನು ತೋರಿಸಲಾಗಿದೆ ಮತ್ತು ಎಲ್ಲಾ ಅಂಶಗಳ ಸಮಗ್ರ ತನಿಖೆಯ ನಂತರ, ಪ್ರಕರಣದ ಹೆಚ್ಚಿನ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್ಐಎ) ಗೆ ಹಸ್ತಾಂತರಿಸಲಾಗಿದೆ. ಭೂತಾನ್ ನಿಂದ ಹಿಂದಿರುಗಿದ ನಂತರ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಕೇಂದ್ರ ಸಚಿವ ಸಂಪುಟ ಸಭೆ ನಡೆಯಿತು. 2025ರ ನವೆಂಬರ್ 10ರಂದು ಸಂಜೆ ದೆಹಲಿಯ ಕೆಂಪು ಕೋಟೆಯ ಬಳಿ ಕಾರ್ ಬಾಂಬ್ ಸ್ಫೋಟದ ಭಯೋತ್ಪಾದಕ ಘಟನೆಯಲ್ಲಿ ಸಾವನ್ನಪ್ಪಿದ ಜನರಿಗೆ ಸಂಪುಟವು ತೀವ್ರ ಸಂತಾಪ ಸೂಚಿಸಿತು. ಮೃತರ ಸ್ಮರಣಾರ್ಥ ಸಚಿವ ಸಂಪುಟ ಎರಡು ನಿಮಿಷಗಳ ಮೌನ ಆಚರಿಸಿತು.

ನವೆಂಬರ್ 10ರ ಸಂಜೆ ದೆಹಲಿಯಲ್ಲಿ ನಡೆದ ಭಯೋತ್ಪಾದಕ ದಾಳಿಯ ಬಗ್ಗೆ ಮಾಹಿತಿ ಪಡೆದ ನಂತರ, ದೆಹಲಿ ಪೊಲೀಸ್ ವಿಶೇಷ ಘಟಕ, ಅಪರಾಧ ವಿಭಾಗ, ಎನ್ಐಎ, ಎನ್.ಎಸ್.ಜಿ. ಮತ್ತು ವಿಧಿವಿಜ್ಞಾನ (ಎಫ್ಎಸ್ಎಲ್)

## ಸಭೆಯಲ್ಲಿ ಅಂಗೀಕರಿಸಿದ ನಿರ್ಣಯಗಳು

- 2025ರ ನವೆಂಬರ್ 10ರ ಸಂಜೆ ಕೆಂಪು ಕೋಟೆಯ ಬಳಿ ಕಾರು ಸ್ಫೋಟದ ಮೂಲಕ ರಾಷ್ಟ್ರ ವಿರೋಧಿ ಶಕ್ತಿಗಳು ನಡೆಸಿದ ಘೋರ ಭಯೋತ್ಪಾದಕ ಕೃತ್ಯಕ್ಕೆ ದೇಶವು ಸಾಕ್ಷಿಯಾಗಿದೆ. ಸ್ಫೋಟವು ಅನೇಕ ಸಾವುನೋವುಗಳಿಗೆ ಕಾರಣವಾಯಿತು ಮತ್ತು ಹಲವರು ಗಾಯಗೊಂಡರು.
- ಸಂಪುಟವು ಈ ಅರ್ಥಹೀನ ಹಿಂಸಾಚಾರದಿಂದ ಸಂತ್ರಸ್ತರಾದವರಿಗೆ ನಮನ ಸಲ್ಲಿಸುತ್ತದೆ ಮತ್ತು ದುಃಖತಪ್ತ ಕುಟುಂಬಗಳಿಗೆ ತನ್ನ ಸಂತಾಪ ಸೂಚಿಸುತ್ತದೆ.
- ಗಾಯಗೊಂಡವರೆಲ್ಲರೂ ಶೀಘ್ರ ಚೇತರಿಸಿಕೊಳ್ಳಲಿ ಎಂದು ಸಂಪುಟವು ಪ್ರಾರ್ಥಿಸುತ್ತದೆ ಮತ್ತು ಸಂತ್ರಸ್ತರಿಗೆ ಚಿಕಿತ್ಸೆ, ಆರೈಕೆ ಮತ್ತು ಬೆಂಬಲವನ್ನು ನೀಡುತ್ತಿರುವ ವೈದ್ಯಕೀಯ ಸಿಬ್ಬಂದಿ ಮತ್ತು ತುರ್ತಾಗಿ ಸ್ಪಂದಿಸಿದವರ ತ್ವರಿತ ಪ್ರಯತ್ನಗಳನ್ನು ಶ್ಲಾಘಿಸುತ್ತದೆ.
- ಮುಗ್ಧ ಜೀವಗಳ ಹಾನಿಗೆ ಕಾರಣವಾದ ಈ ಹೇಡಿತನದ ಮತ್ತು ರಣಹೇಡಿ ಕೃತ್ಯವನ್ನು ಸಚಿವ ಸಂಪುಟ ನಿಸ್ಸಂದಿಗ್ಧವಾಗಿ ಖಂಡಿಸುತ್ತದೆ.
- ಭಯೋತ್ಪಾದನೆಯ ಎಲ್ಲಾ ಸ್ವರೂಪ ಮತ್ತು ಅಭಿವ್ಯಕ್ತಿಗಳ ಬಗ್ಗೆ ಶೂನ್ಯ ಸಹಿಷ್ಣುತೆಯ ನೀತಿಗೆ ಭಾರತದ ಅಚಲ ಬದ್ಧತೆಯನ್ನು ಸಂಪುಟವು ಪುನರುಚ್ಚರಿಸಿದೆ.
- ವಿಶ್ವದಾದ್ಯಂತದ ಅನೇಕ ಸರ್ಕಾರಗಳ ಒಗ್ಗಟ್ಟು ಮತ್ತು ಬೆಂಬಲದ ಹೇಳಿಕೆಗಳಿಗೆ ಸಚಿವ ಸಂಪುಟ ತನ್ನ ಮೆಚ್ಚುಗೆಯನ್ನು ದಾಖಲಿಸಿದೆ.
- ಪ್ರತಿಕೂಲ ಪರಿಸ್ಥಿತಿಯಲ್ಲೂ ಧೈರ್ಯ ಮತ್ತು ಸಹಾನುಭೂತಿಯಿಂದ ವರ್ತಿಸಿದ ಅಧಿಕಾರಿಗಳು, ಭದ್ರತಾ ಸಂಸ್ಥೆಗಳು ಮತ್ತು ನಾಗರಿಕರ ಸಮಯೋಚಿತ ಮತ್ತು ಸಂಘಟಿತ ಸ್ಪಂದನೆಯನ್ನು ಸಂಪುಟವು ಶ್ಲಾಘಿಸಿದೆ. ಅವರ ಸಮರ್ಪಣೆ ಮತ್ತು ಕರ್ತವ್ಯ ಪ್ರಜ್ಞೆ ಅತ್ಯಂತ ಶ್ಲಾಘನೀಯ ಎಂದು ಬಣ್ಣಿಸಿದೆ.
- ದುಷ್ಕರ್ಮಿಗಳು, ಅವರ ಸಹಯೋಗಿಗಳು ಮತ್ತು ಅವರ ಪ್ರಾಯೋಜಕರನ್ನು ಗುರುತಿಸಿ ತಡವಿಲ್ಲದೆ ನ್ಯಾಯದ ಕಟಕಟೆಗೆ ತರಲು ಈ ಘಟನೆಯ ತನಿಖೆಯನ್ನು ಅತ್ಯಂತ ತುರ್ತು ಮತ್ತು ವೃತ್ತಿಪರತೆಯಿಂದ ಮುಂದುವರಿಸಬೇಕು ಎಂದು ಸಂಪುಟ ನಿರ್ದೇಶಿಸಿದೆ. ಸರ್ಕಾರದ ಉನ್ನತ ಮಟ್ಟದಲ್ಲಿ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ.
- ರಾಷ್ಟ್ರೀಯ ಭದ್ರತೆ ಮತ್ತು ಪ್ರತಿಯೊಬ್ಬ ನಾಗರಿಕರ ಸುರಕ್ಷತೆಗೆ ತನ್ನ ನಿರಂತರ ಬದ್ಧತೆಗೆ ಅನುಗುಣವಾಗಿ, ಎಲ್ಲಾ ಭಾರತೀಯರ ಜೀವನ ಮತ್ತು ಯೋಗಕ್ಷೇಮವನ್ನು ರಕ್ಷಿಸುವ ಸರ್ಕಾರದ ದೃಢ ಸಂಕಲ್ಪವನ್ನು ಸಂಪುಟವು ಪುನರುಚ್ಚರಿಸುತ್ತದೆ.







**ನಮ್ಮ ತನಿಖಾ ಸಂಸ್ಥೆಗಳು ಈ ಪಿತೂರಿಯ ಆಳಕ್ಕೆ ಹೋಗುತ್ತವೆ, ಅದರ ಹಿಂದಿನ ಅಪರಾಧಿಗಳನ್ನು ಬಿಡುವುದಿಲ್ಲ.**

**ನರೇಂದ್ರ ಮೋದಿ, ಪ್ರಧಾನಮಂತ್ರಿ**

*(ಭೂತಾನ್ ನಲ್ಲಿ ನಡೆದ ಕಾರ್ಯಕ್ರಮವೊಂದರ ಸಮಯದಲ್ಲಿ)*

ತಂಡಗಳು ಸ್ಥಳಕ್ಕೆ ಆಗಮಿಸಿವೆ. ಕೇಂದ್ರ ಗೃಹ ಸಚಿವರಾದ ಅಮಿತ್ ಶಾ ತಕ್ಷಣ ಕಾರ್ಯಪ್ರವೃತ್ತರಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಘಟನೆಯ ಬಗ್ಗೆ ಮಾಹಿತಿ ನೀಡಿದರು. ಪರಿಸ್ಥಿತಿಯ ಸೂಕ್ಷ್ಮತೆಯನ್ನು ಗಮನದಲ್ಲಿಟ್ಟುಕೊಂಡು, ಕೇಂದ್ರ ಗೃಹ ಸಚಿವರಾದ ಅಮಿತ್ ಶಾ ಈ ಘಟನೆಯನ್ನು ಎಲ್ಲಾ ಕೋನಗಳಿಂದ ತನಿಖೆ ನಡೆಸಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು. ಗೃಹ ಸಚಿವರು ತಕ್ಷಣ ಆಸ್ಪತ್ರೆಗೆ ತೆರಳಿ ಗಾಯಾಳುಗಳನ್ನು ಭೇಟಿ ಮಾಡಿದರು ಮತ್ತು ಅಲ್ಲಿಂದ ನೇರವಾಗಿ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿಯನ್ನು ಪರಿಶೀಲಿಸಿದರು. ಭೂತಾನ್‌ನಿಂದ ಹಿಂದಿರುಗಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಗಾಯಾಳುಗಳನ್ನು ಭೇಟಿ ಮಾಡಲು ನೇರವಾಗಿ ಆಸ್ಪತ್ರೆಗೆ ತೆರಳಿದರು ಮತ್ತು ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಲಾಗುವುದು ಎಂದು ಪುನರುಚ್ಚರಿಸಿದರು. ●

**ವಂದೇ ಮಾತರಂನ 150 ವರ್ಷಗಳ ಸ್ಮರಣೆ**

# ವಂದೇ ಮಾತರಂ....
# ಸ್ವಾತಂತ್ರ್ಯ ಹೋರಾಟಗಾರರ ಗೀತೆ

*ವಂದೇ ಮಾತರಂ - "ತಾಯಿ, ನಿನಗೆ ನಮಸ್ಕರಿಸುತ್ತೇನೆ" - ಈ ಪದಗಳು ಒಂದು ಮಂತ್ರ, ಶಕ್ತಿ ಮತ್ತು ದಿವ್ಯ ಸಂಕಲ್ಪ. ಇದು ನಮ್ಮ ವರ್ತಮಾನದಲ್ಲಿ ಆತ್ಮವಿಶ್ವಾಸವನ್ನು ತುಂಬುತ್ತದೆ ಮತ್ತು ಭವಿಷ್ಯಕ್ಕಾಗಿ ಹೊಸ ಧೈರ್ಯವನ್ನು ತುಂಬುತ್ತದೆ, ನಾವು ಭಾರತೀಯರು ಸಾಧಿಸಲು ಸಾಧ್ಯವಾಗದ ಯಾವುದೇ ಸಂಕಲ್ಪ ಅಥವಾ ಗುರಿ ಇಲ್ಲ ಎಂದು ನಂಬುತ್ತೇವೆ. ಪ್ರತಿರೋಧ ಮತ್ತು ದೇಶಭಕ್ತಿಯ ಸಂಕೇತವಾದ ವಂದೇ ಮಾತರಂನ 150 ನೇ ವಾರ್ಷಿಕೋತ್ಸವದ ವರ್ಷಪೂರ್ತಿ ಆಚರಣೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ನವೆಂಬರ್ 7 ರಂದು ನವದೆಹಲಿಯಲ್ಲಿ ಉದ್ಘಾಟಿಸಿದರು...*

ಐಕ್ಯತೆ, ಪ್ರತಿರೋಧ ಮತ್ತು ರಾಷ್ಟ್ರೀಯ ಹೆಮ್ಮೆಯ ಶಾಶ್ವತ ಪರಂಪರೆಯಾದ ವಂದೇ ಮಾತರಂನ 150ನೇ ವಾರ್ಷಿಕೋತ್ಸವವನ್ನು ನವೆಂಬರ್ 7, 2026 ರವರೆಗೆ ಆಚರಿಸಲಾಗುವುದು. ಈ ಗೀತೆಯ ಮಹತ್ವವನ್ನು ಸ್ಮರಿಸಲು ನವೆಂಬರ್ 7, 2025 ರಿಂದ ದೇಶಾದ್ಯಂತ ಹಲವಾರು ಚಟುವಟಿಕೆಗಳನ್ನು ಆಯೋಜಿಸಲಾಗುತ್ತಿದೆ. ಮುಖ್ಯ ಕಾರ್ಯಕ್ರಮದ ಜೊತೆಗೆ, "ವಂದೇ ಮಾತರಂ"ನ ಪೂರ್ಣ ಆವೃತ್ತಿಯನ್ನು ದೇಶಾದ್ಯಂತ ಸಾರ್ವಜನಿಕ ಸ್ಥಳಗಳಲ್ಲಿ ಏಕಕಾಲದಲ್ಲಿ ಹಾಡಲಾಯಿತು. ಈ ಆಚರಣೆಗಳು ಇಂದಿನ ಭಾರತಕ್ಕಾಗಿ ವಂದೇ ಮಾತರಂನ ಚೈತನ್ಯವನ್ನು ಪುನರುಜ್ಜೀವನಗೊಳಿಸಲು ಮತ್ತು ರಾಷ್ಟ್ರದ ವೈಭವಯುತ ಭೂತಕಾಲವನ್ನು ಅದರ ಒಗ್ಗಟ್ಟಿನ, ಸ್ವಾವಲಂಬಿ ಮತ್ತು ಸಾಂಸ್ಕೃತಿಕವಾಗಿ ಶ್ರೀಮಂತ ಭವಿಷ್ಯದ ಆಕಾಂಕ್ಷೆಗಳೊಂದಿಗೆ ಸಂಪರ್ಕಿಸಲು ಪ್ರಯತ್ನಿಸುತ್ತವೆ. ಭಾರತ ಸರ್ಕಾರವು ಈ ಉತ್ಸವವನ್ನು ನಾಲ್ಕು ಹಂತಗಳಲ್ಲಿ ಆಚರಿಸಲಿದೆ.

ವರ್ಷವಿಡೀ ನಡೆಯುವ ಈ ಸ್ಮರಣಾರ್ಥ ಕಾರ್ಯಕ್ರಮವನ್ನು ಉದ್ಘಾಟಿಸುತ್ತಾ, ಪ್ರಧಾನಿ ನರೇಂದ್ರ ಮೋದಿ ಅವರು, ರಾಷ್ಟ್ರವನ್ನು ಕೇವಲ ಭೌಗೋಳಿಕ ರಾಜಕೀಯ ಘಟಕವಾಗಿ ನೋಡುವವರಿಗೆ 'ತಾಯಿ' ಎಂಬ ಕಲ್ಪನೆಯು ಆಶ್ಚರ್ಯಕರವಾಗಿ ಕಾಣಿಸಬಹುದು, ಆದರೆ ಭಾರತವು ವಿಭಿನ್ನವಾಗಿದೆ ಎಂಬ ಸಂದೇಶವನ್ನು ತಿಳಿಸಿದರು. ಭಾರತದಲ್ಲಿ, 'ತಾಯಿ' ಎಂದರೆ ತನ್ನ ಮಗುವಿಗೆ ಜನ್ಮ ನೀಡುವ, ಪೋಷಿಸುವ ಮತ್ತು ಎಲ್ಲಾ ಪ್ರತಿಕೂಲತೆಗಳನ್ನು ಮೀರಿ ಮೇಲೇರುವವಳು. ತಾಯಿ ಭಾರತಿ ಅಪಾರ ಶಕ್ತಿಯನ್ನು ಹೊಂದಿದ್ದಾಳೆ, ಪ್ರತಿಕೂಲ ಪರಿಸ್ಥಿತಿಯಲ್ಲಿ ನಮ್ಮನ್ನು ಮುನ್ನಡೆಸುತ್ತಾಳೆ ಮತ್ತು ನಮ್ಮ ಶತ್ರುಗಳನ್ನು ನಾಶಮಾಡುತ್ತಾಳೆ. ರಾಷ್ಟ್ರವನ್ನು ತಾಯಿಯಾಗಿ ಮತ್ತು ತಾಯಿಯನ್ನು ಶಕ್ತಿಯ ದೈವಿಕ ರೂಪವಾಗಿ ಕಾಣುವ ಕಲ್ಪನೆಯು ಪುರುಷರು ಮತ್ತು ಮಹಿಳೆಯರ ಸಮಾನ ಭಾಗವಹಿಸುವಿಕೆಯನ್ನು





## ವಂದೇ ಮಾತರಂ ರಾಷ್ಟ್ರೀಯಗೀತೆಯಾಗಿ ರೂಪುಗೊಂಡಿದ್ದು ಹೀಗೆ

ಭಾರತದ ರಾಷ್ಟ್ರೀಯ ಗೀತೆ ವಂದೇ ಮಾತರಂ... ಅಮರ ರಾಷ್ಟ್ರೀಯ ಗೀತೆಯಾಗಿರುವ ಈ ಸಂಯೋಜನೆಯು ಅಸಂಖ್ಯಾತ ತಲೆಮಾರುಗಳ ಸ್ವಾತಂತ್ರ್ಯ ಹೋರಾಟಗಾರರು ಮತ್ತು ರಾಷ್ಟ್ರ ನಿರ್ಮಾತೃಗಳಿಗೆ ಸ್ಫೂರ್ತಿ ನೀಡಿದೆ. ಇದು ರಾಷ್ಟ್ರೀಯ ಗುರುತು ಮತ್ತು ಸಾಮೂಹಿಕ ಮನೋಭಾವದ ಶಾಶ್ವತ ಸಂಕೇತವಾಗಿದೆ. 'ವಂದೇ ಮಾತರಂ' ಅನ್ನು ಮೊದಲು ನವೆಂಬರ್ 7, 1875 ರಂದು ಸಾಹಿತ್ಯ ನಿಯತಕಾಲಿಕೆ ಬಂಗದರ್ಶನ್ ದಲ್ಲಿ ಪ್ರಕಟಿಸಲಾಯಿತು. ನಂತರ, ಇದರ ಲೇಖಕ ಬಂಕಿಮಚಂದ್ರ ಚಟರ್ಜಿ ಇದನ್ನು ತಮ್ಮ ಕಾದಂಬರಿ 'ಆನಂದಮಠ'ದಲ್ಲಿ ಸೇರಿಸಿದರು. ರವೀಂದ್ರನಾಥ ಟ್ಯಾಗೋರ್ ಇದಕ್ಕೆ ಸಂಗೀತ ಸಂಯೋಜಿಸಿದರು. ಜನವರಿ 24, 1950 ರಂದು, ಡಾ. ರಾಜೇಂದ್ರ ಪ್ರಸಾದ್ ಅವರು ಸಂವಿಧಾನ ಸಭೆಯಲ್ಲಿ ಒಂದು ಹೇಳಿಕೆ ನೀಡಿದರು: "'ಜನ ಗಣ ಮನ'ಎಂಬ ಶೀರ್ಷಿಕೆಯ ಪದಗಳು ಮತ್ತು ಸಂಗೀತವನ್ನು ಒಳಗೊಂಡಿರುವ ಸಂಯೋಜನೆಯು ಭಾರತದ ರಾಷ್ಟ್ರಗೀತೆಯಾಗಿದ್ದು, ಸರ್ಕಾರವು ಸಂದರ್ಭಾನುಸಾರವಾಗಿ ಅನುಮತಿಸಬಹುದಾದ ಪದಗಳಲ್ಲಿ ಬದಲಾವಣೆಗಳಿಗೆ ಒಳಪಟ್ಟಿರುತ್ತದೆ; ಮತ್ತು ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಐತಿಹಾಸಿಕ ಪಾತ್ರ ವಹಿಸಿದ 'ವಂದೇ ಮಾತರಂ' ಗೀತೆಯನ್ನು ಜನ ಗಣ ಮನದೊಂದಿಗೆ ಸಮಾನವಾಗಿ ಗೌರವಿಸಲಾಗುತ್ತದೆ ಮತ್ತು ಅದರೊಂದಿಗೆ ಸಮಾನ ಸ್ಥಾನಮಾನವನ್ನು ಹೊಂದಿರುತ್ತದೆ. ಇದು ಸದಸ್ಯರಿಗೆ ತೃಪ್ತಿ ನೀಡುತ್ತದೆ ಎಂದು ನಾನು ಭಾವಿಸುತ್ತೇನೆ." ಅವರ ಹೇಳಿಕೆಯನ್ನು ಅಂಗೀಕರಿಸಲಾಯಿತು ಮತ್ತು ರವೀಂದ್ರನಾಥ ಟ್ಯಾಗೋರ್ ಅವರ 'ಜನ ಗಣ ಮನ'ವನ್ನು ಸ್ವತಂತ್ರ ಭಾರತದ ರಾಷ್ಟ್ರಗೀತೆಯಾಗಿ ಮತ್ತು ಬಂಕಿಮಚಂದ್ರ ಅವರ 'ವಂದೇ ಮಾತರಂ' ಅನ್ನು ರಾಷ್ಟ್ರೀಯ ಗೀತೆಯಾಗಿ ಅಂಗೀಕರಿಸಲಾಯಿತು.

**ವಂದೇ ಮಾತರಂ, ಸ್ವಾತಂತ್ರ್ಯ ಹೋರಾಟದ ಹುತಾತ್ಮರ ಗೀತೆಯಾಗಿರುವುದರ ಜೊತೆಗೆ, ನಿರಂತರ ಸ್ಫೂರ್ತಿಯ ಮೂಲವೂ ಆಗಿದೆ. ಇದು ನಾವು ನಮ್ಮ ಸ್ವಾತಂತ್ರ್ಯವನ್ನು ಹೇಗೆ ಸಾಧಿಸಿದ್ದೇವೆ ಎಂಬುದನ್ನು ನೆನಪಿಸುವುದಲ್ಲದೆ, ಅದನ್ನು ಹೇಗೆ ರಕ್ಷಿಸಬೇಕು ಎಂಬುದನ್ನು ಸಹ ನಮಗೆ ಹೇಳುತ್ತದೆ. ರಾಷ್ಟ್ರಧ್ವಜವನ್ನು ಹಾರಿಸಿದಾಗಲೆಲ್ಲಾ, ಈ ಪದಗಳು ನಮ್ಮ ಹೃದಯದಿಂದ ಸ್ವಯಂಪ್ರೇರಿತವಾಗಿ ಹೊರಹೊಮ್ಮುತ್ತವೆ:**
**ಭಾರತ್ ಮಾತಾ ಕಿ ಜೈ! ವಂದೇ ಮಾತರಂ!**

**- ನರೇಂದ್ರ ಮೋದಿ, ಪ್ರಧಾನಮಂತ್ರಿ**



ಬಯಸುವ ಸ್ವಾತಂತ್ರ್ಯ ಚಳವಳಿಗೆ ಪ್ರೇರಣೆ ನೀಡಿತು.

ಈ ದೃಷ್ಟಿಕೋನವು ಭಾರತವನ್ನು ಮತ್ತೊಮ್ಮೆ ರಾಷ್ಟ್ರ ನಿರ್ಮಾಣದಲ್ಲಿ ನಾರಿ ಶಕ್ತಿ ಮುಂಚೂಣಿಯಲ್ಲಿರುವ ರಾಷ್ಟ್ರದ ಕನಸು ಕಾಣುವಂತೆ ಮಾಡಿದೆ ಎಂದು ಪ್ರಧಾನಿ ಮೋದಿ ಹೇಳುತ್ತಾರೆ.

ಬಂಕಿಮ್ ಚಂದ್ರ ಚಟ್ಟೋಪಾಧ್ಯಾಯ ಅವರ ಮೂಲ ಹಾಡಿನ ಸಾಲುಗಳನ್ನು ಉಲ್ಲೇಖಿಸಿ: "ತ್ವಂ ಹಿ ದುರ್ಗಾ, ಜ್ಞಾನದ ಭಕ್ತೆ, ಕಮಲದ ದಳಗಳನ್ನು ಹೊಂದಿರುವವಳು, ಜ್ಞಾನವನ್ನು ನೀಡುವವಳು, ಸಮೃದ್ಧಿಯನ್ನು ನೀಡುವವಳು, ಲಕ್ಷ್ಮಿ ಮತ್ತು ದುರ್ಗೆ, ಆಯುಧಗಳು ಮತ್ತು ಶಾಸ್ತ್ರಗಳನ್ನು ಹೊಂದಿರುವವಳು." ಭಾರತ ಮಾತೆಯೂ ಸಹ ಜ್ಞಾನವನ್ನು ನೀಡುವ ಸರಸ್ವತಿ, ಸಮೃದ್ಧಿಯನ್ನು ನೀಡುವ ಲಕ್ಷ್ಮಿ ಮತ್ತು ಆಯುಧಗಳು ಮತ್ತು ಶಾಸ್ತ್ರಗಳನ್ನು ಹೊಂದಿರುವ ದುರ್ಗೆ ಎಂದು ಪ್ರಧಾನಿ ಮೋದಿ ವಿವರಿಸಿದರು. ಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿರುವ, ಜ್ಞಾನ ಮತ್ತು ವಿಜ್ಞಾನದ ಶಕ್ತಿಯ ಮೂಲಕ ಸಮೃದ್ಧಿಯ ಶಿಖರದಲ್ಲಿರುವ ಮತ್ತು ದೇಶದ ಭದ್ರತೆಗಾಗಿ ಸ್ವಾವಲಂಬಿಯಾಗಿರುವ ದೇಶವನ್ನು ನಾವು ನಿರ್ಮಿಸಬೇಕು ಎಂದು ಅವರು ಹೇಳಿದರು. ನವೆಂಬರ್ 7ರಂದು ಸೇನಾ ಸಿಬ್ಬಂದಿಗೆ ಒಂದು ಶ್ರೇಣಿ, ಒಂದು ಪಿಂಚಣಿ ಜಾರಿಗೆ ಬಂದ 11ನೇ ವರ್ಷಾಚರಣೆಯೂ ನಡೆಯಿತು. ನಮ್ಮ ಪಡೆಗಳು ಶತ್ರುಗಳ ದುಷ್ಟ ಯೋಜನೆಗಳನ್ನು ವಿಫಲಗೊಳಿಸಿದಾಗ, ಭಯೋತ್ಪಾದನೆ, ನಕ್ಸಲಿಸಂ ಮತ್ತು ಮಾವೋವಾದಿ ದಂಗೆಯನ್ನು ಹತ್ತಿಕ್ಕಿದಾಗ, ದೇಶದ ಭದ್ರತಾ ಪಡೆಗಳು ಒಂದೇ ಮಂತ್ರದಿಂದ ಪ್ರೇರಿತವಾಗುತ್ತವೆ: ವಂದೇ ಮಾತರಂ.



*ಪ್ರಧಾನಮಂತ್ರಿಯವರ ಸಂಪೂರ್ಣ ಕಾರ್ಯಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.*

# ಸಹಕಾರಿ ಸಂಸ್ಥೆಗಳು

## ಸಮೃದ್ಧ ಸಮಾಜದ ಪೋಷಕರು

2025
International Year of Cooperatives
Cooperatives Build a Better World



**अल्पानाम् अपि वस्तूनाम्,**
**संहतिः कार्य साधिका।।**

*ಅಂದರೆ, ಸಣ್ಣ ವಿಷಯಗಳು, ಪುಟ್ಟ ಸಂಪನ್ಮೂಲಗಳು, ಒಟ್ಟಾಗಿ ಕೆಲಸ ಮಾಡಿದಾಗ, ಉತ್ತಮ ಫಲಿತಾಂಶಗಳನ್ನು ಸಾಧಿಸಬಹುದು. ನಮ್ಮ ಧರ್ಮಗ್ರಂಥಗಳ ಈ ಶ್ಲೋಕವು ಭಾರತದಲ್ಲಿ ಅಭಿವೃದ್ಧಿಪಡಿಸಲಾದ ಪ್ರಾಚೀನ ಸಹಕಾರ ವ್ಯವಸ್ಥೆಯಲ್ಲಿ ಅತ್ಯಂತ ಮಹತ್ವವುಳ್ಳದ್ದಾಗಿದೆ. ವಿಶ್ವದ ಸಹಕಾರಿ ಸಂಸ್ಥೆಗಳಲ್ಲಿ ಕಾಲು ಭಾಗ ಭಾರತದಲ್ಲಿ ಅಸ್ತಿತ್ವದಲ್ಲಿದೆ ಮತ್ತು ಭಾರತದ ಗ್ರಾಮೀಣ ಜನಸಂಖ್ಯೆಯ ಸುಮಾರು ಮೂರನೇ ಒಂದು ಭಾಗದಷ್ಟು ಜನರು ತಮ್ಮ ಸಾಮಾಜಿಕ ಮತ್ತು ಆರ್ಥಿಕ ಅಗತ್ಯಗಳಿಗಾಗಿ ಅವುಗಳಲ್ಲಿ ನೇರವಾಗಿ ತೊಡಗಿಸಿಕೊಂಡಿದ್ದಾರೆ. ಕಳೆದ ಕೆಲವು ವರ್ಷಗಳಲ್ಲಿ, ಕೇಂದ್ರ ಸರ್ಕಾರವು ದಶಕಗಳಿಂದ ಭಾರತೀಯ ಸಂಸ್ಕೃತಿಯೊಂದಿಗೆ ವಿಶೇಷ ಸಹಜೀವನವನ್ನು ಹೊಂದಿರುವ ಸಹಕಾರಿ ವಲಯದಲ್ಲಿ ಆಮೂಲಾಗ್ರ ಬದಲಾವಣೆಗಳನ್ನು ತಂದಿದೆ ಮತ್ತು ಹೊಸ ಶಕ್ತಿಯನ್ನು ತುಂಬಿದೆ. ಇದರ ಪರಿಣಾಮವಾಗಿ, ಸಹಕಾರಿ ಆಧಾರಿತ ಆರ್ಥಿಕ ಮಾದರಿಯು ಭಾರತದ ಬೆಳವಣಿಗೆಯ ಪ್ರಮುಖ ಎಂಜಿನ್ ಆಗಿ ಮಾರ್ಪಟ್ಟಿದೆ, 2047ರ ವೇಳೆಗೆ ವಿಕಸಿತ ಭಾರತದ ಗುರಿಯನ್ನು ಸಾಕಾರಗೊಳಿಸುತ್ತಿದೆ.*

ಅಂತಾರಾಷ್ಟ್ರೀಯ ಸಹಕಾರಿ ವರ್ಷ 2025ಕ್ಕೆ ತೆರೆ ಬೀಳುತ್ತಿರುವ ಈ ಸಂದರ್ಭದಲ್ಲಿ, ಎರಡು ಭಾರತೀಯ ಸಹಕಾರಿ ಸಂಸ್ಥೆಗಳಾದ ಅಮುಲ್ ಮತ್ತು ಇಫ್ಕೊ ವಿಶ್ವದ ಅಗ್ರ 10 ಸಹಕಾರಿ ಸಂಸ್ಥೆಗಳಲ್ಲಿ ಕ್ರಮವಾಗಿ ಮೊದಲ ಮತ್ತು ಎರಡನೇ ಸ್ಥಾನ ಪಡೆದಿವೆ ಎಂಬುದಕ್ಕಿಂತ ಹೆಚ್ಚು ಹೆಮ್ಮೆಪಡುವ ಸಂಗತಿ ಮತ್ತೊಂದೇನಿದೆ. ಅಮುಲ್ ಅನ್ನು ಡಿಸೆಂಬರ್ 14, 1946 ರಂದು ತ್ರಿಭುವನ್ ದಾಸ್ ಪಟೇಲ್ ಅವರ ನೇತೃತ್ವದಲ್ಲಿ ನೋಂದಾಯಿಸಲಾಯಿತು. ಈ ಗಮನಾರ್ಹ ಸಾಧನೆಗಳನ್ನು ಸಾಧಿಸಿದ ನಂತರ, 2047ರ ವೇಳೆಗೆ ವಿಕಸಿತ ಭಾರತದ ಕನಸನ್ನು ನನಸಾಗಿಸಲು ಕೇಂದ್ರ ಸರ್ಕಾರವು ನೀತಿ ಸುಧಾರಣೆಗಳು ಮತ್ತು ಉಪಕ್ರಮಗಳ ಮೂಲಕ ಸಹಕಾರಿ ಚಳವಳಿಯನ್ನು ಹೇಗೆ ಸಾಂಸ್ಥಿಕಗೊಳಿಸಿದೆ ಎಂಬುದನ್ನು ನೋಡೋಣ.





## ಭಾರತಕ್ಕೆ ಹೆಮ್ಮೆಯ ಕ್ಷಣ!

"ವಿಶ್ವದ ಅಗ್ರ ಹತ್ತು ಸಹಕಾರಿ ಸಂಸ್ಥೆಗಳಲ್ಲಿ ಮೊದಲ ಎರಡು ಸ್ಥಾನಗಳನ್ನು ಪಡೆದುಕೊಂಡಿದ್ದಕ್ಕಾಗಿ ಅಮುಲ್ ಮತ್ತು ಇಫ್ಕೊಗೆ ಹೃತ್ಪೂರ್ವಕ ಅಭಿನಂದನೆಗಳು. ಅಮುಲ್ ನೊಂದಿಗೆ ಸಂಬಂಧ ಹೊಂದಿರುವ ಲಕ್ಷಾಂತರ ಮಹಿಳೆಯರು ಮತ್ತು ಇಫ್ಕೊಗೆ ಕೊಡುಗೆ ನೀಡುವ ರೈತರ ದಣಿವರಿಯದ ಸಮರ್ಪಣೆಗೆ ಸಂದ ಗೌರವ ಇದಾಗಿದೆ. ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ಸಬಲೀಕರಣ ಮತ್ತು ಸ್ವಾವಲಂಬನೆಯ ಜಾಗತಿಕ ಮಾದರಿಯಾಗಿ ಪರಿವರ್ತಿಸುತ್ತಿರುವ ಸಹಕಾರಿ ಸಂಸ್ಥೆಗಳ ಅಗಾಧ ಸಾಮರ್ಥ್ಯಕ್ಕೂ ಇದು ಸಾಕ್ಷಿಯಾಗಿದೆ."

ಕೇಂದ್ರ ಸಹಕಾರ ಸಚಿವರ ಹುದ್ದೆಯನ್ನು ಅಲಂಕರಿಸಿದ ಮೊದಲ ವ್ಯಕ್ತಿ ಅಮಿತ್ ಶಾ ಅವರು ನವೆಂಬರ್ 4 ರಂದು ನೀಡಿದ ಈ ಸಂದೇಶವು ಭಾರತೀಯ ಸಂಸ್ಕೃತಿಯ ತಿರುಳಿನಲ್ಲಿರುವ ಸಹಕಾರಕ್ಕೆ ಹೊಸ ಶಕ್ತಿಯನ್ನು ತುಂಬಿತು... ಸಹಕಾರದ ಮೂಲಭೂತ ಭಾರತೀಯ ಕಲ್ಪನೆಯ ವಿಶಾಲತೆಯ ದೃಷ್ಟಿ... ಸಾಮೂಹಿಕತೆಯ ಶಕ್ತಿಯ ಅದ್ಭುತ ಪ್ರದರ್ಶನ... ಭಾರತೀಯತೆಯಿಂದ ತುಂಬಿದ ಜೀವನಶೈಲಿಯ ಪರಿಚಯ... ಸಹಕಾರದ ಮೂಲಕ ಸಮೃದ್ಧಿಯ ಅದ್ಭುತ ಮಂತ್ರ. ಈ ಎರಡು ಸಾಧನೆಗಳು ಕಳೆದ ವರ್ಷ ಫೆಬ್ರವರಿ 22 ರಂದು ನಡೆದ ಅಮುಲ್ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಹಂಚಿಕೊಂಡ ಸಂಕಲ್ಪದ ನೆರವೇರಿಕೆಯನ್ನು ಸಹ ಗುರುತಿಸುತ್ತವೆ: "ಇಂದು, ಅಮುಲ್ ವಿಶ್ವದ ಎಂಟನೇ ಅತಿದೊಡ್ಡ ಡೈರಿ ಕಂಪನಿಯಾಗಿದೆ. ನೀವು ಅದನ್ನು ಸಾಧ್ಯವಾದಷ್ಟು ಬೇಗ ವಿಶ್ವದ ಅತಿದೊಡ್ಡ ಡೈರಿ ಕಂಪನಿಯನ್ನಾಗಿ ಮಾಡಬೇಕು. ಸರ್ಕಾರವು ನಿಮಗೆ ಎಲ್ಲ ರೀತಿಯ ಬೆಂಬಲ ನೀಡುತ್ತದೆ ಮತ್ತು ಇದು ಮೋದಿಯವರ ಭರವಸೆ." ಪ್ರಧಾನಿ ಮೋದಿಯವರ ಸಂಕಲ್ಪ ಎರಡು ವರ್ಷದೊಳಗೆ ಈಡೇರಿದೆ, ಇದು ಕೆಲವೇ ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದ ಸಹಕಾರ ಸಚಿವಾಲಯವು ಸಹಕಾರಿ ಕ್ಷೇತ್ರಕ್ಕೆ ಹೇಗೆ ಹೊಸ ದಿಕ್ಕನ್ನು ನೀಡಿದೆ ಎಂಬುದನ್ನು ತೋರಿಸುತ್ತದೆ. ಇದರ ಪರಿಣಾಮವಾಗಿ, ಎರಡು ಭಾರತೀಯ ಸಹಕಾರಿಗಳು ವಿಶ್ವದ ಉನ್ನತ ಸ್ಥಾನಗಳನ್ನು ತಲುಪಿವೆ. ಈ ಸಾಧನೆಯನ್ನು ಶ್ಲಾಘಿಸಿದ ಪ್ರಧಾನಿ ನರೇಂದ್ರ ಮೋದಿ, "ಅಮುಲ್ ಮತ್ತು ಇಫ್ಕೊಗೆ ಅಭಿನಂದನೆಗಳು. ಭಾರತದ ಸಹಕಾರಿ ವಲಯವು ತುಂಬಾ ಶಕ್ತಿಯುತವಾಗಿದೆ ಮತ್ತು ಅನೇಕ ಜನರ ಜೀವನವನ್ನು ಬದಲಾಯಿಸುತ್ತಿದೆ. ಭವಿಷ್ಯದಲ್ಲಿ ಈ ವಲಯವನ್ನು ಮತ್ತಷ್ಟು ಪ್ರೋತ್ಸಾಹಿಸಲು ನಮ್ಮ ಸರ್ಕಾರ ಹಲವಾರು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ" ಎಂದು ಹೇಳಿದರು.

## ಸಹಕಾರದಿಂದ ಸಮೃದ್ಧಿ

### ರಾಷ್ಟ್ರೀಯ ಸಹಕಾರಿ ನೀತಿ 2025

- ಸಹಕಾರಿ ಕ್ಷೇತ್ರದ ತ್ವರಿತ, ಸಮಗ್ರ ಮತ್ತು ವ್ಯವಸ್ಥಿತ ಅಭಿವೃದ್ಧಿಗಾಗಿ ಒಂದು ಮಾರ್ಗಸೂಚಿ.
- ಗುರಿ: ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸುವುದು ಮತ್ತು ಯುವಜನರನ್ನು ತೊಡಗಿಸಿಕೊಳ್ಳುವುದು.

**50** ಕೋಟಿ ಜನರು 10 ವರ್ಷಗಳಲ್ಲಿ ಸಹಕಾರಿ ಚೌಕಟ್ಟಿಗೆ ಸೇರಲಿದ್ದು, ಅವರ ಆರ್ಥಿಕ ಕೊಡುಗೆ ಮೂರು ಪಟ್ಟು ಹೆಚ್ಚಾಗುತ್ತದೆ.

- ಪ್ರತಿಯೊಂದು ಜಿಲ್ಲೆಯು ಬಹುಪಯೋಗಿ ಪಿಎಸಿಎಸ್ ಆಧಾರಿತ ಮಾದರಿ ಸಹಕಾರಿ ಗ್ರಾಮವನ್ನು ಹೊಂದಿರುತ್ತದೆ.
- ಹೈನುಗಾರಿಕೆ ಸಹಕಾರ ಸಂಘಗಳ ಮೂಲಕ 'ಶ್ವೇತ ಕ್ರಾಂತಿ 2.0'. ಮಹಿಳಾ ಸಬಲೀಕರಣ ಮತ್ತು ಉದ್ಯೋಗವನ್ನು ಉತ್ತೇಜಿಸಲಾಗುವುದು.
- ದ್ವಿದಳ ಧಾನ್ಯಗಳು, ಎಣ್ಣೆಕಾಳುಗಳು, ಮೆಕ್ಕೆಜೋಳ ಮತ್ತು ಸಿರಿಧಾನ್ಯಗಳ ಉತ್ಪಾದನೆಯನ್ನು ಹೆಚ್ಚಿಸುವ ಮೂಲಕ ಆಹಾರ ಸ್ವಾವಲಂಬನೆಯನ್ನು ಉತ್ತೇಜಿಸುವುದು.

**10 ವರ್ಷಗಳ ಗುರಿ**

**6** ಮಿಷನ್ ಸ್ತಂಭಗಳು | **16** ಉದ್ದೇಶಗಳು | **82** ಕಾರ್ಯತಂತ್ರಗಳು

ಸಾಧಿಸಲಾಗುವುದು



***ಈಗ ಈ ಗಮನಾರ್ಹ ಸಾಧನೆಗಳನ್ನು ಉದಾಹರಣೆಗಳೊಂದಿಗೆ ಅರ್ಥಮಾಡಿಕೊಳ್ಳೋಣ...***

ಇಂದು, ಅಮುಲ್ ದೇಶದಲ್ಲಿ ಶ್ವೇತ ಕ್ರಾಂತಿಯ ಪ್ರವರ್ತಕವಾಗಿದೆ. 3.6 ಮಿಲಿಯನ್ ರೈತರು, 18,000 ಗ್ರಾಮ ಸಮಿತಿಗಳು ಮತ್ತು 18 ಜಿಲ್ಲಾ ಒಕ್ಕೂಟಗಳ ಜಾಲದ ಮೂಲಕ, ಅಮುಲ್ ದೇಶಾದ್ಯಂತ ಪ್ರತಿದಿನ 35 ಮಿಲಿಯನ್ ಲೀಟರ್ ಹಾಲು ಸಂಗ್ರಹಿಸುತ್ತದೆ. 2024-25ರಲ್ಲಿ, ಅಮುಲ್ ನ ವಹಿವಾಟು ₹90,000 ಕೋಟಿ ದಾಟಿದೆ, ಇದು ಶೇ.65 ರಷ್ಟು ಮಹಿಳೆಯರ ಭಾಗವಹಿಸುವಿಕೆಯೊಂದಿಗೆ 3.6 ಮಿಲಿಯನ್ ರೈತರು ಸಣ್ಣ



## ಹಳ್ಳಿ ಜನರು ಮತ್ತು ಬಡ ರೈತರ ಜೀವನವನ್ನು ಪರಿವರ್ತಿಸುತ್ತಿರುವ ಬದಲಾವಣೆಗಳು

- ಸಹಕಾರ ಸಚಿವಾಲಯವು ದೇಶಾದ್ಯಂತ ಬಡವರು, ರೈತರು ಮತ್ತು ಹಳ್ಳಿ ಜನರ ಜೀವನವನ್ನು ಪರಿವರ್ತಿಸುತ್ತಿದೆ.
- ರಫ್ತು ಸೊಸೈಟಿಯ ಮೂಲಕ, ರೈತರು ಸಾವಯವ ಗೋಧಿಗೆ ಗಮನಾರ್ಹವಾಗಿ ಹೆಚ್ಚಿನ ಬೆಲೆಗಳನ್ನು ಪಡೆಯುತ್ತಿದ್ದಾರೆ.
- ಪಿಎಸಿಎಸ್ ಅನ್ನು ಸಾಮಾನ್ಯ ಸೇವಾ ಕೇಂದ್ರಗಳು, ಮೈಕ್ರೋ ಎಟಿಎಂಗಳು, ಹರ್ ಘರ್ ನಲ್ ಮತ್ತು ಬ್ಯಾಂಕ್ ಮಿತ್ರ ಸೇರಿದಂತೆ 25 ಇತರ ಉಪಕ್ರಮಗಳೊಂದಿಗೆ ಸಂಯೋಜಿಸಲಾಗಿದೆ.
- ಪಿಎಸಿಎಸ್ ಬೈಲಾಗಳ ಪರಿಷ್ಕರಣೆಯ ನಂತರ, ದೇಶಾದ್ಯಂತ ಜಿಲ್ಲಾ ಸಹಕಾರಿ ಬ್ಯಾಂಕ್ ಇನ್ಸ್ಪೆಕ್ಟರ್ ಗಳ ತರಬೇತಿ ಪೂರ್ಣಗೊಂಡಿದೆ.
- ಜನೌಷಧಿ ಕೇಂದ್ರಗಳ ಸೇವೆಗಳನ್ನು ಒದಗಿಸುತ್ತಿರುವ ಪಿಎಸಿಎಸ್, ಕೈಗೆಟುಕುವ ಬೆಲೆಯಲ್ಲಿ ಔಷಧಿಗಳ ಲಭ್ಯತೆಯ ಬಗ್ಗೆ ಜಾಗೃತಿ ಮೂಡಿಸುತ್ತಿದೆ.

## ಸಹಕಾರಿ ಸಂಸ್ಥೆಗಳು ಕೇಂದ್ರಕ್ಕೆ ಪ್ರಮುಖ ಆದ್ಯತೆಯಾಗಿವೆ

- ದೇಶದಲ್ಲಿ ಮೊದಲ ಬಾರಿಗೆ ಸಹಕಾರಿ ಸಂಘಗಳ ದತ್ತಾಂಶ ಬ್ಯಾಂಕ್ ಅನ್ನು ರಚಿಸಲಾಗಿದೆ. ಈ ದತ್ತಾಂಶ ಸಂಗ್ರಹವು 30 ವಿವಿಧ ವಲಯಗಳ 8.44 ಲಕ್ಷ ಸಹಕಾರಿ ಸಂಘಗಳ ದತ್ತಾಂಶವನ್ನು ಒಳಗೊಂಡಿದೆ, ಇದರಲ್ಲಿ ಸುಮಾರು 32 ಕೋಟಿ ಸದಸ್ಯರು ಇದ್ದಾರೆ.
- ಸಹಕಾರಿ ಸಂಘಗಳಲ್ಲಿ ಮಹಾರಾಷ್ಟ್ರವು ಅತಿ ಹೆಚ್ಚು ಶೇ. 27 ರಷ್ಟು ಪಾಲನ್ನು ಹೊಂದಿದ್ದರೆ, ಗುಜರಾತ್ ನಂತರದ ಸ್ಥಾನದಲ್ಲಿ ಶೇ. 10 ರಷ್ಟು ಪಾಲನ್ನು ಹೊಂದಿದೆ.
- ಸಹಕಾರಿ ಸಂಘಗಳಲ್ಲಿ ವಸತಿ ಸಹಕಾರಿ ಸಂಘಗಳು ಅತಿ ಹೆಚ್ಚು ಶೇ.23 ಪಾಲನ್ನು ಹೊಂದಿವೆ, ನಂತರ ಡೈರಿ ಸಂಘಗಳು ಶೇ.18 ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು ಶೇ.13 ರಷ್ಟು ಪಾಲನ್ನು ಹೊಂದಿವೆ.

**ಶೇ.157**

ಜಮ್ಮು ಮತ್ತು ಕಾಶ್ಮೀರದಲ್ಲಿ ಸಹಕಾರಿ ಸಂಘಗಳ ಸಂಖ್ಯೆ ಏರಿಕೆಯಾಗಿದೆ. ಅವುಗಳು 2021 ರಲ್ಲಿದ್ದ 4,098 ರಿಂದ ಪ್ರಸ್ತುತ 10,535 ಕ್ಕೆ ಹೆಚ್ಚಳವಾಗಿವೆ.

*ಭಾರತದ ಜನಸಂಖ್ಯೆಯ ಶೇ.20 ಕ್ಕಿಂತ ಹೆಚ್ಚು ಜನರು ಒಂದಲ್ಲ ಒಂದು ರೂಪದಲ್ಲಿ ಸಹಕಾರಿ ಚಳವಳಿಯಲ್ಲಿ ತೊಡಗಿಸಿಕೊಂಡಿದ್ದಾರೆ, ಆದರೆ ಜಾಗತಿಕ ಸರಾಸರಿ ಕೇವಲ ಶೇ.12 ರಷ್ಟಿದೆ.*

ಕೊಡುಗೆಗಳೊಂದಿಗೆ ಇಷ್ಟು ವರ್ಷಗಳ ಕಾಲ ಇಷ್ಟು ದೊಡ್ಡ ಸಹಕಾರಿ ಸಂಘವನ್ನು ಯಶಸ್ವಿಯಾಗಿ ನಡೆಸುತ್ತಿದ್ದಾರೆ ಎಂಬುದನ್ನು ತೋರಿಸುತ್ತದೆ. ಇದು ದೇಶದಲ್ಲಿ ಸಹಕಾರಿ ಸಂಸ್ಥೆಗಳ ಅಗಾಧ ಸಾಮರ್ಥ್ಯವನ್ನು ತೋರಿಸುತ್ತದೆ. ಅಮುಲ್ ಬಗ್ಗೆ ಪ್ರಧಾನಿ ನರೇಂದ್ರ ಮೋದಿಯವರು ಹೀಗೆ ಹೇಳುತ್ತಾರೆ, "ಭಾರತ ಸ್ವಾತಂತ್ರ್ಯದ ನಂತರ, ದೇಶದಲ್ಲಿ ಅನೇಕ ಬ್ರ್ಯಾಂಡ್ ಗಳು ಸೃಷ್ಟಿಯಾದವು, ಆದರೆ ಅಮುಲ್ ನಂತಲ್ಲ. ಇಂದು, ಅಮುಲ್ ಭಾರತದ ಜಾನುವಾರು ರೈತರ ಶಕ್ತಿಯ ಸಂಕೇತವಾಗಿದೆ. ಅಮುಲ್ ಎಂದರೆ ನಂಬಿಕೆ. ಅಮುಲ್ ಎಂದರೆ ಅಭಿವೃದ್ಧಿ. ಅಮುಲ್ ಎಂದರೆ ಸಾರ್ವಜನಿಕ ಭಾಗವಹಿಸುವಿಕೆ. ಅಮುಲ್ ಎಂದರೆ ರೈತ ಸಬಲೀಕರಣ. ಅಮುಲ್ ಎಂದರೆ ಆಧುನಿಕತೆಯನ್ನು ಕಾಲದೊಂದಿಗೆ ಏಕೀಕರಿಸುವುದು. ಅಮುಲ್ ಎಂದರೆ ಸ್ವಾವಲಂಬಿ ಭಾರತಕ್ಕೆ ಸ್ಫೂರ್ತಿ. ಅಮುಲ್ ಎಂದರೆ ದೊಡ್ಡ ಕನಸುಗಳು, ದೊಡ್ಡ ಸಂಕಲ್ಪಗಳು ಮತ್ತು ಇನ್ನೂ ದೊಡ್ಡ ಸಾಧನೆಗಳು."

ಅದೇ ರೀತಿ, ಇಫ್ಕೋ ₹41,000 ಕೋಟಿ ವಹಿವಾಟು ಮತ್ತು ₹3,000 ಕೋಟಿ ಲಾಭವನ್ನು ವರದಿ ಮಾಡಿದೆ. ಇಫ್ಕೋ ದೇಶಾದ್ಯಂತ 35,000 ಸಹಕಾರಿ ಸಂಘಗಳನ್ನು ಹೊಂದಿರುವ ಬಹು-ರಾಜ್ಯ ಸಹಕಾರಿ ಸಂಘವಾಗಿದ್ದು, ಅವುಗಳಲ್ಲಿ ಹೆಚ್ಚಿನವು

# ಪಿಎಸಿಎಸ್ ಅನ್ನು ಬಹುಪಯೋಗಿ, ಬಹುಮುಖಿ ಮತ್ತು ಪಾರದರ್ಶಕವಾಗಿಸುವುದು

ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು (ಪಿಎಸಿಎಸ್) 130 ಮಿಲಿಯನ್ ಗಿಂತಲೂ ಹೆಚ್ಚು ರೈತ ಸದಸ್ಯರನ್ನು ಹೊಂದಿವೆ. ಪಿಎಸಿಎಸ್ ಅನ್ನು ಬಹುಪಯೋಗಿ, ಬಹುಮುಖಿ ಮತ್ತು ಪಾರದರ್ಶಕ ಸಂಸ್ಥೆಯನ್ನಾಗಿ ಮಾಡಲು ಮಾದರಿ ಬೈಲಾಗಳನ್ನು ಅಭಿವೃದ್ಧಿಪಡಿಸಲಾಗಿದೆ. ಪಿಎಸಿಎಸ್ ಸದಸ್ಯತ್ವವನ್ನು ವಿಸ್ತರಿಸಲಾಗಿದೆ ಮತ್ತು ಮಹಿಳೆಯರು ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡ ಸಮುದಾಯಗಳಿಗೆ ಪ್ರಾತಿನಿಧ್ಯವನ್ನು ಒದಗಿಸುವ ಮೂಲಕ ಹೆಚ್ಚು ಒಳಗೊಳ್ಳುವಂತೆ ಮಾಡಲಾಗಿದೆ. ಪಿಎಸಿಎಸ್ ಗಳನ್ನು 25 ಆರ್ಥಿಕ ಚಟುವಟಿಕೆಗಳಿಗೆ ಸಂಪರ್ಕಿಸುವ ಮೂಲಕ ಬಹು-ಸೇವಾ ಕೇಂದ್ರಗಳಾಗಿ ಪರಿವರ್ತಿಸಲಾಗುತ್ತಿದೆ. ಅವುಗಳು ಈಗ 300 ಕ್ಕೂ ಹೆಚ್ಚು ಸರ್ಕಾರಿ ಯೋಜನೆಗಳು ಮತ್ತು ಸೇವೆಗಳನ್ನು ನೀಡುತ್ತಿವೆ.

**ಇಲ್ಲಿಯವರೆಗೆ, 32 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಇದನ್ನು ಅಳವಡಿಸಿಕೊಂಡಿವೆ**

### ಗಣಕೀಕರಣವು ಪಿಎಸಿಎಸ್ ಗಳನ್ನು ಸಬಲೀಕರಣಗೊಳಿಸುತ್ತದೆ

**₹2,925** ಕೋಟಿ ಪಿಎಸಿಎಸ್ ಗಣಕೀಕರಣ ಯೋಜನೆಗೆ ಅನುಮೋದನೆ

**73,493** ಪಿಎಸಿಎಸ್ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ, ಇದರಲ್ಲಿ ಸುಮಾರು 60,000 ಪಿಎಸಿಎಸ್ ಭಾಗವಹಿಸಿವೆ. 30 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಹಾರ್ಡ್‌ವೇರ್ ಖರೀದಿಸಿವೆ.



### ಸಹಕಾರದ ವ್ಯಾಪ್ತಿಯೊಳಗೆ ಪಂಚಾಯತ್ ಮತ್ತು ಗ್ರಾಮ

ಎಲ್ಲಾ ಪಂಚಾಯತ್ ಗಳು ಮತ್ತು ಹಳ್ಳಿಗಳನ್ನು ಸಹಕಾರಿ ಸಂಸ್ಥೆಗಳ ವ್ಯಾಪ್ತಿಗೆ ತರಲು ಹೊಸ ಪಿಎಸಿಎಸ್, ಡೈರಿ ಮತ್ತು ಮೀನುಗಾರಿಕೆ ಸಹಕಾರ ಸಂಘಗಳನ್ನು ಸ್ಥಾಪಿಸುವ ಯೋಜನೆಯ ಕೆಲಸ ಪ್ರಾರಂಭವಾಗಿದೆ. ಫೆಬ್ರವರಿ 15, 2023 ರಂದು ಯೋಜನೆ ಪ್ರಾರಂಭವಾದಾಗಿನಿಂದ ಆಗಸ್ಟ್ 15, 2025 ರವರೆಗೆ ದೇಶಾದ್ಯಂತ ಒಟ್ಟು 24,417 ಹೊಸ ಪಿಎಸಿಎಸ್, ಡೈರಿ ಮತ್ತು ಮೀನುಗಾರಿಕೆ ಸಹಕಾರ ಸಂಘಗಳು ನೋಂದಾಯಿಸಲ್ಪಟ್ಟಿವೆ.

### ಸಹಕಾರಿ ವಲಯದಲ್ಲಿ ವಿಶ್ವದ ಅತಿದೊಡ್ಡ ಆಹಾರ ಧಾನ್ಯ ಸಂಗ್ರಹಣಾ ಯೋಜನೆ

- ಹಲವಾರು ಯೋಜನೆಗಳು ಮತ್ತು ಧ್ಯೇಯಗಳನ್ನು ಒಟ್ಟುಗೂಡಿಸಿ, ಧಾನ್ಯಗಳು ವ್ಯರ್ಥವಾಗುವುದನ್ನು ತಡೆಗಟ್ಟಲು ಮತ್ತು ಸಾರಿಗೆ ವೆಚ್ಚವನ್ನು ಕಡಿಮೆ ಮಾಡಲು ಪಿಎಸಿಎಸ್ ಮಟ್ಟದಲ್ಲಿ ಆಹಾರ ಧಾನ್ಯ ಸಂಗ್ರಹಣೆ ಗೋದಾಮುಗಳು, ಕಸ್ಟಮ್ ನೇಮಕಾತಿ ಕೇಂದ್ರಗಳು, ಪ್ರಾಥಮಿಕ ಸಂಸ್ಕರಣಾ ಘಟಕಗಳು ಮತ್ತು ಇತರ ಕೃಷಿ ಮೂಲಸೌಕರ್ಯಗಳಿಗಾಗಿ ಯೋಜನೆಯನ್ನು ಅನುಮೋದಿಸಲಾಗಿದೆ.
- ಪ್ರಾಯೋಗಿಕ ಯೋಜನೆಯ ಭಾಗವಾಗಿ 11 ರಾಜ್ಯಗಳ 11 ಪಿಎಸಿಎಸ್ ಗಳಲ್ಲಿ ಗೋದಾಮು ನಿರ್ಮಾಣ ಪೂರ್ಣಗೊಂಡಿವೆ. ಈಗ, ಈ ಉಪಕ್ರಮವನ್ನು ವಿಸ್ತರಿಸುತ್ತಾ, ಗೋದಾಮು ನಿರ್ಮಾಣಕ್ಕಾಗಿ 500 ಕ್ಕೂ ಹೆಚ್ಚು ಪಿಎಸಿಎಸ್ ಗಳನ್ನು ಗುರುತಿಸಲಾಗಿದೆ.
- ರಾಜ್ಯ ಸರ್ಕಾರ, ನ್ಯಾಫೆಡ್ ಮತ್ತು ಎನ್ ಸಿ ಸಿ ಎಫ್ ಗಳು 225 ಪಿಎಸಿಎಸ್ ಗಳಲ್ಲಿ ನಿರ್ಮಿಸಲಾಗುವ ಗೋದಾಮುಗಳಿಗೆ ಬಾಡಿಗೆಯನ್ನು ಖಚಿತಪಡಿಸಿವೆ. 129 ಇತರ ಪಿಎಸಿಎಸ್ ಗಳಲ್ಲಿ ನಿರ್ಮಾಣ ಕಾರ್ಯ ಪ್ರಾರಂಭವಾಗಿದೆ, ಅದರಲ್ಲಿ 65 ಪೂರ್ಣಗೊಂಡಿವೆ.
- ಆರ್ಥಿಕ ಕಾರ್ಯಸಾಧ್ಯತೆಯನ್ನು ಹೆಚ್ಚಿಸಲು, ನಿರ್ಮಾಣ ವೆಚ್ಚವನ್ನು ಕಡಿಮೆ ಮಾಡಲು ಮತ್ತು ಸಬ್ಸಿಡಿಗಳನ್ನು ಕಡಿಮೆ ಮಾಡಲು ಕೃಷಿ ಮಾರುಕಟ್ಟೆ ಮೂಲಸೌಕರ್ಯ (ಎಎಂಐ) ಯೋಜನೆಯಲ್ಲಿ ಸಣ್ಣ ಬದಲಾವಣೆಗಳನ್ನು ಮಾಡಲಾಗಿದೆ.

ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು (ಪಿಎಸಿಎಸ್) ಮತ್ತು ಮಾರುಕಟ್ಟೆ ಸಂಬಂಧಿತ ಸಂಘಗಳಾಗಿವೆ. ಈ ಸಂಘಗಳ ಮೂಲಕ 5 ಕೋಟಿಗೂ ಹೆಚ್ಚು ರೈತರು ಇಫ್ಕೋ ಸದಸ್ಯರಾಗಿದ್ದಾರೆ ಮತ್ತು ಇಂದು ಇಫ್ಕೋ ದೇಶದ ಹಸಿರು ಕ್ರಾಂತಿಯ ಆಧಾರಸ್ತಂಭವಾಗಿದ್ದು, 9.3 ಮಿಲಿಯನ್ ಮೆಟ್ರಿಕ್ ಟನ್ ಯೂರಿಯಾ ಮತ್ತು ಡಿಎಪಿ ಉತ್ಪಾದಿಸುತ್ತಿದೆ. ಇಫ್ಕೋ ದ ನ್ಯಾನೋ ಯೂರಿಯಾ ಮತ್ತು ನ್ಯಾನೋ ಡಿಎಪಿಗಳನ್ನು ಬ್ರೆಜಿಲ್, ಓಮನ್, ಅಮೆರಿಕ, ಜೋರ್ಡಾನ್ ಮತ್ತು ಪ್ರಪಂಚದಾದ್ಯಂತ ಇತರ 65 ದೇಶಗಳಿಗೆ ರಫ್ತು ಮಾಡಲಾಗುತ್ತಿದೆ.

ಅಂತಾರಾಷ್ಟ್ರೀಯ ಸಹಕಾರಿ ಒಕ್ಕೂಟ (ಐಸಿಎ) ಈಗ ಜಾಗತಿಕ ಶ್ರೇಯಾಂಕದಲ್ಲಿ ಅಮುಲ್ ಗೆ ಮೊದಲ ಸ್ಥಾನ ಮತ್ತು ಇಫ್ಕೋಗೆ ಎರಡನೇ ಸ್ಥಾನ ನೀಡಿದೆ, ಸಹಕಾರಿ ಪರಿಕಲ್ಪನೆ ಮತ್ತು ಸಂಸ್ಕೃತಿ ಇಂದಿಗೂ ಪ್ರಬಲವಾಗಿದೆ ಎಂಬುದನ್ನು ಇದು ಪ್ರದರ್ಶಿಸುತ್ತದೆ. ಇದಲ್ಲದೆ, ಭಾರತದ ಉರಾಲುಂಗಲ್ ಲೇಬರ್ ಕಾಂಟ್ರಾಕ್ಟ್ ಕೋಆಪರೇಟಿವ್ ಸೊಸೈಟಿ ಲಿಮಿಟೆಡ್ 2023 ರಲ್ಲಿ ಉದ್ಯಮಶೀಲ ಸಹಕಾರಿ ಪ್ರಶಸ್ತಿ ವಿಭಾಗದಲ್ಲಿ ಏಷ್ಯಾ ಪೆಸಿಫಿಕ್ ಕೋಆಪರೇಟಿವ್ ಎಕ್ಸಲೆನ್ಸ್ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಸಹಕಾರಿ ಸಂಸ್ಥೆಗಳ ಶಕ್ತಿಶಾಲಿ ಮತ್ತು ಸ್ಫೂರ್ತಿದಾಯಕ ಕಥೆಗಳ ಪಟ್ಟಿಗೆ ಅಂತ್ಯವಿಲ್ಲ

## ಸಾಮಾನ್ಯ ಸೇವಾ ಕೇಂದ್ರಗಳಾಗಿ ಪಿಎಸಿಎಸ್ ಗಳು

ಗ್ರಾಮೀಣ ಮಟ್ಟದಲ್ಲಿ ಪಿಎಸಿಎಸ್ ಗಳ ವ್ಯಾಪ್ತಿಯನ್ನು ಪರಿಗಣಿಸಿ, ಬ್ಯಾಂಕಿಂಗ್, ವಿಮೆ, ಆಧಾರ್ ದಾಖಲಾತಿ, ಆರೋಗ್ಯ ಸೇವೆಗಳು, ಪ್ಯಾನ್ ಕಾರ್ಡ್ ಸೇವೆಗಳು ಮತ್ತು ರೈಲ್ವೆ, ಬಸ್ ಮತ್ತು ವಿಮಾನ ಟಿಕೆಟ್ ಬುಕಿಂಗ್ ನಂತಹ 300ಕ್ಕೂ ಹೆಚ್ಚು ಸೇವೆಗಳನ್ನು ಒದಗಿಸಲು ಅನುವು ಮಾಡಿಕೊಡಲು ಬಹು-ಸಚಿವಾಲಯ ಮತ್ತು ಬಹು-ಏಜೆನ್ಸಿ ಒಪ್ಪಂದಕ್ಕೆ ಸಹಿ ಹಾಕಲಾಯಿತು. 10 ನವೆಂಬರ್ 2025ರ ಹೊತ್ತಿಗೆ, 50,355 ಪಿಎಸಿಎಸ್ ಗಳು ಗ್ರಾಮೀಣ ಜನರಿಗೆ ಸಾಮಾನ್ಯ ಸೇವಾ ಕೇಂದ್ರ ಸೌಲಭ್ಯಗಳನ್ನು ನೀಡಲು ಪ್ರಾರಂಭಿಸಿವೆ.

- ಪಿಎಸಿಎಸ್ 1,863 ರೈತ ಉತ್ಪಾದಕ ಸಂಸ್ಥೆಗಳನ್ನು (ಎಫ್ ಪಿ ಒ) ನೋಂದಾಯಿಸಿವೆ. ಇದು ರೈತರು ಮಾರುಕಟ್ಟೆ ಸಂಪರ್ಕಗಳನ್ನು ಪಡೆಯಲು ಮತ್ತು ಅವರ ಉತ್ಪನ್ನಗಳಿಗೆ ನ್ಯಾಯಯುತ ಬೆಲೆಗಳನ್ನು ಖಚಿತಪಡಿಸಿಕೊಳ್ಳಲು ಸಹಾಯ ಮಾಡುತ್ತದೆ.
- ಚಿಲ್ಲರೆ ಪೆಟ್ರೋಲ್ ಮತ್ತು ಡೀಸೆಲ್ ಮಾರಾಟ ಮಳಿಗೆಗಳಿಗೆ ಪಿಎಸಿಎಸ್ ಗಳನ್ನು ಆದ್ಯತೆಯ ಪಟ್ಟಿಯಲ್ಲಿ ಸೇರಿಸಲಾಗಿದೆ. 27 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ 393 ಪಿಎಸಿಎಸ್ ಗಳು ಅರ್ಜಿ ಸಲ್ಲಿಸಿವೆ. ಪಿಎಸಿಎಸ್ ಗಳಿಗೆ ತಮ್ಮ ಸಗಟು ಗ್ರಾಹಕ ಪೆಟ್ರೋಲ್ ಪಂಪ್ ಗಳನ್ನು ಚಿಲ್ಲರೆ ಔಟ್ಲೆಟ್ ಗಳಾಗಿ ಪರಿವರ್ತಿಸುವ ಆಯ್ಕೆಯನ್ನು ನೀಡಲಾಗಿದೆ.
- ಸರ್ಕಾರ ಈಗ ಪಿಎಸಿಎಸ್ ಗಳಿಗೆ ಎಲ್ ಪಿ ಜಿ ವಿತರಕತ್ವಕ್ಕೆ ಅರ್ಜಿ ಸಲ್ಲಿಸಲು ಅವಕಾಶ ನೀಡಿದೆ.
- ಗ್ರಾಮೀಣ ಪ್ರದೇಶಗಳಲ್ಲಿ ನಲ್ಲಿ ನೀರು ಸರಬರಾಜು ವ್ಯವಸ್ಥೆಗಳನ್ನು ನಿರ್ವಹಿಸಲು ಪಿಎಸಿಎಸ್ ಅರ್ಹವಾಗಿವೆ; ಈ ಉದ್ದೇಶಕ್ಕಾಗಿ 539 ಪಿಎಸಿಎಸ್ ಗಳನ್ನು ಗುರುತಿಸಲಾಗಿದೆ.
- ಪ್ರಧಾನ ಮಂತ್ರಿ ಕುಸುಮ್ ಯೋಜನೆ ಮತ್ತು ಪ್ರಧಾನ ಮಂತ್ರಿ ಸೂರ್ಯ ಘರ್ ಉಚಿತ ವಿದ್ಯುತ್ ಯೋಜನೆಯನ್ನು ಸಹ ಪಿಎಸಿಎಸ್ ಗಳೊಂದಿಗೆ ಸಂಪರ್ಕಿಸಲಾಗಿದೆ. ಆರಂಭದಲ್ಲಿ, ಪ್ರಧಾನ ಮಂತ್ರಿ ಸೂರ್ಯ ಘರ್ ಉಚಿತ ವಿದ್ಯುತ್ ಯೋಜನೆಗೆ 100 ನಗರಗಳನ್ನು ಆಯ್ಕೆ ಮಾಡಲಾಗಿದೆ.

**36,592**

ಪಿಎಸಿಎಸ್ ಗಳು ಈಗ ಪ್ರಧಾನ ಮಂತ್ರಿ ಕಿಸಾನ್ ಸಮೃದ್ಧಿ ಕೇಂದ್ರಗಳಾಗಿ (ಪಿ ಎಂ ಕೆ ಎಸ್ ಕೆ) ಕಾರ್ಯನಿರ್ವಹಿಸುತ್ತಿದ್ದು, ರೈತರಿಗೆ ರಸಗೊಬ್ಬರಗಳು ಮತ್ತು ಸೇವೆಗಳಿಗೆ ಸುಲಭ ಪ್ರವೇಶವನ್ನು ಖಚಿತಪಡಿಸಿವೆ.

## 20 ಲಕ್ಷ ಹೈನುಗಾರರು ಸಂಘಟಿತ ಸಹಕಾರಿ ಸಂಘಗಳ ಸದಸ್ಯರಾಗಲು ಸಾಧ್ಯವಾಗುತ್ತದೆ



ಜುಲೈ 2025 ರಲ್ಲಿ, ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಅವರು ಸರ್ದಾರ್ ಪಟೇಲ್ ಕೋಆಪರೇಟಿವ್ ಡೈರಿ ಫೆಡರೇಶನ್ ಲಿಮಿಟೆಡ್ ಎಂಬ ಬಹು-ರಾಜ್ಯ ಸಹಕಾರಿ ಸಂಸ್ಥೆಯನ್ನು ಉದ್ಘಾಟಿಸಿದರು. ಇದರ ಆರಂಭಿಕ ಬಂಡವಾಳ ₹200 ಕೋಟಿ. ಇದರಿಂದ 20 ರಾಜ್ಯಗಳಾದ್ಯಂತ 20,000 ಕ್ಕೂ ಹೆಚ್ಚು ಹಳ್ಳಿಗಳಿಂದ 2 ಮಿಲಿಯನ್ ಗಿಂತಲೂ ಹೆಚ್ಚು ಹೈನುಗಾರರು ಸದಸ್ಯರಾಗಲು ಸಾಧ್ಯವಾಗುತ್ತದೆ. ಈ ಒಕ್ಕೂಟದ ಮೂಲಕ, ರೈತರು ಖಚಿತವಾದ ಹಾಲು ಸಂಗ್ರಹಣೆ, ಪ್ರಾಣಿಗಳ ಉತ್ತಮ ಆರೈಕೆ, ಪ್ರಾಣಿಗಳ ಸುಧಾರಿತ ಪೋಷಣೆ ಮತ್ತು ಆಧುನಿಕ ಡೈರಿ ತಂತ್ರಜ್ಞಾನದ ಪ್ರವೇಶದಿಂದ ಪ್ರಯೋಜನ ಪಡೆಯುತ್ತಾರೆ. ಬಲವಾದ ಕೋಲ್ಡ್ ಸ್ಟೋರೇಜ್ ಮೂಲಸೌಕರ್ಯ, ಶೀಥಲೀಕರಣ ಕೇಂದ್ರಗಳು ಮತ್ತು ಪರಿಣಾಮಕಾರಿ ಸಂಸ್ಕರಣಾ ಸೌಲಭ್ಯಗಳಲ್ಲಿನ ಹೂಡಿಕೆಗಳು ಗುಣಮಟ್ಟದ ಮಾನದಂಡಗಳನ್ನು ಮತ್ತಷ್ಟು ಬಲಪಡಿಸುತ್ತವೆ. ಇದು ಸುರಕ್ಷಿತ ಮತ್ತು ಆರೋಗ್ಯಕರ ಡೈರಿ ಉತ್ಪನ್ನಗಳ ಬೇಡಿಕೆಯನ್ನು ಪೂರೈಸಲು ಸಹಾಯ ಮಾಡುತ್ತದೆ.

SARDAR PATEL COOPERATIVE DAIRY FEDERATION LTD.




ಮತ್ತು ಅಂಕಿಅಂಶಗಳು ರಾಷ್ಟ್ರೀಯ ಮತ್ತು ಜಾಗತಿಕವಾಗಿ ಅವುಗಳ ಮಹತ್ವವನ್ನು ಪ್ರದರ್ಶಿಸುತ್ತವೆ. ದೇಶದಲ್ಲಿ 800,000 ಕ್ಕೂ ಹೆಚ್ಚು ಸಹಕಾರಿ ಸಂಘಗಳಿವೆ, 300 ಮಿಲಿಯನ್ ಗಿಂತಲೂ ಹೆಚ್ಚು ಸದಸ್ಯರಿದ್ದಾರೆ, ಸುಮಾರು 30 ವಲಯಗಳಲ್ಲಿ ವ್ಯಾಪಕವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ದೇಶದ ಐದು ಜನರಲ್ಲಿ ಒಬ್ಬರು ಸಹಕಾರಿ ಸಂಸ್ಥೆಯೊಂದಿಗೆ ಸಂಬಂಧ ಹೊಂದಿದ್ದಾರೆ. ಬಡವರು ಮತ್ತು ಅಂಚಿನಲ್ಲಿರುವವರಿಗೆ ಸಹಕಾರಿ ಸಂಸ್ಥೆಗಳು ಅಭಿವೃದ್ಧಿಯ ಸಾಧನವಾಗಿ ಮಾರ್ಪಟ್ಟಿವೆ. ಸಹಕಾರಿ ಸಂಸ್ಥೆಗಳು ಒಂದಲ್ಲ ಒಂದು ರೀತಿಯಲ್ಲಿ ದೇಶದ ಪ್ರತಿಯೊಂದು ಕುಟುಂಬದೊಂದಿಗೂ ಸಂಪರ್ಕ ಹೊಂದಿವೆ.

ಇಂದು, ದೇಶದ ಸುಮಾರು ಶೇ.91 ರಷ್ಟು ಹಳ್ಳಿಗಳು ಕೃಷಿ ಅಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಸ್ವ-ಉದ್ಯೋಗದಲ್ಲಿ ತೊಡಗಿರುವ ಸಹಕಾರಿ ಸಂಸ್ಥೆಗಳನ್ನು ಹೊಂದಿದ್ದು, ದೇಶದ ಬೆಳವಣಿಗೆಗೆ ಕೊಡುಗೆ ನೀಡುತ್ತಿವೆ. ಇದು ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸುತ್ತಿದೆ, ಸ್ವ-ಉದ್ಯೋಗ ಮತ್ತು ಸಣ್ಣ ಉದ್ಯಮಶೀಲತೆಯನ್ನು ಉತ್ತೇಜಿಸುತ್ತಿದೆ, ಸಾಮಾಜಿಕ ಸೇರ್ಪಡೆಯನ್ನು ಹೆಚ್ಚಿಸುತ್ತಿದೆ ಮತ್ತು ನಾವೀನ್ಯತೆ ಮತ್ತು ಸಂಶೋಧನೆಯಲ್ಲಿ ಹೊಸ ಮಾನದಂಡಗಳನ್ನು ಸ್ಥಾಪಿಸುತ್ತಿದೆ. ಇದಲ್ಲದೆ, ಸಹಕಾರಿ ವಲಯವು 3 ಮಿಲಿಯನ್

# ಸಹಕಾರಿ ಸಂಸ್ಥೆಗಳು

***ಇಂದು, ದೇಶದಲ್ಲಿ 8.44 ಲಕ್ಷಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳು ಸಕ್ರಿಯವಾಗಿದ್ದು, ಸುಮಾರು 32 ಕೋಟಿ ಜನರನ್ನು ನೇರವಾಗಿ ಅಥವಾ ಪರೋಕ್ಷವಾಗಿ ಒಳಗೊಂಡಿವೆ. ಇದಲ್ಲದೆ, ಸುಮಾರು 94 ಪ್ರತಿಶತ ರೈತರು ಒಂದಲ್ಲ ಒಂದು ರೂಪದಲ್ಲಿ ಸಹಕಾರಿ ಸಂಘಗಳೊಂದಿಗೆ ಸಂಬಂಧ ಹೊಂದಿದ್ದಾರೆ.***

## ಸಹಕಾರ್ ಸೇ ಸಮೃದ್ಧಿಗೆ ಉತ್ತೇಜನ ನೀಡುವುದು

ಸಹಕಾರಿ ಚಳುವಳಿಯನ್ನು ಬಲಪಡಿಸಲು ಸಚಿವಾಲಯವು 100 ಕ್ಕೂ ಹೆಚ್ಚು ಉಪಕ್ರಮಗಳನ್ನು ಪ್ರಾರಂಭಿಸಿದೆ. ಜುಲೈ 6, 2025 ರಂದು ರಾಷ್ಟ್ರೀಯ ಸಹಕಾರಿ ನೀತಿ 2025 ಅನ್ನು ಪ್ರಾರಂಭಿಸಲಾಯಿತು. ಸಹಕಾರ್ ಸೇ ಸಮೃದ್ಧಿ ಮಂತ್ರವನ್ನು ಉತ್ತೇಜಿಸಲು, ಹಲವಾರು ಯೋಜನೆಗಳು ಮತ್ತು ಉಪಕ್ರಮಗಳನ್ನು ಪ್ರಾರಂಭಿಸಲಾಯಿತು ಮತ್ತು ಆದಾಯ ತೆರಿಗೆ ಮತ್ತು ಜಿ ಎಸ್ ಟಿ ಸೇರಿದಂತೆ ಹಲವಾರು ತೆರಿಗೆ ವಿನಾಯಿತಿಗಳನ್ನು ನೀಡಲಾಯಿತು.

**₹1 ಕೋಟಿಯಿಂದ ₹10 ಕೋಟಿಯವರೆಗೆ ಆದಾಯ ಹೊಂದಿರುವ ಸಹಕಾರಿ ಸಂಘಗಳ ಮೇಲಿನ ತೆರಿಗೆ ದರವನ್ನು ಶೇ.12 ರಿಂದ ಶೇ.7ಕ್ಕೆ ಇಳಿಸಲಾಗಿದೆ. ಇದು ಸಹಕಾರಿ ಸಂಘಗಳ ಮೇಲಿನ ತೆರಿಗೆ ಹೊರೆಯನ್ನು ಕಡಿಮೆ ಮಾಡಿದೆ.**

- ಸಹಕಾರಿ ಸಂಘಗಳ ₹2 ಲಕ್ಷದವರೆಗಿನ ನಗದು ವಹಿವಾಟುಗಳನ್ನು ಆದಾಯ ತೆರಿಗೆ ದಂಡದಿಂದ ವಿನಾಯಿತಿ ನೀಡಲಾಗಿದೆ. ಪಿಎಸಿಎಸ್ ಮತ್ತು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ ನಗದು ಠೇವಣಿ ಮತ್ತು ಪಾವತಿಗಳ ಮಿತಿಯನ್ನು ₹20,000 ರಿಂದ ₹2 ಲಕ್ಷಕ್ಕೆ ಹೆಚ್ಚಿಸಲಾಗಿದೆ.
- ಹೊಸ ಉತ್ಪಾದನಾ ಸಹಕಾರ ಸಂಘಗಳಿಗೆ ಹಿಂದಿನ ಶೇ.30 ದರಕ್ಕೆ ಹೋಲಿಸಿದರೆ ಶೇ.15 ರಷ್ಟು ಕಡಿಮೆ ತೆರಿಗೆ ದರವನ್ನು ವಿಧಿಸಲಾಗಿದೆ.
- ಸಹಕಾರಿ ಸಂಘಗಳಿಗೆ ಕನಿಷ್ಠ ಪರ್ಯಾಯ ತೆರಿಗೆ ದರವನ್ನು ಶೇ.18.5 ರಿಂದ ಶೇ.12 ಕ್ಕೆ ಇಳಿಸಲಾಗಿದೆ.
- ಸಹಕಾರಿ ಸಕ್ಕರೆ ಕಾರ್ಖಾನೆಗಳು ಏಪ್ರಿಲ್ 2016 ರಿಂದ ರೈತರಿಗೆ ಕಬ್ಬಿಗೆ ಹೆಚ್ಚಿನ ಬೆಲೆಗಳನ್ನು ಅಥವಾ ರಾಜ್ಯ ಸಲಹೆ ಬೆಲೆ (ಎಸ್ ಎ ಪಿ) ಯವರೆಗೆ ಪಾವತಿಸಿದರೆ ಯಾವುದೇ ಹೆಚ್ಚುವರಿ ತೆರಿಗೆಯನ್ನು ಪಾವತಿಸಬೇಕಾಗಿಲ್ಲ.




- ಕಾಕಂಬಿ ಮೇಲಿನ ಜಿ ಎಸ್ ಟಿ ಯನ್ನು ಶೇ.28 ರಿಂದ ಶೇ.5 ಕ್ಕೆ ಇಳಿಸಲಾಯಿತು, ಇದರಿಂದಾಗಿ ಸಹಕಾರಿ ಸಕ್ಕರೆ ಕಾರ್ಖಾನೆಗಳು ಹೆಚ್ಚಿನ ದರದಲ್ಲಿ ಕಾಕಂಬಿಯನ್ನು ಮಾರಾಟ ಮಾಡುವ ಮೂಲಕ ತಮ್ಮ ಸದಸ್ಯರು ಹೆಚ್ಚಿನ ಲಾಭವನ್ನು ಗಳಿಸಲು ಅವಕಾಶವಾಗಿದೆ.
- ಸಹಕಾರಿ ಸಕ್ಕರೆ ಸಂಘಗಳು 2016-17ರ ಮೌಲ್ಯಮಾಪನ ವರ್ಷಕ್ಕೆ ಮುಂಚಿತವಾಗಿ ಕಬ್ಬು ರೈತರಿಗೆ ಮಾಡಿದ ಪಾವತಿಗಳನ್ನು ವೆಚ್ಚವಾಗಿ ಪಡೆಯಲು ಅವಕಾಶ ನೀಡಲಾಯಿತು. ಇದು ₹46,000 ಕೋಟಿಗೂ ಹೆಚ್ಚು ಪರಿಹಾರವನ್ನು ನೀಡುವ ನಿರೀಕ್ಷೆಯಿದೆ. ಹೆಚ್ಚುವರಿಯಾಗಿ, ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಸಬಲೀಕರಣಗೊಳಿಸಲು ₹10,000 ಕೋಟಿ ಸಾಲ ಯೋಜನೆಯನ್ನು ಪ್ರಾರಂಭಿಸಲಾಯಿತು.
- ಎಥೆನಾಲ್ ಮಿಶ್ರಣ ಕಾರ್ಯಕ್ರಮದಡಿಯಲ್ಲಿ ಎಥೆನಾಲ್ ಸಂಗ್ರಹಣೆಯಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಆದ್ಯತೆ ನೀಡಲಾಯಿತು ಮತ್ತು ಎಥೆನಾಲ್ ಸಂಗ್ರಹಣೆಯಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಖಾಸಗಿ ಕಂಪನಿಗಳಿಗೆ ಸಮಾನವಾಗಿ ಇರಿಸಲಾಯಿತು.
- ಸಹಕಾರಿ ವಲಯದಲ್ಲಿ ಪಾರದರ್ಶಕತೆ, ಉದ್ಯೋಗ ಮತ್ತು ಸುಸ್ಥಿರತೆಯನ್ನು ಹೆಚ್ಚಿಸಲು 60 ಕ್ಕೂ ಹೆಚ್ಚು ನೀತಿ ಸುಧಾರಣೆಗಳನ್ನು ಜಾರಿಗೆ ತರಲಾಗಿದೆ.
- ಹೈನುಗಾರಿಕೆ ಮತ್ತು ಮೀನುಗಾರಿಕೆ ಸಹಕಾರ ಸಂಘಗಳನ್ನು ಕೇಂದ್ರ ಮತ್ತು ರಾಜ್ಯ ಸಹಕಾರಿ ಬ್ಯಾಂಕುಗಳ ಬ್ಯಾಂಕ್ ಮಿತ್ರಗಳಾಗಿ ಗುರುತಿಸಲಾಗುತ್ತಿದೆ. ಮನೆ ಬಾಗಿಲಿಗೆ ಹಣಕಾಸು ಸೇವೆಗಳನ್ನು ಒದಗಿಸಲು ಅವುಗಳಿಗೆ ಮೈಕ್ರೋ ಎಟಿಎಂಗಳನ್ನು ಸಹ ಒದಗಿಸಲಾಗುತ್ತಿದೆ. ಗುಜರಾತಿನಲ್ಲಿ ಸುಮಾರು 10,000 ಮೈಕ್ರೋ ಎಟಿಎಂಗಳನ್ನು ವಿತರಿಸಲಾಗಿದೆ.

ಸಹಕಾರಿ ಸಂಸ್ಥೆಗಳ ಮೂಲಕ ವಿಶ್ವಾದ್ಯಂತ ಜನಸಂಖ್ಯೆಯ ಶೇಕಡಾ 12 ಕ್ಕಿಂತ ಹೆಚ್ಚು ಜನರನ್ನು ನೇಮಿಸಿಕೊಂಡಿದೆ, 300 ದೊಡ್ಡ ಸಹಕಾರಿ ಸಂಸ್ಥೆಗಳು 2,409.41 ಬಿಲಿಯನ್ ಡಾಲರ್ ವಹಿವಾಟು ನಡೆಸುತ್ತಿವೆ.

ವಿಶ್ವದ ಉದ್ಯೋಗಸ್ಥ ಜನಸಂಖ್ಯೆಯ ಶೇಕಡಾ 10 ರಷ್ಟನ್ನು ಪ್ರತಿನಿಧಿಸುವ 280 ಮಿಲಿಯನ್ ಜನರಿಗೆ ಯೋಗ್ಯ ಉದ್ಯೋಗಗಳು ಮತ್ತು ಕೆಲಸದ ಅವಕಾಶಗಳನ್ನು ಒದಗಿಸುವ ಮೂಲಕ ಅವುಗಳು

**"ಭಾರತದಲ್ಲಿ ಸಹಕಾರಿ ಸಂಸ್ಥೆಗಳು ಕಲ್ಪನೆಯಿಂದ ಚಳವಳಿಗೆ, ಚಳವಳಿಯಿಂದ ಕ್ರಾಂತಿಗೆ ಮತ್ತು ಕ್ರಾಂತಿಯಿಂದ ಸಬಲೀಕರಣಕ್ಕೆ ಪ್ರಯಾಣಿಸಿವೆ. ಸಹಕಾರಿ ಸಂಸ್ಥೆಗಳು ಜಾಗತಿಕ ಸಹಕಾರಕ್ಕೆ ಹೊಸ ಶಕ್ತಿಯನ್ನು ನೀಡಬಲ್ಲವು."**

**ನರೇಂದ್ರ ಮೋದಿ, ಪ್ರಧಾನಮಂತ್ರಿ**

## ರೈತರ ಸ್ವಾವಲಂಬನೆಯ ಹಾದಿ...



ದೇಶದಲ್ಲಿ ದ್ವಿದಳ ಧಾನ್ಯಗಳ (ತೊಗರಿ, ಅಲಸಂದೆ ಮತ್ತು ಉದ್ದು) ಉತ್ಪಾದನೆಯನ್ನು ಹೆಚ್ಚಿಸಲು ಮತ್ತು ಆಮದಿನ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಸಹಕಾರ ಸಚಿವಾಲಯವು ಸ್ವಾವಲಂಬನೆ ಅಭಿಯಾನವನ್ನು ಪ್ರಾರಂಭಿಸಿದೆ. ಎಥೆನಾಲ್ ಮಿಶ್ರಣ ಕಾರ್ಯಕ್ರಮದ ಗುರಿಗಳನ್ನು ಪೂರೈಸಲು ಮೆಕ್ಕೆಜೋಳ ಉತ್ಪಾದನೆಯನ್ನು ಸಹ ಉತ್ತೇಜಿಸಲಾಗುತ್ತಿದೆ. ಎನ್ ಸಿ ಸಿ ಎಫ್ ಮತ್ತು ನ್ಯಾಫೆಡ್ ಗೆ ಈ ಜವಾಬ್ದಾರಿಯನ್ನು ವಹಿಸಲಾಗಿದೆ. ರೈತರ ನೋಂದಣಿಗಾಗಿ ಎನ್ ಸಿ ಸಿ ಎಫ್ ಇ-ಸಂಯುಕ್ತಿ ಮತ್ತು ನ್ಯಾಫೆಡ್ ಇ-ಸಮೃದ್ಧಿ ಪೋರ್ಟಲ್ ಅನ್ನು ಪ್ರಾರಂಭಿಸಿವೆ. ಈ ಪೋರ್ಟಲ್ ನೋಂದಾಯಿತ ರೈತರಿಂದ ಕನಿಷ್ಠ ಬೆಂಬಲ ಬೆಲೆಯಲ್ಲಿ ತೊಗರಿ, ಉದ್ದು, ಅಲಸಂದೆ ಮತ್ತು ಮೆಕ್ಕೆಜೋಳದ ಸಂಪೂರ್ಣ ಬೆಳೆಯ ಖರೀದಿಯನ್ನು ಖಾತರಿಪಡಿಸುತ್ತದೆ. ಆದಾಗ್ಯೂ, ಮಾರುಕಟ್ಟೆ ಬೆಲೆಗಳು ಎಂ ಎಸ್ ಪಿ ಯನ್ನು ಮೀರಿದರೆ, ರೈತರು ತಮ್ಮ ಉತ್ಪನ್ನಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಮೂಲಕ ಹೆಚ್ಚಿನ ಲಾಭವನ್ನು ಗಳಿಸಬಹುದು. ಇಲ್ಲಿಯವರೆಗೆ, 4.141 ಮಿಲಿಯನ್ ರೈತರು ಇ-ಸಂಯುಕ್ತಿ ಪೋರ್ಟಲ್ ನಲ್ಲಿ ನೋಂದಾಯಿಸಿಕೊಂಡಿದ್ದಾರೆ ಮತ್ತು 11.07 ಲಕ್ಷ ರೈತರು ನ್ಯಾಫಡೆಡ್ ನ ಇ-ಸಮೃದ್ಧಿ ಪೋರ್ಟಲ್ ನಲ್ಲಿ ನೋಂದಾಯಿಸಿಕೊಂಡಿದ್ದಾರೆ.

- ಸಹಕಾರಿ ಬ್ಯಾಂಕುಗಳ ವ್ಯಾಪ್ತಿಯನ್ನು ವಿಸ್ತರಿಸಲು ಮತ್ತು ಡೈರಿ ಸಹಕಾರಿ ಸದಸ್ಯರಿಗೆ ಅಗತ್ಯವಾದ ನಗದು ಒದಗಿಸಲು, ಸಹಕಾರಿ ಸಂಘದ ಸದಸ್ಯರಿಗೆ ರುಪೇ ಕಿಸಾನ್ ಕ್ರೆಡಿಟ್ ಕಾರ್ಡ್ ಗಳನ್ನು ನೀಡಲಾಗುತ್ತಿದೆ.
- ಅಸ್ತಿತ್ವದಲ್ಲಿರುವ 1,000 ಮೀನುಗಾರಿಕೆ ಸಹಕಾರ ಸಂಘಗಳನ್ನು ಮೀನುಗಾರಿಕೆ ರೈತ ಉತ್ಪಾದಕ ಸಂಸ್ಥೆಗಳು (ಎಫ್ ಎಫ್ ಪಿ ಒ) ಆಗಿ ಪರಿವರ್ತಿಸುವ ಕಾರ್ಯವೂ ಆರಂಭವಾಗಿದೆ, ಇದಕ್ಕಾಗಿ ಕ್ಲಸ್ಟರ್ ಅತ್ಯುತ್ತಮ ವ್ಯಾಪಾರ ಸಂಸ್ಥೆಗಳು ವ್ಯಾಪಾರ ಯೋಜನೆಗಳನ್ನು ಸಿದ್ಧಪಡಿಸುತ್ತಿವೆ. ಮೀನುಗಾರರಿಗೆ ಮಾರುಕಟ್ಟೆ ಸಂಪರ್ಕ ಮತ್ತು ಸಂಸ್ಕರಣಾ ಸೌಲಭ್ಯಗಳನ್ನು ಸುಗಮಗೊಳಿಸಲು 70 ಎಫ್ ಎಫ್ ಪಿ ಒ ಗಳು ಈಗಾಗಲೇ ನೋಂದಾಯಿಸಲ್ಪಟ್ಟಿವೆ.
- 2025-26 ರಿಂದ 2028-29 ರ ಅವಧಿಗೆ ₹2,000 ಕೋಟಿ ವೆಚ್ಚದಲ್ಲಿ "ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮಕ್ಕೆ (ಎನ್ ಸಿ ಡಿ ಸಿ) ಅನುದಾನ" ಎಂಬ ಕೇಂದ್ರ ಯೋಜನೆಯನ್ನು ಅನುಮೋದಿಸಲಾಗಿದೆ. ಇದು ನಾಲ್ಕು ವರ್ಷಗಳಲ್ಲಿ ಮುಕ್ತ ಮಾರುಕಟ್ಟೆಯಿಂದ ಸುಮಾರು ₹20,000 ಕೋಟಿ ಸಂಗ್ರಹಿಸಲು ಎನ್ ಸಿ ಡಿ ಸಿ ಗೆ ಅನುವು ಮಾಡಿಕೊಡುತ್ತದೆ. ದೇಶಾದ್ಯಂತ 13,288 ಸಹಕಾರಿ ಸಂಘಗಳ ಸುಮಾರು 2.9 ಕೋಟಿ ಸದಸ್ಯರು, ಡೈರಿ, ಪಶುಸಂಗೋಪನೆ, ಮೀನುಗಾರಿಕೆ, ಸಕ್ಕರೆ, ಜವಳಿ, ಆಹಾರ ಸಂಸ್ಕರಣೆ, ಗೋದಾಮು ಮತ್ತು ಶೀತಲೀಕರಣ, ಕಾರ್ಮಿಕ ಮತ್ತು ಮಹಿಳಾ ನೇತೃತ್ವದ ಸಹಕಾರಿ ಸಂಘಗಳಂತಹ ವೈವಿಧ್ಯಮಯ ವಲಯಗಳು ಇದರಲ್ಲಿ ಸೇರಿದ್ದು, ಇವುಗಳು ಈ ಯೋಜನೆಯ ಲಾಭ ಪಡೆಯುವ ನಿರೀಕ್ಷೆಯಿದೆ.
- ಸಹಕಾರಿ ಸಂಸ್ಥೆಗಳು ಜಿಇಎಂನಲ್ಲಿ 'ಖರೀದಿದಾರರು' ಎಂದು ನೋಂದಾಯಿಸಿಕೊಳ್ಳಲು ಅವಕಾಶ ನೀಡಲಾಗಿದ್ದು, ಇದರಿಂದಾಗಿ ಸುಮಾರು 67 ಲಕ್ಷ ಮಾರಾಟಗಾರರಿಂದ ಸರಕು ಮತ್ತು ಸೇವೆಗಳನ್ನು ವೆಚ್ಚ-ಪರಿಣಾಮಕಾರಿ ಖರೀದಿ ಮತ್ತು ಹೆಚ್ಚಿನ ಪಾರದರ್ಶಕತೆಯ ಖರೀದಿಗೆ ಅವಕಾಶ ದೊರೆತಿದೆ. 574 ಕ್ಕೂ ಹೆಚ್ಚು ಸಹಕಾರಿ ಸಂಘಗಳನ್ನು ಇದರಲ್ಲಿ ಸೇರಿಸಿಕೊಳ್ಳಲಾಗಿದೆ.
- ಸಹಕಾರಿ ಸಂಸ್ಥೆಗಳ ಮೌಲ್ಯಮಾಪನ ಮತ್ತು ಶ್ರೇಣೀಕರಣಕ್ಕಾಗಿ ಸಹಕಾರಿ ಶ್ರೇಯಾಂಕ ಚೌಕಟ್ಟನ್ನು ಜನವರಿ 2025 ರಲ್ಲಿ ಪ್ರಾರಂಭಿಸಲಾಯಿತು. ರಾಷ್ಟ್ರೀಯ ಸಹಕಾರಿ ಡೇಟಾಬೇಸ್ ಪೋರ್ಟಲ್ ಏಳು ಪ್ರಮುಖ ವಲಯಗಳಲ್ಲಿ ಶ್ರೇಯಾಂಕಗಳನ್ನು ರಚಿಸಬಹುದು.
- ಬಹು-ರಾಜ್ಯ ಸಹಕಾರಿ ಸಂಘಗಳ ಕಾಯ್ದೆ, 2002 ಅನ್ನು ಬಹು-ರಾಜ್ಯ ಸಹಕಾರಿ ಸಂಘಗಳ (ತಿದ್ದುಪಡಿ) ಕಾಯ್ದೆ, 2023 ರ ಅಡಿಯಲ್ಲಿ ತಿದ್ದುಪಡಿ ಮಾಡಲಾಗಿದೆ. ಬಹು-ರಾಜ್ಯ ಸಹಕಾರಿ ಸಂಘಗಳಲ್ಲಿ ಆಡಳಿತವನ್ನು ಬಲಪಡಿಸಲು, ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಹೆಚ್ಚಿಸಲು ಮತ್ತು ಚುನಾವಣಾ ಪ್ರಕ್ರಿಯೆಯನ್ನು ಸುಧಾರಿಸಲು ಇದನ್ನು ತಿದ್ದುಪಡಿ ಮಾಡಲಾಗಿದೆ.
- ಸಹಾರಾ ಗ್ರೂಪ್ ಸಹಕಾರಿ ಸಂಘಗಳ 22.56 ಲಕ್ಷ ಮಾನ್ಯ ಠೇವಣಿದಾರರಿಗೆ ಪೋರ್ಟಲ್ ಮೂಲಕ ಪಾರದರ್ಶಕ ರೀತಿಯಲ್ಲಿ ₹4,548 ಕೋಟಿಗೂ ಹೆಚ್ಚಿನ ಮೊತ್ತವನ್ನು ಹಿಂತಿರುಗಿಸಲಾಗಿದೆ.

ಸುಸ್ಥಿರ ಆರ್ಥಿಕ ಅಭಿವೃದ್ಧಿಯನ್ನು ಉತ್ತೇಜಿಸುತ್ತಿವೆ. ಸಹಕಾರಿ ಸಂಸ್ಥೆಗಳ ಮಹತ್ವವನ್ನು ಗುರುತಿಸಿ, ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು 2025 ಅನ್ನು ಅಂತಾರಾಷ್ಟ್ರೀಯ ಸಹಕಾರಿ ವರ್ಷವೆಂದು ಘೋಷಿಸಿತು, ಇದರ ಥೀಮ್: "ಸಹಕಾರ ಸಂಸ್ಥೆಗಳು ಉತ್ತಮ ಜಗತ್ತನ್ನು ನಿರ್ಮಿಸುತ್ತವೆ." ವಾಸ್ತವವಾಗಿ, ಸಹಕಾರಿ ಸಂಸ್ಥೆಗಳು ದಶಕಗಳಿಂದ ಭಾರತೀಯ ಸಂಸ್ಕೃತಿಯಲ್ಲಿ ಮುಂಚೂಣಿಯಲ್ಲಿವೆ. ಈ ಕಲ್ಪನೆಯು ಭಾರತದ ಕಲ್ಪನೆಯಾಗಿದೆ. ಸಹಕಾರಿ ಸಂಸ್ಥೆಗಳು ಭಾರತೀಯ ಸಂಸ್ಕೃತಿಯ ಮೂಲತತ್ವವಾಗಿದೆ, ಮತ್ತು ಭಾರತವು ಸಹಕಾರಿ ಸಂಸ್ಥೆಗಳ ಕಲ್ಪನೆಯನ್ನು ಪ್ರತಿಪಾದಿಸಿದೆ ಮತ್ತು ಪ್ರಪಂಚದಾದ್ಯಂತ ಅವುಗಳನ್ನು ಉತ್ತೇಜಿಸಿದೆ. ಜಗತ್ತಿಗೆ ಸಹಕಾರಿ ಸಂಸ್ಥೆಗಳು ಒಂದು ಮಾದರಿ, ಆದರೆ ಭಾರತಕ್ಕೆ ಅವು ಸಂಸ್ಕೃತಿ ಮತ್ತು ಜೀವನ ವಿಧಾನದ ಅಡಿಪಾಯವಾಗಿವೆ. ಸಹಕಾರಿ ಸಂಸ್ಥೆಗಳು ವೈಯಕ್ತಿಕ ಸಾಮರ್ಥ್ಯಗಳನ್ನು ಸಾಮೂಹಿಕ ಸಾಮಾಜಿಕ ಶಕ್ತಿಗಳಾಗಿ ಪರಿವರ್ತಿಸುವ ಶಕ್ತಿಯಾಗಿ ಮಾರ್ಪಟ್ಟಿವೆ. ಸಹಕಾರವು ಭಾರತೀಯ ಸಮಾಜದ ಅಡಿಪಾಯದಲ್ಲಿ ಆಳವಾಗಿ ಬೇರೂರಿದೆ, ಸಾಮಾಜಿಕ ಮತ್ತು ಆರ್ಥಿಕ ಗುರಿಗಳ ಸಹಯೋಗದ ಸಾಧನೆಯ

# ಶ್ವೇತ ಕ್ರಾಂತಿ 2.0...

## ಭಾರತದ ಗ್ರಾಮೀಣ ಪರಿವರ್ತನೆಯಲ್ಲಿ ಹೊಸ ಅಧ್ಯಾಯ

ಶ್ವೇತ ಕ್ರಾಂತಿ 2.0ರ ಉದ್ದೇಶವೆಂದರೆ, ದೇಶದಲ್ಲಿ ಈ ಸಹಕಾರ ಸಂಘಗಳು ಇನ್ನೂ ತಲುಪದ ಪ್ರದೇಶಗಳಲ್ಲಿ ರೈತರಿಗೆ ಡೈರಿ ಸಹಕಾರ ಸಂಘಗಳ ವ್ಯಾಪ್ತಿಯನ್ನು ಹೆಚ್ಚಿಸುವುದು. ಡೈರಿ ಸಹಕಾರ ಸಂಘಗಳಿಗೆ ಸೇರುವ ಮೂಲಕ, ರೈತರು ತಮ್ಮ ಹಾಲಿಗೆ ಉತ್ತಮ ಮಾರುಕಟ್ಟೆಯನ್ನು ಪಡೆಯುತ್ತಾರೆ. ಸಹಕಾರ ಸಂಘಗಳ ವ್ಯಾಪ್ತಿಯನ್ನು ವಿಸ್ತರಿಸುವುದು, ಹಾಲು ಸಂಗ್ರಹಣೆಯನ್ನು ಶೇ.50 ರಷ್ಟು ಹೆಚ್ಚಿಸುವುದು, ಗ್ರಾಮೀಣ ಪ್ರದೇಶಗಳಲ್ಲಿ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ಮತ್ತು ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವುದು ಶ್ವೇತ ಕ್ರಾಂತಿ 2.0ರ ಗುರಿಯಾಗಿದೆ. ಕೇಂದ್ರ ಗೃಹ ಮತ್ತು ಸಹಕಾರ ಸಚಿವರಾದ ಅಮಿತ್ ಶಾ ಅವರು ಶ್ವೇತ ಕ್ರಾಂತಿ 2.0ರ ಎಸ್ ಒ ಪಿ ಯನ್ನು ಬಿಡುಗಡೆ ಮಾಡಿದರು.

**16,322** ಸಹಕಾರಿ ಹಾಲು ಸಂಘಗಳನ್ನು ಇದುವರೆಗೆ ನೋಂದಾಯಿಸಲಾಗಿದೆ.



### ಕಚ್ರೆ ಸೇ ಕಾಂಚನ್ (ಕಸದಿಂದ ಕಾಂಚಾಣ) ನಿಂದ ಡೈರಿ ವಲಯವನ್ನು ಪರಿವರ್ತಿಸುವ ಉಪಕ್ರಮ

ಶ್ವೇತ ಕ್ರಾಂತಿ 2.0ರ ಪ್ರಮುಖ ಉದ್ದೇಶವೆಂದರೆ ಡೈರಿ ವಲಯದಲ್ಲಿ ಪರಿಸರ ಸಂರಕ್ಷಣೆ, ಸಂಪನ್ಮೂಲ ಮರುಬಳಕೆ ಮತ್ತು ರೈತರ ಆದಾಯದಲ್ಲಿ ಸುಸ್ಥಿರ ಬೆಳವಣಿಗೆಯನ್ನು ಖಾತ್ರಿಪಡಿಸುವ ಅಭಿವೃದ್ಧಿ ಮಾದರಿಯನ್ನು ಅಭಿವೃದ್ಧಿಪಡಿಸುವುದು. ಈ ನಿಟ್ಟಿನಲ್ಲಿ, ಸರ್ಕಾರವು ಡೈರಿ ವಲಯದಲ್ಲಿ ಸುಸ್ಥಿರತೆ ಮತ್ತು ಮರುಬಳಕೆಯನ್ನು ಉತ್ತೇಜಿಸಲು, ಡೈರಿ ಮೌಲ್ಯ ಘಟಕಗಳಾದ್ಯಂತ ಹವಾಮಾನ-ಸ್ನೇಹಿ ಅಭ್ಯಾಸಗಳನ್ನು ಅಳವಡಿಸಿಕೊಳ್ಳಲು, ದಕ್ಷ ಸಂಪನ್ಮೂಲ ಬಳಕೆಯನ್ನು ಉತ್ತೇಜಿಸಲು ಮತ್ತು ನವೀಕರಿಸಬಹುದಾದ ಸಂಪನ್ಮೂಲಗಳ ಮೂಲಕ ಕಡಿಮೆ-ಇಂಗಾಲ ಹೊರಸೂಸುವಿಕೆ ಮತ್ತು ಆದಾಯ-ಉತ್ಪಾದಿಸುವ ಪರಿಸರ ವ್ಯವಸ್ಥೆಯನ್ನು ನಿರ್ಮಿಸಲು ಕ್ರಮಗಳನ್ನು ತೆಗೆದುಕೊಂಡಿದೆ. ಈ ನಿಟ್ಟಿನಲ್ಲಿ, ಮೂರು ಬಹು-ರಾಜ್ಯ ಸಹಕಾರಿ ಸಂಘಗಳನ್ನು ಸ್ಥಾಪಿಸಲಾಗುವುದು:

- ಪಶು ಆಹಾರ ಉತ್ಪಾದನೆ, ರೋಗ ನಿಯಂತ್ರಣ ಮತ್ತು ಕೃತಕ ಗರ್ಭಧಾರಣೆಗಾಗಿ.
- ಹಸು ಮತ್ತು ಎಮ್ಮೆಗಳ ಸಗಣಿ ನಿರ್ವಹಣೆಗಾಗಿ.
- ಸತ್ತ ಪ್ರಾಣಿಗಳ ಚರ್ಮ, ಮೂಳೆಗಳು ಮತ್ತು ಕೊಂಬುಗಳ ನಿರ್ವಹಣೆಗಾಗಿ.

ಮನೋಭಾವವನ್ನು ಬೆಳೆಸುತ್ತದೆ ಎಂದು ಹೇಳಬಹುದು. ಆದಾಗ್ಯೂ, ದೀರ್ಘಕಾಲದವರೆಗೆ, ಈ ವಲಯವು ಛಿದ್ರವಾಗಿತ್ತು ಮತ್ತು ದೇಶಾದ್ಯಂತ ಏಕರೂಪತೆಯ ಕೊರತೆಯನ್ನು ಹೊಂದಿತ್ತು.

ದೇಶದ ಗ್ರಾಮೀಣ ಆರ್ಥಿಕತೆಯ ಸಮಾನ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು, ಸಹಕಾರಿ ಚಳವಳಿಯನ್ನು ಬಲಪಡಿಸಲು ಮತ್ತು ಅದರ ಪ್ರಯೋಜನವನ್ನು ಪ್ರತಿ ಮನೆಗೂ ಕೊಂಡೊಯ್ಯಲು 2021 ರಲ್ಲಿ ಪ್ರತ್ಯೇಕ ಸಹಕಾರ ಸಚಿವಾಲಯವನ್ನು ಸ್ಥಾಪಿಸಲಾಯಿತು.

> **“ಭಾರತದಲ್ಲಿ ಸಹಕಾರಿ ಸಂಸ್ಥೆಗಳು ನಮ್ಮ ಹೈನುಗಾರಿಕೆ ವಲಯಕ್ಕೆ... ನಮ್ಮ ಗ್ರಾಮೀಣ ಆರ್ಥಿಕತೆಗೆ ಹೊಸ ಉತ್ತೇಜನ ನೀಡುತ್ತಿವೆ.**
>
> **ನರೇಂದ್ರ ಮೋದಿ, ಪ್ರಧಾನಮಂತ್ರಿ**




ಕಳೆದ 11 ವರ್ಷಗಳಲ್ಲಿ, ಗ್ರಾಮೀಣ ಭಾರತವು ರಸ್ತೆಗಳು, ವಸತಿ, ದೂರಸಂಪರ್ಕ, ವಿದ್ಯುತ್, ಶೌಚಾಲಯಗಳು ಮತ್ತು ಅಡುಗೆ ಅನಿಲದಂತಹ ಮೂಲಭೂತ ಭೌತಿಕ ಮೂಲಸೌಕರ್ಯಗಳಲ್ಲಿ ಅಭೂತಪೂರ್ವ ಅಭಿವೃದ್ಧಿಯನ್ನು ಕಂಡಿದೆ. ಇದು ಹಳ್ಳಿಗಳ ಆಶಾಭಾವನೆಯನ್ನು ಹೆಚ್ಚಿಸಿದೆ. ಈಗ ಮೂಲಸೌಕರ್ಯಗಳು ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವುದರಿಂದ, ಹಳ್ಳಿಯ ಆರ್ಥಿಕತೆಯನ್ನು ಮತ್ತಷ್ಟು ಬಲಪಡಿಸುವ, ಸಂಘಟಿತಗೊಳಿಸುವ ಮತ್ತು ಮಾರುಕಟ್ಟೆಯೊಂದಿಗೆ ಸಂಯೋಜಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ, ಸಹಕಾರಿ ಆಧಾರಿತ ಆರ್ಥಿಕ ಮಾದರಿಯು ಭಾರತದ ಬೆಳವಣಿಗೆಯ ಪ್ರಮುಖ ಎಂಜಿನ್ ಆಗಲು ಸಜ್ಜಾಗಿದ್ದು, 2047 ರ ವೇಳೆಗೆ ವಿಕಸಿತ ಭಾರತದ ಗುರಿಯನ್ನು ಸಾಧಿಸಲು ಸಹಾಯ ಮಾಡುತ್ತದೆ.

**ಭಾರತದಲ್ಲಿ ಸಹಕಾರಿ ಚಳುವಳಿ**

ಸ್ವಾತಂತ್ರ್ಯದ ಮೊದಲು, ಗುಜರಾತಿನ ಆನಂದ್ - ಖೇಡಾ ಜಿಲ್ಲೆಯ ಕೆಲವು ರೈತರು ಮುಂಬೈನ ಪಾಲ್ಸನ್ ಡೈರಿಗೆ ಹಾಲು ಮಾರಾಟ ಮಾಡುತ್ತಿದ್ದರು. ಒಮ್ಮೆ, ರೈತರು ಬೆಲೆ ಹೆಚ್ಚಳಕ್ಕೆ ಒತ್ತಾಯಿಸಿದರು. ಆಗ ಪಾಲ್ಸನ್ ಡೈರಿ ಹಾಲು ಖರೀದಿಸುವುದನ್ನು ನಿಲ್ಲಿಸಿತು. ರೈತರು ಅಸಹಾಯಕರಾಗಿ ತ್ರಿಭುವನದಾಸ್ ಕಿಶಿಭಾಯ್ ಪಟೇಲ್ ಅವರ ನೇತೃತ್ವದಲ್ಲಿ ಸರ್ದಾರ್ ಪಟೇಲ್ ಅವರನ್ನು ಸಂಪರ್ಕಿಸಿದರು. ಆಗ ಸರ್ದಾರ್ "ನೀವು ಗುಲಾಮಗಿರಿಯನ್ನು ಒಪ್ಪಿಕೊಂಡರೆ, ನೀವು ಶೋಷಣೆಗೆ ಒಳಗಾಗುತ್ತೀರಿ. ನೀವು ಅದನ್ನು ಮಾಡಲು ಬಯಸದಿದ್ದರೆ, ನೀವು ನಿಮ್ಮ ಸ್ವಂತ ಸಹಕಾರಿ ಸಂಘವನ್ನು ರಚಿಸಿಕೊಳ್ಳಬೇಕು ಮತ್ತು ನಿಮ್ಮ ಹಾಲನ್ನು ನೀವೇ ಮಾರಬೇಕು" ಎಂದು ಹೇಳಿದರು. ನಂತರ, ತ್ರಿಭುವನ್ ದಾಸ್ ಪಟೇಲ್ ಅವರ ನೇತೃತ್ವದಲ್ಲಿ, ಡಿಸೆಂಬರ್ 14, 1946 ರಂದು ಅಮುಲ್ ಎಂದು ಸಾಮಾನ್ಯವಾಗಿ ಕರೆಯಲ್ಪಡುವ

> **ಸಹಕಾರಿ ಸಂಸ್ಥೆಗಳು ಜಗತ್ತಿಗೆ ಮಾದರಿ, ಆದರೆ ಭಾರತಕ್ಕೆ ಅವು ಸಹಕಾರಿ ಸಂಸ್ಕೃತಿಯ ಅಡಿಪಾಯ, ಜೀವನ ವಿಧಾನ. ಇಂದು, ಭಾರತದಲ್ಲಿ, ನಾವು ಸರ್ಕಾರದ ಶಕ್ತಿ ಮತ್ತು ಸಹಕಾರವನ್ನು ಒಟ್ಟುಗೂಡಿಸಿ ಭಾರತವನ್ನು ಅಭಿವೃದ್ಧಿಪಡಿಸಲು ಕೆಲಸ ಮಾಡುತ್ತಿದ್ದೇವೆ. ನಾವು ಸಹಕಾರದ ಮೂಲಕ ಸಮೃದ್ಧಿಯ ಮಂತ್ರವನ್ನು ಅನುಸರಿಸುತ್ತಿದ್ದೇವೆ.**
>
> **ನರೇಂದ್ರ ಮೋದಿ, ಪ್ರಧಾನಮಂತ್ರಿ**

ಖೇಡಾ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟವು ಬಾಂಬೆ ಸಹಕಾರಿ ಸಂಘಗಳ ಕಾಯ್ದೆ 1925ರ ಅಡಿಯಲ್ಲಿ ನೋಂದಾಯಿಸಲ್ಪಟ್ಟಾಗ ಇತಿಹಾಸ ಸೃಷ್ಟಿಯಾಯಿತು. ಇದು 250 ಲೀಟರ್ ಹಾಲು ಸಂಗ್ರಹಿಸುವ ಒಂದು ಸಣ್ಣ ಹಳ್ಳಿಯಿಂದ ಪ್ರಾರಂಭವಾದ, ಸಾಧಾರಣ ಆರಂಭವನ್ನು ಹೊಂದಿದ್ದ ಮೊದಲ ಸಹಕಾರಿ ಸಂಸ್ಥೆಯಾಗಿತ್ತು. ಅಲ್ಲಿಂದ ವಿಶ್ವದ ಪ್ರಬಲ ಸಹಕಾರಿ ಬ್ರಾಂಡ್ ಅಮುಲ್ ಆಗುವ ಹಾದಿಯನ್ನು ತ್ರಿಭುವನ್ ದಾಸ್

# ಸಹಕಾರಿ ಬ್ಯಾಂಕುಗಳು

## ಸರ್ಕಾರದ ಉಪಕ್ರಮಗಳಿಂದ ಸಬಲೀಕರಣ

ಸಹಕಾರ ಸಚಿವಾಲಯ ರಚನೆಯಾದಾಗಿನಿಂದ, ಸಹಕಾರಿ ಬ್ಯಾಂಕುಗಳನ್ನು ಬಲಪಡಿಸುವ ಪ್ರಯತ್ನಗಳು ಹೆಚ್ಚಿವೆ. ಹೊಸ ಶಾಖೆಗಳನ್ನು ತೆರೆಯುವುದು, ಗ್ರಾಹಕರಿಗೆ ಮನೆ ಬಾಗಿಲಿಗೆ ಸೇವೆಗಳನ್ನು ಒದಗಿಸುವುದು, ಆರ್ ಬಿ ಐ ನಲ್ಲಿ ನೋಡಲ್ ಅಧಿಕಾರಿಯನ್ನು ನೇಮಿಸುವುದು ಮತ್ತು ವಸತಿ ಸಾಲದ ಮಿತಿಗಳನ್ನು ಹೆಚ್ಚಿಸುವುದು ಇದರಲ್ಲಿ ಸೇರಿವೆ.

- ನಗರ ಸಹಕಾರಿ ಬ್ಯಾಂಕುಗಳು ಈಗ ತಮ್ಮ ಹಿಂದಿನ ಹಣಕಾಸು ವರ್ಷದ ಒಟ್ಟು ಶಾಖೆಗಳ ಶೇ.10 ಅಥವಾ ಗರಿಷ್ಠ 5 ಶಾಖೆಗಳನ್ನು ಆರ್ ಬಿ ಐ ಪೂರ್ವಾನುಮತಿ ಇಲ್ಲದೆ ತೆರೆಯಲು ಅರ್ಹವಾಗಿವೆ.
- ನಗರ ಸಹಕಾರಿ ಬ್ಯಾಂಕುಗಳು ಗ್ರಾಹಕರಿಗೆ ಮನೆ ಬಾಗಿಲಿಗೆ ಸೇವೆಗಳನ್ನು ಒದಗಿಸಲು ಆರ್ ಬಿ ಐ ಅನುಮತಿ ನೀಡಿದೆ. ಈ ಬ್ಯಾಂಕುಗಳ ಖಾತೆದಾರರು ಈಗ ತಮ್ಮ ಮನೆ ಬಾಗಿಲಿನಲ್ಲಿ ನಗದು ಹಿಂಪಡೆಯುವಿಕೆ ಮತ್ತು ಠೇವಣಿ, ಕೆವೈಸಿ, ಡಿಮ್ಯಾಂಡ್ ಡ್ರಾಫ್ಟ್ ಮತ್ತು ಜೀವನ ಪ್ರಮಾಣಪತ್ರಗಳಂತಹ ಬ್ಯಾಂಕಿಂಗ್ ಸೇವೆಗಳನ್ನು ಪಡೆಯಬಹುದು.
- ನಗರ ಸಹಕಾರಿ ಬ್ಯಾಂಕುಗಳು ಈಗ ಆರ್ಥಿಕವಾಗಿ ಸದೃಢ ಮತ್ತು ಉತ್ತಮವಾಗಿ ನಿರ್ವಹಿಸಲ್ಪಟ್ಟ ಮಾನದಂಡಗಳನ್ನು ಪೂರೈಸಿದ ಮತ್ತು ಕನಿಷ್ಠ ಅಗತ್ಯವಿರುವ ಠೇವಣಿ ಬಾಕಿಯನ್ನು ಕಾಯ್ದುಕೊಂಡ ನಂತರ ಆರ್ ಬಿ ಐ ನ ಷೆಡ್ಯೂಲ್ II ರಲ್ಲಿ ಸೇರುವ ಮೂಲಕ ಅಧಿಸೂಚಿತ ಸ್ಥಾನಮಾನವನ್ನು ಪಡೆಯಬಹುದು.




ನಗರ ಸಹಕಾರಿ ಬ್ಯಾಂಕುಗಳ ಕಾರ್ಯಾಚರಣೆಯನ್ನು ಸುಗಮಗೊಳಿಸಲು ಆದ್ಯತಾ ವಲಯದ ಸಾಲ ನೀಡುವ ಗುರಿಯನ್ನು **ಶೇ.75 ರಿಂದ ಶೇ.60 ಕ್ಕೆ** ಇಳಿಸಲಾಗಿದೆ.

ನಗರ ಸಹಕಾರಿ ಬ್ಯಾಂಕ್ ಸದಸ್ಯರಿಗೆ ವಸತಿ ಸಾಲದ ಮಿತಿಯನ್ನು ಹೆಚ್ಚಿಸಲಾಗಿದೆ.

**ಶೇ. 10 ರಿಂದ ಶೇ.25** (3 ಕೋಟಿ ರೂ.ವರೆಗೆ)



- ಸಾಲದ ಮಿತಿಯನ್ನು 1 ಕೋಟಿ ರೂ.ಗಳಿಂದ 3 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದ್ದು, ಈ ಬ್ಯಾಂಕುಗಳು ಹೆಚ್ಚಿನ ಸಾಲದ ಬೇಡಿಕೆಯನ್ನು ಪೂರೈಸಲು, ವ್ಯವಹಾರದ ಬೆಳವಣಿಗೆಗೆ ಬೆಂಬಲ ನೀಡಲು ಮತ್ತು ಎಸ್ ಎಂ ಇ ಸಾಲ ವಲಯದಲ್ಲಿ ತಮ್ಮ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲು ಅನುವು ಮಾಡಿಕೊಡುತ್ತದೆ.
- ನಗರ ಸಹಕಾರಿ ಬ್ಯಾಂಕಿಂಗ್ ವಲಯಕ್ಕೆ ಒಂದು ಸಮೂಹ ಸಂಘಟನೆಯನ್ನು ಸ್ಥಾಪಿಸಲು ಆರ್ ಬಿ ಐ ಅನುಮೋದನೆ ನೀಡಿದೆ, ಇದು ಸುಮಾರು 1,500 ನಗರ ಸಹಕಾರಿ ಬ್ಯಾಂಕುಗಳು ಅಗತ್ಯವಾದ ಮಾಹಿತಿ ತಂತ್ರಜ್ಞಾನ ಮೂಲಸೌಕರ್ಯ ಮತ್ತು ಕಾರ್ಯಾಚರಣೆಗಳನ್ನು ಪಡೆಯಲು ದಾರಿ ಮಾಡಿಕೊಡುತ್ತದೆ.
- ನಗರ ಸಹಕಾರಿ ಬ್ಯಾಂಕುಗಳು ಇತರ ಬ್ಯಾಂಕುಗಳಂತೆಯೇ ಬಾಕಿ ಇರುವ ಸಾಲಗಳನ್ನು ಒಂದು ಬಾರಿಗೆ ಇತ್ಯರ್ಥಪಡಿಸಲು ಅನುಮತಿ ನೀಡಲಾಗಿದೆ. ಸಹಕಾರಿ ಬ್ಯಾಂಕುಗಳು ಈಗ ಮಂಡಳಿಯಿಂದ ಅನುಮೋದಿತ ನೀತಿಗಳ ಮೂಲಕ ಸಾಲಗಾರರಿಗೆ ತಾಂತ್ರಿಕ ರೈಟ್-ಆಫ್ ಗಳ ಪ್ರಕ್ರಿಯೆಯನ್ನು ಮತ್ತು ಇತರ ಸೇವೆಗಳನ್ನು ಒದಗಿಸಲು ಸಮರ್ಥವಾಗಿವೆ.
- ಗ್ರಾಮೀಣ ಸಹಕಾರಿ ಬ್ಯಾಂಕುಗಳ ವೈಯಕ್ತಿಕ ವಸತಿ ಸಾಲದ ಮಿತಿಯನ್ನು ಎರಡೂವರೆ ಪಟ್ಟು ಹೆಚ್ಚಿಸಿ ₹75 ಲಕ್ಷಕ್ಕೆ ಏರಿಸಲಾಗಿದೆ.

ಪಟೇಲ್ ಮುನ್ನಡೆಸಿದರು. ಸರ್ದಾರ್ ಪಟೇಲ್ ಅವರಂತಹ ಮಹಾನ್ ನಾಯಕರ ಸ್ಫೂರ್ತಿಯಿಂದ ತ್ರಿಭುವನ್ ದಾಸ್ ಭಾರತದಲ್ಲಿ ಸಹಕಾರಿ ಸಂಸ್ಥೆಗಳ ಅಡಿಪಾಯ ಹಾಕಿದ ವ್ಯಕ್ತಿಗಳಲ್ಲಿ ಒಬ್ಬರಾದರು. ಅಮುಲ್ ಎಂದೂ ಕರೆಯಲ್ಪಡುವ ಗುಜರಾತ್ ಸಹಕಾರಿ ಹಾಲು ಮಾರುಕಟ್ಟೆ ಒಕ್ಕೂಟವು ತ್ರಿಭುವನ್ ದಾಸ್ ಅವರ ದೂರದೃಷ್ಟಿಯ ಫಲಿತಾಂಶವಾಗಿದೆ.

2003 ರಲ್ಲಿ, ಅಮುಲ್ ನ ವಹಿವಾಟು ₹2,882 ಕೋಟಿಗಳಷ್ಟಿತ್ತು. ಇಂದು, ಅಮುಲ್ ನ ಮಾರಾಟ ₹90,000 ಕೋಟಿಗಳನ್ನು ದಾಟಿದೆ. ಇದು ಅನೇಕ ದೊಡ್ಡ ಬಹುರಾಷ್ಟ್ರೀಯ ಕಂಪನಿಗಳಿಗಿಂತ ಹಲವು ಪಟ್ಟು ಹೆಚ್ಚು. ಈ ಬೃಹತ್ ಆಂದೋಲನದಲ್ಲಿ, ಯಾರ ಷೇರು ಬಂಡವಾಳವೂ ₹100 ಮೀರಲಿಲ್ಲ. ಬಡ ರೈತ ಮಹಿಳೆಯರು ಇದನ್ನು ರಚಿಸಲು ತಲಾ ₹100 ಸಂಗ್ರಹಿಸಿದರು. ಇಂದು, ಜಗತ್ತು ಆಶ್ಚರ್ಯದಿಂದ ನೋಡುತ್ತಿದೆ ಮತ್ತು ಹಾಲು ಮತ್ತು ಇತರ ಸಂಬಂಧಿತ ವ್ಯವಹಾರಗಳನ್ನು ಒಳಗೊಂಡಿರುವ ಅಮುಲ್ ಗುಂಪಿನ ವಹಿವಾಟು ₹90,000 ಕೋಟಿಗಳನ್ನು ದಾಟಿದೆ. ಇದೊಂದು ಗುಂಪೇ ಗುಜರಾತಿನಲ್ಲಿ 3.6 ಮಿಲಿಯನ್ ಮಹಿಳೆಯರಿಗೆ ಸ್ವಯಂ ಉದ್ಯೋಗವನ್ನು ಒದಗಿಸುತ್ತಿದೆ.

1947ರಲ್ಲಿ ಸ್ವಾತಂತ್ರ್ಯದ ನಂತರ, ಯೋಜನಾ ಆಯೋಗವು




- ನಗರ ಸಹಕಾರಿ ಬ್ಯಾಂಕುಗಳೊಂದಿಗೆ ನಿಯಮಿತ ಸಂವಹನಕ್ಕಾಗಿ ಆರ್ ಬಿ ಐ ನಲ್ಲಿ ನೋಡಲ್ ಅಧಿಕಾರಿಯನ್ನು ನೇಮಿಸಲಾಗಿದೆ.
- ಸಹಕಾರಿ ಬ್ಯಾಂಕುಗಳನ್ನು ಆಧಾರ್ ಆಧಾರಿತ ಪಾವತಿ ವ್ಯವಸ್ಥೆಗೆ ಸೇರಿಸಲು ಪರವಾನಗಿ ಶುಲ್ಕವನ್ನು ವಹಿವಾಟುಗಳ ಸಂಖ್ಯೆಗೆ ಲಿಂಕ್ ಮಾಡುವ ಮೂಲಕ ಕಡಿಮೆ ಮಾಡಲಾಗಿದೆ. ಇದು ಸದಸ್ಯರು ಬಯೋಮೆಟ್ರಿಕ್ಸ್ ಮೂಲಕ ಮನೆಯಲ್ಲಿಯೇ ಬ್ಯಾಂಕಿಂಗ್ ಸೇವೆಗಳನ್ನು ಪಡೆಯಲು ಅನುವು ಮಾಡಿಕೊಡುತ್ತದೆ.
- ಸರ್ಕಾರವು ನಗರ ಸಹಕಾರಿ ಬ್ಯಾಂಕುಗಳು ಮತ್ತು ಸಹಕಾರಿ ಸಾಲ ಸಂಘಗಳ ಸುಧಾರಣೆಗಳ ಕುರಿತು ರಾಷ್ಟ್ರೀಯ ನಗರ ಸಹಕಾರಿ ಬ್ಯಾಂಕುಗಳು ಮತ್ತು ಸಾಲ ಸಂಘಗಳ ಒಕ್ಕೂಟದ ಅಡಿಯಲ್ಲಿ ಒಂದು ಕಾರ್ಯಪಡೆಯನ್ನು ರಚಿಸಿದ್ದು, ಈಗಾಗಲೇ ಎರಡು ವರದಿಗಳನ್ನು ಸಲ್ಲಿಸಲಾಗಿದೆ.

**ಕೃಷಿ ಸಹಕಾರ ಸಂಘಗಳಿಗೆ (ಡೈರಿ) ಆದ್ಯತಾ ವಲಯದ ಸಾಲ ಮಿತಿಯನ್ನು ಆರ್ ಬಿ ಐ ಹೆಚ್ಚಿಸಿದೆ**




- ಈ ಹೆಚ್ಚಳದೊಂದಿಗೆ, ಬ್ಯಾಂಕುಗಳು ಈ ಸಂಘಗಳಿಗೆ ಹೆಚ್ಚಿನ ಸಾಲ ಬೆಂಬಲವನ್ನು ಒದಗಿಸಲು ಸಾಧ್ಯವಾಗುತ್ತದೆ, ಕೃಷಿ ಮೂಲಸೌಕರ್ಯ ಬಲಗೊಳ್ಳುತ್ತದೆ ಮತ್ತು ಹಳ್ಳಿಗಳಲ್ಲಿ ಸಾಲದ ಹರಿವು ಹೆಚ್ಚಾಗುತ್ತದೆ.

ರೂಪಿಸಿದ ವಿವಿಧ ಪಂಚವಾರ್ಷಿಕ ಯೋಜನೆಗಳಲ್ಲಿ ಸಹಕಾರಿ ಚಳುವಳಿಗೆ ಮಹತ್ವದ ಪಾತ್ರವನ್ನು ನೀಡಿದ್ದರಿಂದ, ಅವುಗಳಿಗೆ ವೇಗ ದೊರೆಯಿತು. 2002 ರಲ್ಲಿ, ಕೇಂದ್ರ ಸರ್ಕಾರವು ರಾಷ್ಟ್ರೀಯ ಸಹಕಾರಿ ನೀತಿಯನ್ನು ಘೋಷಿಸಿತು. ದೇಶದಲ್ಲಿ ಸಹಕಾರಿ ಸಂಘಗಳ ಒಟ್ಟಾರೆ ಅಭಿವೃದ್ಧಿಯನ್ನು ಬಲಪಡಿಸುವುದು ಈ ನೀತಿಯ ಉದ್ದೇಶವಾಗಿತ್ತು. ಈ ನೀತಿಯನ್ನು ಜಾರಿಗೆ ತರಲು ಕ್ರಿಯಾ ಯೋಜನೆಯನ್ನು ಅಭಿವೃದ್ಧಿಪಡಿಸಲು ಸಚಿವರ ಮಟ್ಟದ ಕಾರ್ಯಪಡೆಯನ್ನು ರಚಿಸಲಾಯಿತು. ಈ ಕಾರ್ಯಪಡೆ ರಾಜ್ಯಗಳಲ್ಲಿ ಸಮಾನಾಂತರ ಕಾನೂನುಗಳ ಬದಲಿಗೆ ಒಂದೇ ಕಾನೂನನ್ನು

> **ಒಟ್ಟು ದೇಶೀಯ ಉತ್ಪನ್ನ ಮತ್ತು ಉದ್ಯೋಗ ಸೃಷ್ಟಿ ಭಾರತದ ಆರ್ಥಿಕ ಪ್ರಗತಿಯನ್ನು ಅಳೆಯುವ ಎರಡು ಪ್ರಮುಖ ಮಾಪಕಗಳಾಗಿವೆ. ವಿಶ್ವದ ಅತಿದೊಡ್ಡ ಆಹಾರ ಧಾನ್ಯ ಸಂಗ್ರಹಣಾ ಯೋಜನೆಯು ಈ ಎರಡೂ ಅಂಶಗಳನ್ನು ಬಲಪಡಿಸುವ, ಪಿಎಸಿಎಸ್ ಆದಾಯವನ್ನು ಹೆಚ್ಚಿಸುವ ಹಾಗೂ ಗ್ರಾಮೀಣ ಉದ್ಯೋಗ ಅವಕಾಶಗಳನ್ನು ಸೃಷ್ಟಿಸುವ ಗುರಿಯನ್ನು ಹೊಂದಿದೆ.**
>
> **ಅಮಿತ್ ಶಾ, ಕೇಂದ್ರ ಗೃಹ ವ್ಯವಹಾರಗಳು ಮತ್ತು ಸಹಕಾರ ಸಚಿವರು**

ಜಾರಿಗೆ ತರಲು ಶಿಫಾರಸು ಮಾಡಿತು. ಭಾರತದಲ್ಲಿನ ಸಹಕಾರಿ ವ್ಯವಸ್ಥೆಯನ್ನು ವಿಶಾಲವಾಗಿ ಎರಡು ವಿಧಗಳಾಗಿ ವಿಂಗಡಿಸಬಹುದು: ಸಾಲ ಮತ್ತು ಸಾಲಯೇತರ ಸಹಕಾರಿ ಸಂಸ್ಥೆಗಳು.

ಸಾಲ ಸಹಕಾರ ಸಂಘಗಳು ಕೃಷಿ, ಬಳಕೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಮಾರುಕಟ್ಟೆಗೆ ಕೈಗೆಟುಕುವ ಬಡ್ಡಿದರಗಳಲ್ಲಿ ಸಾಲಗಳನ್ನು ಖಚಿತಪಡಿಸುತ್ತವೆ; ಗ್ರಾಹಕ ಸಹಕಾರ ಸಂಘಗಳು ರೈತರ ಬಳಕೆಯ ಬೇಡಿಕೆಯನ್ನು ರಿಯಾಯಿತಿ ದರದಲ್ಲಿ ಪೂರೈಸುತ್ತವೆ. ಮಾರುಕಟ್ಟೆ ಸಂಘಗಳು ಸರಕು ವಹಿವಾಟುಗಳಲ್ಲಿ ಮಧ್ಯವರ್ತಿಗಳನ್ನು ನಿವಾರಿಸುತ್ತವೆ, ಉತ್ಪನ್ನಗಳಿಗೆ ಲಾಭದಾಯಕ ಬೆಲೆಗಳನ್ನು ಖಚಿತಪಡಿಸುತ್ತವೆ. ಸಹಕಾರ ಸಂಘಗಳು ಕೃಷಿ ಮತ್ತು ಸಣ್ಣ ಪ್ರಮಾಣದ ಉದ್ಯಮಗಳಿಗೆ ಮಾರುಕಟ್ಟೆ, ಸಂಸ್ಕರಣೆ, ವಿತರಣೆ ಮತ್ತು ಪೂರೈಕೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ಸಹ ಕೈಗೊಳ್ಳುತ್ತವೆ.

ದೇಶದಲ್ಲಿ 800,000 ಕ್ಕೂ ಹೆಚ್ಚು ನೋಂದಾಯಿತ ಸಹಕಾರಿ ಸಂಘಗಳಿದ್ದು, 300 ಮಿಲಿಯನ್ ಗಿಂತಲೂ ಹೆಚ್ಚು ಸದಸ್ಯರು ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಸಹಕಾರಿ ವಲಯವು ದೇಶದ ಒಟ್ಟಾರೆ ಆರ್ಥಿಕ ಅಭಿವೃದ್ಧಿಯಲ್ಲಿ ಯಾವಾಗಲೂ ಪ್ರಮುಖ ಪಾತ್ರ ವಹಿಸಿದೆ. ಸಹಕಾರಿ ಮಾದರಿಯು ಭಾರತೀಯ ಸಮಾಜದ ಆರ್ಥಿಕವಾಗಿ ಹಿಂದುಳಿದ ವರ್ಗಗಳನ್ನು ಸಬಲೀಕರಣಗೊಳಿಸುವ ಮೂಲಕ ವ್ಯಾಪಕ ಆರ್ಥಿಕ ಸಮೃದ್ಧಿಯನ್ನು ಸೃಷ್ಟಿಸುತ್ತಿದೆ.

### ಸಹಕಾರ ಸೇ ಸಮೃದ್ಧಿ ಎಂಬ ಮಂತ್ರದೊಂದಿಗೆ ಸಚಿವಾಲಯವನ್ನು ರಚಿಸಲಾಗಿದೆ

ಸಹಕಾರಿ ಸಂಸ್ಥೆಗಳು ಭಾರತದ ಮೂಲಭೂತ ತತ್ವ, ಪ್ರಕೃತಿ ಮತ್ತು ಸಂಸ್ಕೃತಿಯೊಂದಿಗೆ ಹೊಂದಿಕೊಂಡಿವೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು, ಜುಲೈ 6, 2021 ರಂದು ಸಹಕಾರ ಸಚಿವಾಲಯ ಎಂಬ ಹೊಸ ಸಚಿವಾಲಯವನ್ನು ಸ್ಥಾಪಿಸುವ ಮೂಲಕ ಸಹಕಾರ ಸೇ ಸಮೃದ್ಧಿ ಎಂಬ ಮಂತ್ರವನ್ನು ಸಾಕಾರಗೊಳಿಸಲು ಐತಿಹಾಸಿಕ ಹೆಜ್ಜೆ ಇಟ್ಟಿತು. ಸಹಕಾರಿ




ವಲಯವನ್ನು ಬಲಪಡಿಸಲು ವಿಶಿಷ್ಟವಾದ ಆಡಳಿತಾತ್ಮಕ, ಕಾನೂನು ಮತ್ತು ನೀತಿ ಚೌಕಟ್ಟನ್ನು ಒದಗಿಸುವುದು ಇದರ ಉದ್ದೇಶವಾಗಿತ್ತು. ಸಹಕಾರಿ ಆಧಾರಿತ ಅಭಿವೃದ್ಧಿ ಮಾದರಿಯು ದೇಶದಲ್ಲಿ ಹೆಚ್ಚು ಪ್ರಸ್ತುತವಾಗಿದೆ, ಇಲ್ಲಿ ಪ್ರತಿಯೊಬ್ಬ ಸದಸ್ಯರು ತಮ್ಮ ಜವಾಬ್ದಾರಿಗಳಿಗೆ ಅನುಗುಣವಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ.

ಸಹಕಾರ ಸಂಸ್ಥೆಗಳು ವ್ಯವಹಾರ ಮಾಡುವುದನ್ನು ಸುಲಭಗೊಳಿಸಲು, ಪ್ರಕ್ರಿಯೆಗಳನ್ನು ಸುಗಮಗೊಳಿಸಲು ಮತ್ತು ಬಹು-ರಾಜ್ಯ ಸಹಕಾರಿ ಸಂಸ್ಥೆಗಳ ಅಭಿವೃದ್ಧಿಯನ್ನು ಸಕ್ರಿಯಗೊಳಿಸಲು ಹೊಸ ಸಹಕಾರ ಸಚಿವಾಲಯ ಕೆಲಸ ಮಾಡುತ್ತಿದೆ. ಪ್ರಾಚೀನ ಕಾಲದಿಂದಲೂ ಸಹಕಾರಿ ಆರ್ಥಿಕ ಮಾದರಿ ಭಾರತದಲ್ಲಿ ಪ್ರಚಲಿತವಾಗಿದೆ. ಪ್ರಸ್ತುತ, ಅಮುಲ್ ನಂತಹ ಪ್ರಮುಖ ಚಳುವಳಿಗಳು ಸಹಕಾರಿ ಸಂಸ್ಥೆಗಳ ಪ್ರಯೋಜನಗಳನ್ನು ಪ್ರತಿ ಹಳ್ಳಿ ಮತ್ತು ಪ್ರತಿ ಕುಟುಂಬಕ್ಕೆ ತಲುಪಿಸಿವೆ. ರೈತರ ಆದಾಯವನ್ನು ಹೆಚ್ಚಿಸುವಲ್ಲಿ ಮತ್ತು ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸುವಲ್ಲಿ, ಗ್ರಾಮಗಳನ್ನು ಸ್ವಾವಲಂಬಿಗಳನ್ನಾಗಿ ಮಾಡುವಲ್ಲಿ ಸಹಕಾರಿ ಚಳುವಳಿ ಪ್ರಮುಖ ಪಾತ್ರ ವಹಿಸುತ್ತದೆ. ಸಹಕಾರ ಸಚಿವಾಲಯದ ಸ್ಥಾಪನೆಯೊಂದಿಗೆ ಕೇಂದ್ರ ಸರ್ಕಾರವು ಸಮುದಾಯ ಆಧಾರಿತ ಅಭಿವೃದ್ಧಿ ಪಾಲುದಾರಿಕೆಗಳಿಗೆ ತನ್ನ ಆಳವಾದ ಬದ್ಧತೆಯನ್ನು ಪ್ರದರ್ಶಿಸಿದೆ. "ಸಹಕಾರ್ ಸೇ ಸಮೃದ್ಧಿ" ವಿಧಾನದ ಮೂಲಕ ಸಹಕಾರಿ ಸಂಸ್ಥೆಗಳನ್ನು ಬಲಪಡಿಸಲು ದೀರ್ಘಾವಧಿಯ ದೃಷ್ಟಿಕೋನ ಮತ್ತು ಆಡಳಿತಾತ್ಮಕ ಸುಧಾರಣೆಗಳು ಸಹಕಾರಿ ವಲಯವನ್ನು ಪರಿವರ್ತಿಸಿವೆ.

**ಸಹಕಾರಿ ವಲಯ: ಮೊದಲು ಮತ್ತು ಈಗ**

ಏಳು ದಶಕಗಳಿಗೂ ಹೆಚ್ಚು ಕಾಲ, ದೇಶದ ರೈತರು, ಗ್ರಾಮೀಣ ಜನಸಂಖ್ಯೆ ಮತ್ತು ಸಹಕಾರಿ ಮುಖಂಡರು ಸಹಕಾರಿ ಸಂಸ್ಥೆಗಳಿಗೆ ಪ್ರತ್ಯೇಕ ಸಚಿವಾಲಯಕ್ಕಾಗಿ ಒತ್ತಾಯಿಸುತ್ತಿದ್ದರು. ಪ್ರಧಾನಿ ನರೇಂದ್ರ ಮೋದಿಯವರು ಈ ಬೇಡಿಕೆಯನ್ನು ಈಡೇರಿಸಿದರು. ಸಹಕಾರಿ ಸಚಿವಾಲಯದ ಸ್ಥಾಪನೆಯೊಂದಿಗೆ, ಸಹಕಾರಿ ಸಂಸ್ಥೆಗಳ ಅಭಿವೃದ್ಧಿಯಲ್ಲಿ ಹೊಸ ಅಧ್ಯಾಯ ಪ್ರಾರಂಭವಾಯಿತು. ಏಳು ದಶಕಗಳಿಗೂ ಹೆಚ್ಚು ಕಾಲ, ಈ ವಲಯವು ಅರ್ಹವಾದ ಗಮನವನ್ನು ಪಡೆಯಲಿಲ್ಲ. ಸಹಕಾರಿ ಚಳುವಳಿಯೂ ಸಹ ವಿವಿಧ ಪ್ರದೇಶಗಳಲ್ಲಿ ಏಕರೂಪವಾಗಿ ಕಾರ್ಯನಿರ್ವಹಿಸುತ್ತಿರಲಿಲ್ಲ. ಇದು ಪಶ್ಚಿಮ ಮತ್ತು ದಕ್ಷಿಣದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿತ್ತು, ದೇಶದ ಮಧ್ಯ ಭಾಗದಲ್ಲಿ ಸಾಧಾರಣವಾಗಿತ್ತು, ಉತ್ತರದಲ್ಲಿ ದುರ್ಬಲವಾಗಿತ್ತು ಮತ್ತು ಪೂರ್ವದಲ್ಲಿ ಇನ್ನೂ ದುರ್ಬಲವಾಗಿತ್ತು. ಪ್ರತ್ಯೇಕ ಸಹಕಾರಿ ಸಚಿವಾಲಯದ ಸ್ಥಾಪನೆಯೊಂದಿಗೆ, ಈ ವಲಯವು ರಚನಾತ್ಮಕ ಸಾಂಸ್ಥಿಕ ಗಮನವನ್ನು ಪಡೆಯಿತು. ಎಲ್ಲಾ ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ಸಹಕಾರಿ ದತ್ತಸಂಚಯವನ್ನು ರಚಿಸಲಾಗಿದೆ. ಇಂದು, ಪ್ರತಿಯೊಂದು ಪ್ರದೇಶದಲ್ಲಿರುವ ಸಹಕಾರಿ ಸಂಸ್ಥೆಗಳ ಸಂಖ್ಯೆಯ ಡೇಟಾವನ್ನು ಯಾರಾದರೂ ವೀಕ್ಷಿಸಬಹುದು ಮತ್ತು ಡೈರಿ, ಪಿಎಸಿಎಸ್, ಮಾರ್ಕೆಟಿಂಗ್, ಮೀನುಗಾರಿಕೆ ಮತ್ತು ವಸತಿಗಳ ಮಾಹಿತಿಯೂ ಸುಲಭವಾಗಿ ಲಭ್ಯವಿದೆ. ತರುವಾಯ, ಕೇಂದ್ರ ಸರ್ಕಾರವು 200,000 ಹೊಸ

> **ರಾಷ್ಟ್ರೀಯ ಸಹಕಾರಿ ನೀತಿ 2025 ದೇಶದಲ್ಲಿ ಸುಸ್ಥಿರ ಸಹಕಾರಿ ಅಭಿವೃದ್ಧಿಗಾಗಿ ಸಮಗ್ರ ಮಾರ್ಗಸೂಚಿಯನ್ನು ಒದಗಿಸುತ್ತದೆ. ಈ ಮಾರ್ಗಸೂಚಿಯು ಸಹಕಾರಿ ಪರಿಸರ ವ್ಯವಸ್ಥೆಯನ್ನು ತಳಮಟ್ಟದಲ್ಲಿ ಬಲಪಡಿಸಲು ಭಾರತ ಸರ್ಕಾರದ ಯೋಜನೆಗಳೊಂದಿಗೆ ಸಮನ್ವಯವನ್ನು ಸಹ ಒಳಗೊಂಡಿದೆ. ಸಹಕಾರಿ ನೇತೃತ್ವದ ಶ್ವೇತ ಕ್ರಾಂತಿ 2.0 ಅಡಿಯಲ್ಲಿ, ಮುಂದಿನ ಐದು ವರ್ಷಗಳಲ್ಲಿ ಹಾಲು ಸಂಗ್ರಹಣೆಯನ್ನು ಶೇ.50 ರಷ್ಟು ಹೆಚ್ಚಿಸಲು ಪ್ರಯತ್ನಗಳು ನಡೆಯುತ್ತಿವೆ.**
>
> **ಅಮಿತ್ ಶಾ,**
> **ಕೇಂದ್ರ ಗೃಹ ವ್ಯವಹಾರಗಳು ಮತ್ತು ಸಹಕಾರ ಸಚಿವರು**



# ಭಾರತ್ ಟ್ಯಾಕ್ಸಿ

## ಭಾರತದ ಮೊದಲ ಸಹಕಾರಿ ಆಧಾರಿತ ಮೊಬಿಲಿಟಿ ವೇದಿಕೆ

ಸಹಕಾರ್ ಟ್ಯಾಕ್ಸಿ ಕೋಆಪರೇಟಿವ್ ಲಿಮಿಟೆಡ್ ದೇಶದ ಮೊದಲ ಸಹಕಾರಿ-ಆಧಾರಿತ ಮೊಬಿಲಿಟಿ ವೇದಿಕೆಯಾಗಿದ್ದು, ಇದು ಚಾಲಕರನ್ನು ಸಬಲೀಕರಣಗೊಳಿಸುವ ಮತ್ತು ಸಾರ್ವಜನಿಕರಿಗೆ ಕೈಗೆಟುಕುವ ಮತ್ತು ವಿಶ್ವಾಸಾರ್ಹ ಸಾರಿಗೆಯನ್ನು ಒದಗಿಸುವ ಗುರಿಯನ್ನು ಹೊಂದಿದೆ. ಸಹಕಾರ, ಪಾರದರ್ಶಕತೆ ಮತ್ತು ಹಂಚಿಕೆಯ ಮಾಲೀಕತ್ವದ ಆಧಾರದ ಮೇಲೆ, ಸಹಕಾರ್ ಟ್ಯಾಕ್ಸಿ ಸಾಂಪ್ರದಾಯಿಕ ಸವಾರಿ-ಸೇವೆ ವೇದಿಕೆಗಳಿಗೆ ಜನ-ಕೇಂದ್ರಿತ ವಿಧಾನವಾಗಿದೆ. "ಭಾರತ್ ಟ್ಯಾಕ್ಸಿ" ಎಂಬ ಹೆಸರಿನಲ್ಲಿ ಶೀಘ್ರದಲ್ಲೇ ಬಿಡುಗಡೆಯಾಗಲಿರುವ ಈ ವೇದಿಕೆಯು ಭಾರತದಲ್ಲಿ ಮೊಬಿಲಿಟಿ ಚಿತ್ರಣವನ್ನು ಪರಿವರ್ತಿಸುವ ಗುರಿಯನ್ನು ಹೊಂದಿದೆ. ಈ ಉಪಕ್ರಮವು ಸಹಕಾರಿ-ಚಾಲಿತ, ಪಾರದರ್ಶಕ ಮತ್ತು ನಾಗರಿಕರಿಗೆ ಮೊದಲ ಸವಾರಿ-ಸೇವೆ ವೇದಿಕೆಯೊಂದಿಗೆ ಮೊಬಿಲಿಟಿ ಪರಿಸರ ವ್ಯವಸ್ಥೆಯನ್ನು ಪರಿವರ್ತಿಸುವ ಗುರಿಯನ್ನು ಹೊಂದಿದೆ. ಈ ಯೋಜನೆಯನ್ನು ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ, ಇಫ್ಕೋ, ನ್ಯಾಫೆಡ್, ಅಮುಲ್, ಕ್ರಿಬ್ಕೊ, ಎನ್ ಡಿ ಡಿ ಬಿ, ಎನ್ ಸಿ ಇ ಎಲ್ ಮತ್ತು ನಬಾರ್ಡ್ ಜಂಟಿಯಾಗಿ ಉತ್ತೇಜಿಸುತ್ತಿವೆ.

*ಸಹಕಾರಿ ಸಂಸ್ಥೆಗಳು ದೇಶದಲ್ಲಿ ಸಕ್ಕರೆ ಉತ್ಪಾದನೆಯಲ್ಲಿ ಮೂರನೇ ಒಂದು ಭಾಗ, ರಸಗೊಬ್ಬರ ಉತ್ಪಾದನೆಯಲ್ಲಿ ನಾಲ್ಕನೇ ಒಂದು ಭಾಗ, ಕೃಷಿ ಸಾಲಗಳು, ಭತ್ತ ಮತ್ತು ಮೀನು ಸಂಗ್ರಹಣೆಯಲ್ಲಿ ಐದನೇ ಒಂದು ಭಾಗ ಮತ್ತು ಹಾಲು ಉತ್ಪಾದನೆ ಮತ್ತು ವಿತರಣೆಯಲ್ಲಿ ಹತ್ತನೇ ಒಂದು ಭಾಗದ ಕೊಡುಗೆ ನೀಡುತ್ತಿವೆ.*

ಪ್ರಾಥಮಿಕ ಸಹಕಾರಿ ಸಂಘಗಳನ್ನು (ಪಿಎಸಿಎಸ್) ರಚಿಸಲು ನಿರ್ಧರಿಸಿತು, ಇದರಿಂದಾಗಿ ದೇಶದಲ್ಲಿ ಒಂದೇ ಒಂದು ಪಂಚಾಯತ್ ಪಿಎಸಿಎಸ್ ಇಲ್ಲದೆ ಇರುವುದನ್ನು ಖಚಿತಪಡಿಸಿಕೊಂಡಿದೆ. ಕೇಂದ್ರ ಸರ್ಕಾರದ ಪ್ರಯತ್ನಗಳಿಗೆ ಧನ್ಯವಾದಗಳು, ಕೇಂದ್ರ ಸರ್ಕಾರದ ಮಾದರಿ ಪಿಎಸಿಎಸ್ ನ ಬೈಲಾಗಳನ್ನು ದೇಶಾದ್ಯಂತ, ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಮತ್ತು ಈಶಾನ್ಯದಿಂದ ದ್ವಾರಕಾದವರೆಗೆ ಅನುಮೋದಿಸಲಾಗಿದೆ.

ಈ ಬದಲಾವಣೆಯು ಪಿಎಸಿಎಸ್ ಗೆ 25ಕ್ಕೂ ಹೆಚ್ಚು ಆರ್ಥಿಕ ಚಟುವಟಿಕೆಗಳನ್ನು ಸೇರಿಸಿದೆ. ಇದು ಚುನಾವಣಾ ವ್ಯವಸ್ಥೆ ಮತ್ತು ಎಲ್ಲಾ ಭಾಷೆಗಳಲ್ಲಿ ಲಭ್ಯವಿರುವ ಸಾಮಾನ್ಯ ಲೆಕ್ಕಪತ್ರ ಸಾಫ್ಟ್ವೇರ್ ಅನ್ನು ಸಂಯೋಜಿಸಿದೆ. ಪಿಎಸಿಎಸ್ ಅಲ್ಪಾವಧಿ, ಮಧ್ಯಮ ಮತ್ತು ದೀರ್ಘಾವಧಿಯ ಕೃಷಿ ಸಾಲಗಳನ್ನು ಒದಗಿಸುತ್ತವೆ. ಅವುಗಳು ಈಗ ಸುಧಾರಿತ ಬೀಜಗಳನ್ನು ವಿತರಿಸುತ್ತವೆ, ಹಣ್ಣು ಮತ್ತು ತರಕಾರಿ ಕೃಷಿ ಮತ್ತು ಜೇನುಸಾಕಣೆಯನ್ನು ಉತ್ತೇಜಿಸುತ್ತವೆ. ಪಿಎಸಿಎಸ್ ಮೀನುಗಾರಿಕಾ ಸಂಘಗಳು ಮತ್ತು ಪಿಎಸಿಎಸ್ ಡೈರಿಗಳನ್ನು ರಚಿಸಲಾಗುತ್ತಿದೆ ಮತ್ತು ರೇಷ್ಮೆ ಕೃಷಿಯಂತಹ ಇತರ ಚಟುವಟಿಕೆಗಳನ್ನು ಸಹ ಕೈಗೊಳ್ಳಲಾಗುತ್ತಿದೆ. ಪಿಎಸಿಎಸ್ ಸಾಮಾನ್ಯ ಸೇವಾ ಕೇಂದ್ರವಾಗಿಯೂ ಕಾರ್ಯನಿರ್ವಹಿಸುತ್ತದೆ.

ಇಂದು, ದೇಶಾದ್ಯಂತ 50,000ಕ್ಕೂ ಹೆಚ್ಚು ಪಿಎಸಿಎಸ್ ಗಳನ್ನು ಸಾಮಾನ್ಯ ಸೇವಾ ಕೇಂದ್ರಗಳಾಗಿ ಅಭಿವೃದ್ಧಿಪಡಿಸಲಾಗಿದ್ದು, 300ಕ್ಕೂ ಹೆಚ್ಚು ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳನ್ನು ಒಳಗೊಂಡಿವೆ. ಜನನ ಮತ್ತು ಮರಣ ನೋಂದಣಿ, ವಿಮಾನ ಮತ್ತು ರೈಲು ಟಿಕೆಟ್ ಬುಕಿಂಗ್ ಮತ್ತು ಯಾವುದೇ ಪರಿಶೀಲನಾ ಪ್ರಕ್ರಿಯೆಯನ್ನು ಪಿಎಸಿಎಸ್ ಮೂಲಕ ಮಾಡಲಾಗುತ್ತಿದೆ. ದೇಶಾದ್ಯಂತ 36,000 ಪ್ರಧಾನ ಮಂತ್ರಿ ಕಿಸಾನ್ ಸಮೃದ್ಧಿ ಕೇಂದ್ರಗಳು (ಪಿಎಂಕೆವಿಕೆ) ಕಾರ್ಯನಿರ್ವಹಿಸುತ್ತಿವೆ. 4,000 ಕ್ಕೂ ಹೆಚ್ಚು ಪ್ರಧಾನ ಮಂತ್ರಿ ಜನೌಷಧಿ ಕೇಂದ್ರಗಳನ್ನು (ಪಿಎಂಜೆಎವೈ) ಇಲ್ಲಿ ತೆರೆಯಲಾಗುತ್ತಿದೆ. ಹೆಚ್ಚುವರಿಯಾಗಿ, ಅನೇಕ ಪಿ ಎ ಸಿ ಎಸ್ ಗಳು ತಮ್ಮದೇ ಆದ ಪೆಟ್ರೋಲ್ ಪಂಪ್ ಗಳನ್ನು ತೆರೆಯುತ್ತಿವೆ. ಹಲವಾರು ಪಿ ಎ ಸಿ ಎಸ್ ಗಳು ಎಲ್ ಪಿ ಜಿ ವಿತರಣೆಗೆ ಅರ್ಜಿ ಸಲ್ಲಿಸಿವೆ. ಹಿಂದೆ ಖಾಸಗಿಯವರ ಕೈಯಲ್ಲಿದ್ದ ಧಾನ್ಯ ಸಂಗ್ರಹಣೆಯನ್ನು ಈಗ ಪ್ರಧಾನಿ ಮೋದಿಯವರ ನೇತೃತ್ವದಲ್ಲಿ ವಿಶ್ವದ ಅತಿದೊಡ್ಡ ಆಹಾರ ಧಾನ್ಯ ಸಂಗ್ರಹಣಾ ಯೋಜನೆಯಾಗಿ ಜಾರಿಗೆ ತರಲಾಗುತ್ತಿದೆ. ಇಲ್ಲಿಯವರೆಗೆ,




## 3 ರಾಷ್ಟ್ರೀಯ ಬಹು-ರಾಜ್ಯ ಸಹಕಾರಿ ಸಂಸ್ಥೆಗಳ ಮೂಲಕ ಸಮೃದ್ಧಿ

**ಸಹಕಾರಿ ವಲಯ, ಕೃಷಿ ಮತ್ತು ರೈತರ ಸಮೃದ್ಧಿಯನ್ನು ಉತ್ತೇಜಿಸಲು ಮೂರು ರಾಷ್ಟ್ರೀಯ ಮಟ್ಟದ ಸಹಕಾರಿ ಸಂಘಗಳನ್ನು ರಚಿಸಲಾಗಿದೆ.**

### 1. ರಾಷ್ಟ್ರೀಯ ಸಹಕಾರಿ ಸಾವಯವ ಲಿಮಿಟೆಡ್

ಸಾವಯವ ಉತ್ಪನ್ನಗಳ ಸಂಗ್ರಹಣೆ, ಪ್ರಮಾಣೀಕರಣ, ಪರೀಕ್ಷೆ, ಖರೀದಿ, ಸಂಸ್ಕರಣೆ, ಶೇಖರಣೆ, ಬ್ರ್ಯಾಂಡಿಂಗ್, ಲೇಬಲಿಂಗ್, ಪ್ಯಾಕೇಜಿಂಗ್ ಮತ್ತು ಮಾರುಕಟ್ಟೆಯನ್ನು ಖಚಿತಪಡಿಸುತ್ತದೆ, ರೈತರು ತಮ್ಮ ಉತ್ಪನ್ನಗಳಿಗೆ ನ್ಯಾಯಯುತ ಬೆಲೆ ಪಡೆಯುವುದನ್ನು ಖಚಿತಪಡಿಸುತ್ತದೆ.

**7,031**

ಪಿಎಸಿಎಸ್ ಮತ್ತು ಸಹಕಾರಿ ಸಂಘಗಳು ಸದಸ್ಯರಾಗಿವೆ.

"ಭಾರತ್ ಆರ್ಗಾನಿಕ್ಸ್" ಎಂಬ ಬ್ರಾಂಡ್ ಹೆಸರಿನಲ್ಲಿ ಉತ್ಪನ್ನಗಳನ್ನು ಬಿಡುಗಡೆ ಮಾಡಲಾಗಿದೆ. ದೆಹಲಿ-ಎನ್ ಸಿ ಆರ್ ಪ್ರದೇಶದಲ್ಲಿ 25 ಸಾವಯವ ಉತ್ಪನ್ನಗಳು ಲಭ್ಯವಿವೆ.

ಎಲ್ಲಾ ಭಾರತ್ ಆರ್ಗಾನಿಕ್ಸ್ ಉತ್ಪನ್ನಗಳನ್ನು ಮಾನ್ಯತೆ ಪಡೆದ ಪ್ರಯೋಗಾಲಯಗಳಲ್ಲಿ 245 ಕ್ಕೂ ಹೆಚ್ಚು ಕೀಟನಾಶಕಗಳಿಗಾಗಿ ಪರೀಕ್ಷಿಸಲಾಗುತ್ತದೆ.

### 2. ರಾಷ್ಟ್ರೀಯ ಸಹಕಾರಿ ರಫ್ತು ಲಿಮಿಟೆಡ್ (ಎನ್ ಸಿ ಇ ಎಲ್)

**ಇದು ರೈತರ ಉತ್ಪನ್ನಗಳನ್ನು ಅಂತಾರಾಷ್ಟ್ರೀಯ ಮಾರುಕಟ್ಟೆಗೆ ರಫ್ತು ಮಾಡಲು ಸಂಬಂಧಿಸಿದ ಎಲ್ಲಾ ಸೌಲಭ್ಯಗಳನ್ನು ಒದಗಿಸುತ್ತದೆ ಮತ್ತು ಇದರಲ್ಲಿ ಬರುವ ಸಂಪೂರ್ಣ ಲಾಭ ರೈತರಿಗೆ ಹೋಗುತ್ತದೆ.**

- 9,425 ಪಿಎಸಿಎಸ್ ಮತ್ತು ಸಹಕಾರಿ ಸಂಘಗಳು ಎನ್ ಸಿ ಇ ಎಲ್ ನ ಸದಸ್ಯರಾಗಿವೆ.
- ಅಕ್ಕಿ, ಗೋಧಿ, ಮೆಕ್ಕೆಜೋಳ, ಸಕ್ಕರೆ, ಈರುಳ್ಳಿ, ಜೀರಿಗೆ ಮುಂತಾದ 13.09 ಲಕ್ಷ ಮೆಟ್ರಿಕ್ ಟನ್ ಕೃಷಿ ಉತ್ಪನ್ನಗಳನ್ನು ರಫ್ತು ಮಾಡಲಾಗಿದ್ದು, ಇದರ ಅಂದಾಜು ಮೌಲ್ಯ ₹5,397 ಕೋಟಿ.

### 3. ಭಾರತೀಯ ಬೀಜ ಸಹಕಾರಿ ಸಮಿತಿ ಲಿಮಿಟೆಡ್ (ಬಿ ಬಿ ಎಸ್ ಎಸ್ ಎಲ್)

ಒಂದು ಸಮೂಹ ಸಂಸ್ಥೆಯಾಗಿ, ಈ ಸಂಸ್ಥೆಯು ಪಿಎಸಿಎಸ್ ಮೂಲಕ ಮೂಲ ಮತ್ತು ಪ್ರಮಾಣೀಕೃತ ಬೀಜಗಳನ್ನು ಉತ್ಪಾದಿಸಲು, ಪರೀಕ್ಷಿಸಲು, ಪ್ರಮಾಣೀಕರಿಸಲು, ಸಂಗ್ರಹಿಸಲು, ಸಂಸ್ಕರಿಸಲು, ಸಂಗ್ರಹಿಸಲು, ಬ್ರಾಂಡ್ ಮಾಡಲು, ಲೇಬಲ್ ಮಾಡಲು ಮತ್ತು ಪ್ಯಾಕೇಜ್ ಮಾಡಲು ಭಾರತ ಸರ್ಕಾರದ ವಿವಿಧ ಸಚಿವಾಲಯಗಳ ಯೋಜನೆಗಳು ಮತ್ತು ನೀತಿಗಳನ್ನು ಬಳಸಿಕೊಳ್ಳುತ್ತದೆ.

ಸಾಂಪ್ರದಾಯಿಕ ಬೀಜಗಳಿಗಾಗಿ ಸಣ್ಣ ರೈತರೊಂದಿಗೆ ಒಪ್ಪಂದಗಳನ್ನು ಮಾಡಿಕೊಳ್ಳುತ್ತದೆ, ಇದರಿಂದ ರೈತರು ಸಹ ಅವುಗಳಿಂದ ಪ್ರಯೋಜನ ಪಡೆಯಬಹುದು.

**22,995**

ಪಿಎಸಿಎಸ್ ಮತ್ತು ಸಹಕಾರಿ ಸಂಘಗಳು ಬಿ ಬಿ ಎಸ್ ಎಸ್ ಎಲ್ ಸದಸ್ಯರಾಗಿವೆ. 'ಭಾರತ್ ಬೀಜ್" ಬ್ರ್ಯಾಂಡ್ ಅಡಿಯಲ್ಲಿ ಬೀಜಗಳನ್ನು ಬಿಡುಗಡೆ ಮಾಡಲಾಗಿದೆ.

ಗುರುತಿಸಲಾದ 500 ಪಿ ಎ ಸಿ ಎಸ್ ಗೋದಾಮುಗಳಲ್ಲಿ 76 ಗೋದಾಮುಗಳ ಕೆಲಸ ಪ್ರಾರಂಭವಾಗಿದೆ. 11 ಪಿಎಸಿಎಸ್ ಗೋದಾಮುಗಳ ಕೆಲಸ ಪೂರ್ಣಗೊಂಡಿದೆ ಮತ್ತು ಪಿ ಎ ಸಿ ಎಸ್ ಮೂಲಕ ಸಂಗ್ರಹಿಸಿದ ಅಕ್ಕಿ ಮತ್ತು ಗೋಧಿಯನ್ನು ಉಚಿತ ಆಹಾರ ಯೋಜನೆಯಡಿಯಲ್ಲಿ ವಿತರಿಸಲಾಗುತ್ತಿದೆ.

ಈ ಎಲ್ಲಾ ಚಟುವಟಿಕೆಗಳಿಗೆ ಗಣಕೀಕೃತ ಸಾಫ್ಟ್ ವೇರ್ ಒದಗಿಸಲಾಗಿದೆ. ಎಲ್ಲಾ ವಹಿವಾಟುಗಳು ಆನ್ಲೈನ್ ಆಗಿವೆ. ಒಂದು ರೀತಿಯಲ್ಲಿ, ಸಹಕಾರಿ ಕ್ಷೇತ್ರದಲ್ಲಿ ಹೊಸ ಆಧುನಿಕ ಕ್ರಾಂತಿ ನಡೆದಿದೆ. ಎರಡು ಲಕ್ಷ ಹೊಸ ಬಹುಪಯೋಗಿ ಪಿಎಸಿಎಸ್ ಗಳ ರಚನೆಯು ದೇಶದ ಸಹಕಾರಿ ಚಳುವಳಿಯನ್ನು ಸಮತೋಲಿತ ರೀತಿಯಲ್ಲಿ ಪುನರುಜ್ಜೀವನಗೊಳಿಸುತ್ತದೆ.

ಇಂದು, 550ಕ್ಕೂ ಹೆಚ್ಚು ಸಹಕಾರಿ ಸಂಘಗಳು ಜಿಇಎಂ ಪೋರ್ಟಲ್ ನಲ್ಲಿ ನೋಂದಾಯಿಸಲ್ಪಟ್ಟಿವೆ. ಸಂಘಗಳ ಮೇಲಿನ ಆದಾಯ ತೆರಿಗೆ ಸರ್ಚಾರ್ಜ್ ಅನ್ನು ಶೇ.12 ರಿಂದ ಶೇ.7 ಕ್ಕೆ ಇಳಿಸಲಾಗಿದೆ. ಎಂಎಟಿಯನ್ನು ಶೇ.18.5 ರಿಂದ ಶೇ.15 ಕ್ಕೆ ಇಳಿಸಲಾಗಿದೆ ಮತ್ತು ₹2 ಲಕ್ಷಕ್ಕಿಂತ ಕಡಿಮೆ ವಹಿವಾಟುಗಳಿಗೆ

ಸೆಕ್ಷನ್ 269ST ಅಡಿಯಲ್ಲಿ ಆದಾಯ ತೆರಿಗೆ ದಂಡವನ್ನು ಮನ್ನಾ ಮಾಡಲಾಗಿದೆ. ನಿರ್ಮಾಣ ಕಾರ್ಯದಲ್ಲಿ ತೊಡಗಿರುವ ಸಹಕಾರಿ ಸಂಘಗಳ ದರವನ್ನು ಶೇ.30 ರಿಂದ ಶೇ.15 ಕ್ಕೆ ಇಳಿಸಲಾಗಿದೆ. ಪಿಎಸಿಎಸ್ ಮತ್ತು ಇತರ ಸಂಘಗಳ ನಗದು ಠೇವಣಿ ಮಿತಿಯನ್ನು ₹20,000 ದಿಂದ ₹2 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಟಿಡಿಎಸ್ ವಿನಾಯಿತಿ ಮಿತಿಯನ್ನು ₹1 ಕೋಟಿಯಿಂದ ₹3 ಕೋಟಿಗೆ ಹೆಚ್ಚಿಸಲಾಗಿದೆ. ಸಹಕಾರಿ ವಲಯದ ಬಲವರ್ಧನೆಯ ಪರಿಣಾಮವಾಗಿ, ಸಹಾರಾ ಗ್ರೂಪ್ ನ ಹೂಡಿಕೆದಾರರು ಕಂಪನಿಯಿಂದ ತಮ್ಮ ಹಣವನ್ನು ಮರಳಿ ಪಡೆಯುತ್ತಿದ್ದಾರೆ.

ದೇಶವು ಬಿಕ್ಕಟ್ಟನ್ನು ಎದುರಿಸಿದಾಗಲೆಲ್ಲಾ ಸಹಕಾರಿ ಚಳುವಳಿ ದೇಶವನ್ನು ಅದರಿಂದ ಹೊರತಂದಿದೆ. ಸಹಕಾರಿ ಬ್ಯಾಂಕುಗಳು ಲಾಭವನ್ನು ಲೆಕ್ಕಿಸದೆ ಜನರಿಗಾಗಿ ಕೆಲಸ ಮಾಡುತ್ತವೆ, ಏಕೆಂದರೆ ಸಹಕಾರವು ಭಾರತೀಯ ಸಂಸ್ಕೃತಿಯಲ್ಲಿ ಆಳವಾಗಿ ಬೇರೂರಿದೆ.

ಓಲಾ ಮತ್ತು ಉಬರ್ ಜೊತೆಗೆ, ಸಹಕಾರ್ ಟ್ಯಾಕ್ಸಿ ಎಂಬ ಸಹಕಾರಿ ಟ್ಯಾಕ್ಸಿ ಸೇವೆಯು ಭಾರತದಲ್ಲಿ ಪ್ರಾರಂಭವಾಗುತ್ತಿದೆ. ಇದು ಸಹ ಕಾರುಗಳು, ಬೈಕ್ ಗಳು ಮತ್ತು ಆಟೋರಿಕ್ಷಾಗಳ ಬುಕಿಂಗ್ ಮಾಡುತ್ತದೆ. ಲಾಭವು ನೇರವಾಗಿ ಚಾಲಕರಿಗೆ ಹೋಗುತ್ತದೆ. ಎಲ್ಲಾ ಸಹಕಾರಿ ಸಂಸ್ಥೆಗಳಿಗೆ ವಿಮೆ ಮಾಡಲು ಸಹಕಾರಿ ವಿಮಾ ಕಂಪನಿಯನ್ನು ಸಹ ರಚಿಸಲಾಗುತ್ತಿದೆ. ಇದು ಅತಿದೊಡ್ಡ ಖಾಸಗಿ ವಲಯದ ಸಹಕಾರಿ ವಿಮಾ ಕಂಪನಿಯಾಗುವ ನಿರೀಕ್ಷೆಯಿದೆ.

**ಸಹಕಾರಿ ಕ್ಷೇತ್ರದ ತ್ರಿವಳಿಗಳು**

ಸಹಕಾರಿ ಸಚಿವಾಲಯವು ಸಹಕಾರಿ ಸಂಸ್ಥೆಗಳನ್ನು ಸಕ್ರಿಯ ಮತ್ತು ಯಶಸ್ವಿ ವ್ಯಾಪಾರ ಸಂಸ್ಥೆಗಳಾಗಿ ಪರಿವರ್ತಿಸಲು ಬದ್ಧವಾಗಿದೆ. ಸಹಕಾರಿ ವಲಯ, ಕೃಷಿ ಮತ್ತು ರೈತರ ಸಮೃದ್ಧಿಯನ್ನು ಉತ್ತೇಜಿಸಲು ಮೂರು ರಾಷ್ಟ್ರೀಯ ಮಟ್ಟದ ಸಹಕಾರಿ ಸಂಘಗಳನ್ನು ಸ್ಥಾಪಿಸಲಾಗಿದೆ. ಕೇಂದ್ರ ಸರ್ಕಾರವು ರಾಷ್ಟ್ರೀಯ ಸಹಕಾರಿ ರಫ್ತು ಲಿಮಿಟೆಡ್ (ಎನ್ ಸಿ ಇ ಎಲ್) ಎಂಬ ರಾಷ್ಟ್ರೀಯ ಸಹಕಾರಿ ಸಂಸ್ಥೆಯನ್ನು ಸ್ಥಾಪಿಸಿದೆ, ಇದರಲ್ಲಿ 8,000 ಕ್ಕೂ ಹೆಚ್ಚು ಪಿಎಸಿಎಸ್ ಗಳು ಸಂಯೋಜಿತವಾಗಿವೆ. ಇದರ ಮೂಲಕ, ದೇಶದ ರೈತರ ಉತ್ಪನ್ನಗಳನ್ನು ವಿದೇಶಗಳಿಗೆ ರಫ್ತು ಮಾಡಲಾಗುತ್ತದೆ, ಸಂಪೂರ್ಣ ಲಾಭವು ರೈತರಿಗೆ ಹೋಗುತ್ತದೆ. ಹೆಚ್ಚುವರಿಯಾಗಿ, ರಾಷ್ಟ್ರೀಯ ಸಹಕಾರಿ ಸಾವಯವ ಲಿಮಿಟೆಡ್ (ಎನ್ ಸಿ ಒ ಎಲ್) ಮೂಲಕ, ರೈತರು ಬೆಳೆದ ಸಾವಯವ ಉತ್ಪನ್ನಗಳನ್ನು ಭಾರತ್ ಬ್ರಾಂಡ್ ಅಡಿಯಲ್ಲಿ ಸಂಗ್ರಹಿಸಿ, ಪರೀಕ್ಷಿಸಿ, ಪ್ಯಾಕ್ ಮಾಡಿ, ಮಾರುಕಟ್ಟೆಗಳಲ್ಲಿ ಮಾರಾಟ ಮಾಡಲಾಗುತ್ತದೆ. ಇಂದು, 5,000 ಪಿಎಸಿಎಸ್ ಗಳ ರೈತರು ತಮ್ಮ ಸಾವಯವ ಉತ್ಪನ್ನಗಳನ್ನು ಈ ಸಂಸ್ಥೆಯ ಮೂಲಕ ದೇಶೀಯ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಮಾರಾಟ ಮಾಡುತ್ತಿದ್ದಾರೆ. ಇವುಗಳಲ್ಲಿ ಸಾವಯವ ಅಕ್ಕಿ, ಹಿಟ್ಟು, ಧಾನ್ಯಗಳು, ಸಿರಿಧಾನ್ಯ, ಸಕ್ಕರೆ, ಬೆಲ್ಲ, ಚಹಾ, ಕಾಫಿ, ಸಂಪೂರ್ಣ ಮಸಾಲೆಗಳು, ಸಾವಯವ ಎಣ್ಣೆ, ಜೇನುತುಪ್ಪ, ಪುಡಿಮಾಡಿದ ಮಸಾಲೆಗಳು, ಒಣಗಿದ ಹಣ್ಣುಗಳು, ಸಾವಯವ ಕಡಲೆ ಹಿಟ್ಟು, ಸಾವಯವ ಕಡಲೆ ಬೇಳೆ, ಮಸೂರ್ ದಾಲ್, ಸಾವಯವ ರಾಜ್ಮಾ, ತೊಗರಿ ಬೇಳೆ ಮತ್ತು ಹೆಸರುಕಾಳು ಸೇರಿವೆ – ಇಂದು ಈ ಎಲ್ಲಾ ಶೇ.100 ರಷ್ಟು ಸಾವಯವ ಉತ್ಪನ್ನಗಳು ಈಗ ಭಾರತ್ ಬ್ರಾಂಡ್ ಅಡಿಯಲ್ಲಿ ಲಭ್ಯವಿವೆ. ಅದೇ ರೀತಿ, ಹಿಂದೆ ದೊಡ್ಡ ರೈತರು ಮಾತ್ರ ಭಾರತೀಯ ಬೀಜ ಸಹಕಾರ ಸಂಘ ಲಿಮಿಟೆಡ್ (ಬಿ ಬಿ ಎಸ್ ಎಸ್ ಎಲ್)



**ಭಾರತದ ಸಹಕಾರಿ ವಲಯವು ತುಂಬಾ ಕ್ರಿಯಾಶೀಲವಾಗಿದ್ದು, ಅನೇಕ ಜನರ ಜೀವನವನ್ನು ಪರಿವರ್ತಿಸುತ್ತಿದೆ. ಜಗತ್ತಿನ ನಾಲ್ಕನೇ ಸಹಕಾರಿ ಸಂಘಗಳಲ್ಲಿ ಒಂದು ಭಾರತದಲ್ಲಿದೆ. ಭಾರತವು ಮಹಿಳಾ ನೇತೃತ್ವದ ಅಭಿವೃದ್ಧಿಯ ಯುಗವನ್ನು ನೋಡುತ್ತಿದೆ... ನಾವು ಇದರ ಬಗ್ಗೆ ಸಮಗ್ರವಾಗಿ ಗಮನಹರಿಸುತ್ತಿದ್ದೇವೆ. ಸಹಕಾರಿ ವಲಯದಲ್ಲಿ ಮಹಿಳೆಯರು ಸಹ ಮಹತ್ವದ ಪಾತ್ರ ವಹಿಸುತ್ತಾರೆ.**

**ನರೇಂದ್ರ ಮೋದಿ, ಪ್ರಧಾನಮಂತ್ರಿ**

*ಅಂತಾರಾಷ್ಟ್ರೀಯ ಸಹಕಾರಿ ಒಕ್ಕೂಟದ ಪ್ರಕಾರ: ಸಹಕಾರಿ ಸಂಸ್ಥೆ ಎಂದರೆ "ಸಾಮಾನ್ಯ ಮಾಲೀಕತ್ವ ಮತ್ತು ಪ್ರಜಾಪ್ರಭುತ್ವ ನಿಯಂತ್ರಣದ ಮೂಲಕ ತಮ್ಮ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿತಾಸಕ್ತಿಗಳನ್ನು ಮುನ್ನಡೆಸಲು ತಮ್ಮ ಸ್ವಂತ ಇಚ್ಛೆಯಿಂದ ಒಟ್ಟುಗೂಡುವ ವ್ಯಕ್ತಿಗಳ ಸ್ವಾಯತ್ತ ಸಂಘ."*

ನೊಂದಿಗೆ ಸಂಬಂಧ ಹೊಂದಿದ್ದರು, ಈಗ 2.5 ಎಕರೆ ಭೂಮಿ ಹೊಂದಿರುವ ರೈತರು ಸಹ ಬೀಜ ಉತ್ಪಾದನೆಗೆ ಸೇರಿದ್ದಾರೆ. ಇಂದು, 20,000 ಕ್ಕೂ ಹೆಚ್ಚು ಪಿಎಸಿಎಸ್ ಗಳ ರೈತರು ಬೀಜ ಉತ್ಪಾದನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಬೀಜ ಕೃಷಿಯು ಬೆಳೆ ಕೃಷಿಗಿಂತ ಎರಡೂವರೆ ಪಟ್ಟು ಹೆಚ್ಚು ಲಾಭವನ್ನು ನೀಡುತ್ತದೆ, ಇದು ಹಿಂದೆ ಸಣ್ಣ ರೈತರಿಗೆ ಅಸಾಧ್ಯವಾಗಿತ್ತು, ಆದರೆ ಈಗ ಅದು ಸಾಧ್ಯವಾಗಿದೆ.

**ಸಹಕಾರಿ ಸಂಸ್ಥೆಗಳು: ಬಂಡವಾಳರಹಿತರಿಗೆ ಉದ್ಯಮಶೀಲತೆಗೆ ಒಂದು ಮಾರ್ಗ**

ಬಂಡವಾಳವಿಲ್ಲದ ಜನರನ್ನು ಉದ್ಯಮಶೀಲತೆಗೆ ಸಂಪರ್ಕಿಸಲು ಸಹಕಾರಿ ವಲಯವು ಏಕೈಕ ಮಾರ್ಗವಾಗಿದೆ. ದಿ ಎಕನಾಮಿಸ್ಟ್ ಪ್ರಕಾರ, ಜಿಡಿಪಿ ದೇಶದ ಆರ್ಥಿಕತೆಯ ಪ್ರಮುಖ ಸೂಚಕವಾಗಿದೆ, ಆದರೆ 1.4 ಬಿಲಿಯನ್ ಜನಸಂಖ್ಯೆಯೊಂದಿಗೆ, ಜಿಡಿಪಿ ಜೊತೆಗೆ ಉದ್ಯೋಗವೂ ಸಹ ಗಮನಾರ್ಹ ಚಾಲಕವಾಗಿದೆ. ಇಲ್ಲಿಯವರೆಗೆ, 35,395 ಹೊಸ ಸಹಕಾರಿ ಸಂಘಗಳನ್ನು ರಚಿಸಲಾಗಿದ್ದು, ಭಾರತವು ಮುಂದಿನ ಐದು ವರ್ಷಗಳಲ್ಲಿ ದೇಶದಲ್ಲಿ 200,000 ಬಹುಪಯೋಗಿ ಸಹಕಾರಿ ಸಂಘಗಳನ್ನು ಸ್ಥಾಪಿಸುವ ಗುರಿಯನ್ನು ಸಾಧಿಸುವ ಹಾದಿಯಲ್ಲಿದೆ. ಸಹಕಾರಿ ವಲಯವು ಭೂರಹಿತರಿಗೆ ಮತ್ತು ಬಂಡವಾಳರಹಿತರಿಗೆ ಸಮೃದ್ಧಿಯ ಹಾದಿಗಳನ್ನು ತೆರೆಯುತ್ತಿದೆ. ಭಾರತವು ವಿಶ್ವದ ಅತಿದೊಡ್ಡ ಹಾಲು ಉತ್ಪಾದಕ ರಾಷ್ಟ್ರವಾಗಿದೆ. 2014-15ರಲ್ಲಿ 140 ಮಿಲಿಯನ್ ಟನ್ ಗಳಷ್ಟಿದ್ದ ಹಾಲು ಉತ್ಪಾದನೆಯು ಈಗ 240 ಮಿಲಿಯನ್ ಟನ್ ಗಳನ್ನು ಮೀರಿದೆ. ಮರುಬಳಕೆ ಆರ್ಥಿಕತೆಯನ್ನು ಉತ್ತೇಜಿಸಲಾಗುತ್ತಿದೆ. ಸಹಕಾರಿ ಡೈರಿಗಳು ಖಾಸಗಿ ಹಾಲು ಮಾರಾಟಗಾರರ ಜಾನುವಾರುಗಳಿಗೆ ಮೇವು ಮತ್ತು ಲಸಿಕೆಗಳನ್ನು ಸಹ ಒದಗಿಸುತ್ತವೆ. ಅವುಗಳ ಸಗಣಿ ಸಂಗ್ರಹಿಸಿ ಅನಿಲ ಉತ್ಪಾದಿಸಲು ಬಳಸುತ್ತವೆ. ಒಂದು ಪ್ರಾಣಿ ಸತ್ತಾಗ, ಸಹಕಾರಿ ಡೈರಿಗಳು ಸಹಕಾರಿ ಸಂಘಗಳ ಮೂಲಕ ರೈತರಿಗೆ ಅದರ ಚರ್ಮ ಮತ್ತು ಮೂಳೆಗಳಿಗೆ ಹೆಚ್ಚಿನ ಮಾರುಕಟ್ಟೆ ಬೆಲೆಯನ್ನು ಒದಗಿಸುತ್ತವೆ. ಈ ಯೋಜನೆಯು ಈಗಾಗಲೇ ₹10,000 ಕೋಟಿ ನಿಧಿಯೊಂದಿಗೆ

## ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ

### ಹೆಜ್ಜೆಗುರುತಿನ ವಿಸ್ತರಣೆ

ತನ್ನ ಭೌಗೋಳಿಕ ವ್ಯಾಪ್ತಿಯನ್ನು ವಿಸ್ತರಿಸಲು, ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ (ಎನ್ ಸಿ ಡಿ ಸಿ) ಆಂಧ್ರಪ್ರದೇಶದ ವಿಜಯವಾಡದಲ್ಲಿ ಪ್ರಾದೇಶಿಕ ಕಚೇರಿಯನ್ನು ಮತ್ತು ಜಮ್ಮು ಮತ್ತು ಕಾಶ್ಮೀರ, ಲಡಾಖ್, ಸಿಕ್ಕಿಂ, ಮಣಿಪುರ, ಮಿಜೋರಾಂ, ತ್ರಿಪುರ, ಅರುಣಾಚಲ ಪ್ರದೇಶ, ಮೇಘಾಲಯ ಮತ್ತು ನಾಗಾಲ್ಯಾಂಡ್ ಗಳಲ್ಲಿ ಉಪ ಕಚೇರಿಗಳನ್ನು ತೆರೆಯಿತು. ಎನ್ ಸಿ ಡಿ ಸಿ ಯ ಸಾಲ ವಿತರಣೆಯು 2020-21ರ ಆರ್ಥಿಕ ವರ್ಷದಲ್ಲಿದ್ದ ₹24,733 ಕೋಟಿಯಿಂದ 2024-25ರ ಆರ್ಥಿಕ ವರ್ಷದಲ್ಲಿ ₹95,183 ಕೋಟಿಗೆ ಹೆಚ್ಚಾಗುವ ನಿರೀಕ್ಷೆಯಿದೆ. ಈ ಮೊತ್ತವು 2014-15ರಲ್ಲಿ ಕೇವಲ ₹5,735.51 ಕೋಟಿಯಾಗಿತ್ತು.



ಪ್ರಾರಂಭವಾಗಿದೆ. ಡಿಸೆಂಬರ್ 25, 2024ರಂದು ಪ್ರಾರಂಭಿಸಲಾದ ಸಹಕಾರಿ ನೇತೃತ್ವದ ಶ್ವೇತ ಕ್ರಾಂತಿ 2.0 ಅಡಿಯಲ್ಲಿ, ಮುಂದಿನ ಐದು ವರ್ಷಗಳಲ್ಲಿ ಹಾಲು ಸಂಗ್ರಹಣೆಯನ್ನು ಶೇ. 50 ರಷ್ಟು ಹೆಚ್ಚಿಸಲು ಪ್ರಯತ್ನಗಳು ನಡೆಯುತ್ತಿವೆ. ಕಳೆದ ನಾಲ್ಕು ವರ್ಷಗಳಲ್ಲಿ, ಸಹಕಾರ ಸಚಿವಾಲಯವು ಪಿಎಸಿಎಸ್, ಡೈರಿ, ಮೀನುಗಾರಿಕೆ, ಸಹಕಾರಿ ಬ್ಯಾಂಕುಗಳು, ಸಕ್ಕರೆ ಸಹಕಾರಿ ಸಂಸ್ಥೆಗಳು ಮತ್ತು ಆಡಳಿತ ವ್ಯವಸ್ಥೆಗಳನ್ನು ಬಲಪಡಿಸಲು 100ಕ್ಕೂ ಹೆಚ್ಚು ಉಪಕ್ರಮಗಳನ್ನು ಜಾರಿಗೆ ತಂದಿದೆ, ಇದರಲ್ಲಿ ಡಿಜಿಟಲ್ ಸುಧಾರಣೆಗಳು, ನೀತಿ ಬದಲಾವಣೆಗಳು, ಹಣಕಾಸು ಬೆಂಬಲ ಮತ್ತು ಸಾಂಸ್ಥಿಕ ಸಾಮರ್ಥ್ಯ ವೃದ್ಧಿ ಸೇರಿವೆ. ಸಹಕಾರಿ ಆಂದೋಲನವನ್ನು ಬಲಪಡಿಸಲು, ಕೇಂದ್ರ ಸರ್ಕಾರವು ಪ್ರಧಾನಿ ಮೋದಿಯವರ ಮಾರ್ಗದರ್ಶನದಲ್ಲಿ, ರಾಜ್ಯಗಳ ಸಹಯೋಗದೊಂದಿಗೆ ಸಮಗ್ರ ಸಹಕಾರಿ ಉಪಕ್ರಮಗಳನ್ನು

## ದೇಶದಲ್ಲಿ 30ಕ್ಕೂ ಹೆಚ್ಚು ರೀತಿಯ ಸಹಕಾರಿ ಸಂಘಗಳು

ಕಳೆದ ಕೆಲವು ವರ್ಷಗಳಲ್ಲಿ ದೇಶದಲ್ಲಿ ಸಹಕಾರಿ ಸಂಸ್ಥೆಗಳು ವೇಗವಾಗಿ ಬೆಳೆದಿವೆ. ಸಹಕಾರಿ ಸಂಘಗಳು 30ಕ್ಕೂ ಹೆಚ್ಚು ವರ್ಗಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಕೆಲವು ಪ್ರಮುಖ ವರ್ಗಗಳ  ಹೆಸರು ಮತ್ತು ಸಂಖ್ಯೆಗಳು ಇಲ್ಲಿವೆ...

| ಸಂಘದ ಹೆಸರು | ಸಂಘಗಳ ಸಂಖ್ಯೆ |
|---|---|
| ಜಾನುವಾರು ಮತ್ತು ಕೋಳಿ ಸಾಕಣೆ ಸಹಕಾರಿ ಸಂಘಗಳು | 16,735 |
| ಮಾರ್ಕೆಟಿಂಗ್ ಸಹಕಾರಿ ಸಂಘಗಳು | 9,219 |
| ಇತರೆ ಸಾಲೇತರ | 30,623 |
| ವಿವಿಧೋದ್ದೇಶ ಸಹಕಾರ ಸಂಘಗಳು | 20,368 |
| ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು | 99,359 |
| ಸಾರಿಗೆ ಸಹಕಾರ ಸಂಘಗಳು | 4,174 |
| ಬುಡಕಟ್ಟು ಪ.ಜಾ./ಪ.ಪಂ. ಸಹಕಾರ ಸಂಘಗಳು | 1,516 |
| ಮಹಿಳಾ ಕಲ್ಯಾಣ ಸಹಕಾರ ಸಂಘಗಳು | 25,067 |
| ಕೃಷಿ ಮತ್ತು ಸಂಬಂಧಿತ ಸಹಕಾರ ಸಂಘಗಳು | 27,143 |
| ಕೃಷಿ ಸಂಸ್ಕರಣಾ ಸಹಕಾರ ಸಂಘಗಳು | 22,925 |
| ಗ್ರಾಹಕ ಸಹಕಾರ ಸಂಘಗಳು | 21,772 |
| ಸಾಲ & ಉಳಿತಾಯ ಸಂಘಗಳು | 80,331 |
| ಡೈರಿ ಸಹಕಾರ ಸಂಘಗಳು | 1,43,500 |
| ಮೀನುಗಾರಿಕೆ ಸಹಕಾರ ಸಂಘಗಳು | 25,894 |
| ಕೈಮಗ್ಗ ಜವಳಿ ಮತ್ತು ನೇಕಾರರ ಸಹಕಾರ ಸಂಘಗಳು | 19,613 |
| ವಸತಿ ಸಹಕಾರ ಸಂಘಗಳು | 1,92,147 |
| ಕಾರ್ಮಿಕ ಸಹಕಾರ ಸಂಘಗಳು | 44,859 |

**ಇಂದು, ಅಮುಲ್ ₹90,000 ಕೋಟಿ ವಹಿವಾಟು ಹೊಂದಿದೆ. ಅಮುಲ್‌ನಲ್ಲಿ,**




**ಗ್ರಾಹಕ ಬೆಲೆ ನೇರವಾಗಿ 36 ಲಕ್ಷಕ್ಕೂ ಹೆಚ್ಚು ಡೈರಿ ರೈತರನ್ನು ತಲುಪುತ್ತದೆ.**



ಪ್ರಾರಂಭಿಸಿದೆ.

ದಶಕಗಳ ನಿರ್ಲಕ್ಷ್ಯ ಮತ್ತು ಆಡಳಿತಾತ್ಮಕ ಲೋಪಗಳಿಂದಾಗಿ, ಹೆಚ್ಚಿನ ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು (ಪಿಎಸಿಎಸ್) ಆರ್ಥಿಕವಾಗಿ ದುರ್ಬಲ ಮತ್ತು ನಿಷ್ಕ್ರಿಯವಾಗಿವೆ. ಸರ್ಕಾರವು ಪಿಎಸಿಎಸ್ ಗಳ ವ್ಯಾಪ್ತಿಯನ್ನು ವಿಸ್ತರಿಸಲು ಮತ್ತು ಅವುಗಳನ್ನು ಆರ್ಥಿಕವಾಗಿ ಕಾರ್ಯಸಾಧ್ಯವಾಗಿಸಲು ಪ್ರಾರಂಭಿಸಿತು. ಸಹಕಾರಿ ಸಂಘಗಳು ಸಮಾಜದಲ್ಲಿ ಆರ್ಥಿಕವಾಗಿ ಮಹತ್ವಾಕಾಂಕ್ಷಿ ವ್ಯಕ್ತಿಗಳನ್ನು ಶ್ರೀಮಂತಗೊಳಿಸುವುದಲ್ಲದೆ, ಅವರನ್ನು ವಿಶಾಲವಾದ ಮುಖ್ಯವಾಹಿನಿಯ ಆರ್ಥಿಕತೆಯ ಭಾಗವಾಗಿಸುವ ಒಂದು ವ್ಯವಸ್ಥೆಯಾಗಿದೆ. ಕಡಿಮೆ ಅಥವಾ ಬಂಡವಾಳವಿಲ್ಲದವರ ಸ್ಥಿತಿಯನ್ನು ಸುಧಾರಿಸಲು ಸಹಕಾರಿ ಸಂಘಗಳು ಪ್ರಬಲ ಸಾಧನವಾಗಿವೆ. ದೇಶದಲ್ಲಿ ಸಹಕಾರಿ ಸಂಸ್ಥೆಗಳು ಶ್ರೀಮಂತ ಸಂಪ್ರದಾಯವನ್ನು ಹೊಂದಿದ್ದರೂ, ಸ್ವಾತಂತ್ರ್ಯ ಪೂರ್ವದಲ್ಲಿ ಪ್ರಾರಂಭವಾದ ಅಂಚಿನಲ್ಲಿರುವ ನಾಗರಿಕರ ಆರ್ಥಿಕ ದುಃಸ್ಥಿತಿಯನ್ನು ಸುಧಾರಿಸುವ ಅಭಿಯಾನವು ಪ್ರಧಾನಿ ನರೇಂದ್ರ ಮೋದಿಯವರ ಅಧಿಕಾರಾವಧಿಯಲ್ಲಿ ಉತ್ತಮ ಉತ್ತೇಜನ ಪಡೆದಿದೆ.

### ಹೊಸ ರಾಷ್ಟ್ರೀಯ ಸಹಕಾರ ನೀತಿ

ಹೊಸ ರಾಷ್ಟ್ರೀಯ ಸಹಕಾರಿ ನೀತಿ, 2025 ಅನ್ನು ಜುಲೈ 24, 2025 ರಂದು ಬಿಡುಗಡೆ ಮಾಡಲಾಯಿತು.



## ಹೊಸ ಪೀಳಿಗೆಯಲ್ಲಿ ಸಹಕಾರಿ ಸಂಸ್ಥೆಗಳ ಬಗ್ಗೆ ಒಲವು ಹೆಚ್ಚಿಸುವ ಪ್ರಯತ್ನಗಳು

**ದೇಶದಲ್ಲಿ ಸುಮಾರು 320 ಮಿಲಿಯನ್ ಜನರು ಒಂದಲ್ಲ ಒಂದು ರೂಪದಲ್ಲಿ ಸಹಕಾರಿ ಸಂಘಗಳಲ್ಲಿ ತೊಡಗಿಸಿಕೊಂಡಿದ್ದರೂ, ಕೇಂದ್ರ ಸರ್ಕಾರವು ಸಹಕಾರಿ ಸಂಘಗಳನ್ನು ಭವಿಷ್ಯದ ಪೀಳಿಗೆಗೆ ಸಂಪರ್ಕಿಸುವ ಮೂಲಕ ಅವುಗಳ ಅಡಿಪಾಯವನ್ನು ಬಲಪಡಿಸಲು ಬಯಸುತ್ತದೆ. ಆದ್ದರಿಂದ, ಸಹಕಾರಿ ಸಚಿವಾಲಯದ ಮಾರ್ಗದರ್ಶನದಲ್ಲಿ ಮತ್ತು ಎನ್ ಸಿ ಇ ಆರ್ ಟಿ ಯೊಂದಿಗೆ ಸಮಾಲೋಚಿಸಿ, ರಾಷ್ಟ್ರೀಯ ಸಹಕಾರಿ ತರಬೇತಿ ಮಂಡಳಿ (ಎನ್ ಸಿ ಸಿ ಟಿ) ಸಹಕಾರಿ ಸಂಘಗಳ ಕುರಿತು ವಿಶೇಷ ಪಠ್ಯಕ್ರಮವನ್ನು ಅಭಿವೃದ್ಧಿಪಡಿಸಿದೆ. ರಾಷ್ಟ್ರ ನಿರ್ಮಾಣದಲ್ಲಿ ಸಹಕಾರಿ ಸಂಘಗಳ ಪಾತ್ರದ ಬಗ್ಗೆ ಶಾಲಾ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವುದು ಮತ್ತು ಸಹಕಾರಿ ವಲಯದಲ್ಲಿ ವೃತ್ತಿಜೀವನವನ್ನು ಮುಂದುವರಿಸಲು ಅವರನ್ನು ಪ್ರೇರೇಪಿಸುವುದು ಇದರ ಉದ್ದೇಶವಾಗಿದೆ. ಎನ್ ಸಿ ಇ ಆರ್ ಟಿ ಪಠ್ಯಕ್ರಮವನ್ನು ಹೊಂದಿರುವ ಶಾಲೆಗಳಲ್ಲಿನ ಮಾಧ್ಯಮಿಕ ಹಂತದ ವಿದ್ಯಾರ್ಥಿಗಳಿಗೆ ಈ ವಿಶೇಷ ಪಠ್ಯಕ್ರಮವನ್ನು ನೀಡಲಾಗುವುದು.**

- ಸಹಕಾರ ಸಚಿವಾಲಯದ ನಿರ್ದೇಶನ ಮತ್ತು ರಾಷ್ಟ್ರೀಯ ಸಹಕಾರಿ ತರಬೇತಿ ಮಂಡಳಿಯ (ಎನ್ ಸಿ ಸಿ ಟಿ) ಪ್ರಯತ್ನಗಳ ಅಡಿಯಲ್ಲಿ, ವಿದ್ಯಾರ್ಥಿಗಳಿಗೆ ಸಹಕಾರಿ ಚಳುವಳಿಯ ಮೂಲಭೂತ ಜ್ಞಾನವನ್ನು ಒದಗಿಸಲು ಎನ್ ಸಿ ಇ ಆರ್ ಟಿ 6ನೇ ತರಗತಿಯ ಪಠ್ಯಕ್ರಮದಲ್ಲಿ ಸಹಕಾರದ ಅಧ್ಯಾಯವನ್ನು ಸೇರಿಸಿದೆ.
- ಪುಣೆಯ ವೈಭವ್ ಶಂಕರ್ ಮಿತ್ತಲ್ ರಾಷ್ಟ್ರೀಯ ಸಹಕಾರಿ ನಿರ್ವಹಣಾ ಸಂಸ್ಥೆಯು 2025 ರ ಶೈಕ್ಷಣಿಕ ಅವಧಿಗೆ ನವದೆಹಲಿಯ ಎಐಸಿಟಿಇಗೆ ಸಂಯೋಜಿತವಾದ 'ಪಿಜಿಡಿಎಂ-ಸಹಕಾರ' ಎಂಬ ಹೊಸ ಕೋರ್ಸ್ ಅನ್ನು ಪ್ರಾರಂಭಿಸಲು ಪ್ರಾರಂಭಿಸಿದೆ. ಈ ಕೋರ್ಸ್ ಗೆ 30 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬಹುದು.

### ಸಹಕಾರಿ ಆಡಳಿತ, ಶಿಕ್ಷಣ ಮತ್ತು ಸಂಶೋಧನೆಗೆ TSU ಮಾರ್ಗದರ್ಶನ ನೀಡುತ್ತದೆ

*ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯ (ಟಿ ಎಸ್ ಯು) ಗ್ರಾಮೀಣ ಭಾರತವನ್ನು ಬಲಪಡಿಸುವುದಲ್ಲದೆ, ಪಾರದರ್ಶಕ, ವೃತ್ತಿಪರ ಮತ್ತು ಸಮಗ್ರ ಅಭಿವೃದ್ಧಿಗೆ ದಾರಿ ಮಾಡಿಕೊಡುತ್ತದೆ. ಇದು ಭಾರತದಲ್ಲಿ ಸಹಕಾರಿ ಶಿಕ್ಷಣ, ಸಂಶೋಧನೆ ಮತ್ತು ಆಡಳಿತಕ್ಕೆ ಹೊಸ ದಿಕ್ಕನ್ನು ಒದಗಿಸುತ್ತದೆ. ಇದು ಸಹಕಾರಿ ಶಿಕ್ಷಣಕ್ಕಾಗಿ ಅತಿದೊಡ್ಡ ಸಂಸ್ಥೆಯಾಗಲಿದೆ. ಮೂರು ಹಂತದ ಪಠ್ಯಕ್ರಮ ವ್ಯವಸ್ಥೆಯನ್ನು ವಿನ್ಯಾಸಗೊಳಿಸಲಾಗಿದೆ. ಕಾರ್ಯಾಚರಣೆಯ ಮಟ್ಟದಲ್ಲಿ, 10ನೇ ತರಗತಿ ಶಿಕ್ಷಣ ಹೊಂದಿರುವವರಿಗೆ ಅಗತ್ಯವಾದ ಮೂಲಭೂತ ಜ್ಞಾನ ಮತ್ತು ತಾಂತ್ರಿಕ ಕೌಶಲ್ಯಗಳನ್ನು ಒದಗಿಸಲು ಕೋರ್ಸ್ ಗಳನ್ನು ನೀಡಲಾಗುತ್ತದೆ. ಮೇಲ್ವಿಚಾರಣಾ ಮಟ್ಟದಲ್ಲಿ, ಸಹಕಾರಿ ಸಂಸ್ಥೆಗಳ ಮಧ್ಯಮ ನಿರ್ವಹಣೆಯಲ್ಲಿ ಕೆಲಸ ಮಾಡುವವರಿಗೆ ಸೂಕ್ತವಾದ ಡಿಪ್ಲೊಮಾ ಕಾರ್ಯಕ್ರಮಗಳನ್ನು ನೀಡಲಾಗುತ್ತದೆ. ವ್ಯವಸ್ಥಾಪಕ ಮಟ್ಟದಲ್ಲಿ, ಪದವಿ ಮತ್ತು ಪಿ ಎಚ್ ಡಿ ಕಾರ್ಯಕ್ರಮಗಳನ್ನು ನೀಡಲಾಗುತ್ತದೆ. ದೂರದ ಪ್ರದೇಶಗಳಲ್ಲಿ ವಾಸಿಸುವ ಸಹಕಾರಿ ಕಾರ್ಮಿಕರಿಗೆ ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ವಿಶ್ವವಿದ್ಯಾಲಯವು ಇತ್ತೀಚಿನ ತಂತ್ರಜ್ಞಾನವನ್ನು ಬಳಸಿಕೊಂಡು ಇ-ಕಲಿಕಾ ವೇದಿಕೆಯನ್ನು ಅಭಿವೃದ್ಧಿಪಡಿಸುತ್ತದೆ.*

- ಗುಜರಾತಿನಲ್ಲಿ ಡೈರಿ ಸಹಕಾರ ಸಂಘಗಳು, ಕೇರಳದಲ್ಲಿ ಮೀನುಗಾರಿಕೆ ಸಹಕಾರ ಸಂಘಗಳು, ಮಹಾರಾಷ್ಟ್ರದಲ್ಲಿ ಸಹಕಾರಿ ಹಣಕಾಸು ಮತ್ತು ಉತ್ತರ ಪ್ರದೇಶ ಮತ್ತು ಬಿಹಾರದಲ್ಲಿ ಮಹಿಳಾ ಸಹಕಾರ ಸಂಘಗಳಿಗೆ ಸಂಬಂಧಿಸಿದ ಸಂಸ್ಥೆಗಳನ್ನು ಸ್ಥಾಪಿಸಲು ಟಿ ಎಸ್ ಯು ವಿವಿಧ ರಾಜ್ಯಗಳಲ್ಲಿ ವಲಯ-ನಿರ್ದಿಷ್ಟ ಶೈಕ್ಷಣಿಕ ಮತ್ತು ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಿದೆ.
- ಈ ಪಠ್ಯಕ್ರಮವು ರಾಷ್ಟ್ರೀಯ ಶಿಕ್ಷಣ ನೀತಿ 2020ಕ್ಕೆ ಅನುಗುಣವಾಗಿರಲಿದ್ದು, ಬಹುಶಿಸ್ತೀಯ ಅಧ್ಯಯನಗಳಿಗೆ ಒತ್ತು ನೀಡಲಿದೆ. ವಿಶ್ವವಿದ್ಯಾನಿಲಯವು ಡಿಜಿಟಲ್ ವೇದಿಕೆಗಳ ಮೂಲಕ ವಾರ್ಷಿಕವಾಗಿ 800,000 ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ಗುರಿಯನ್ನು ಹೊಂದಿದೆ. ವಿಶ್ವವಿದ್ಯಾನಿಲಯವು 2026 ರಲ್ಲಿ ಸಂಪೂರ್ಣವಾಗಿ ಕಾರ್ಯಾರಂಭ ಮಾಡಲಿದೆ.



ಈ ನೀತಿಯು ಸಹಕಾರಿ ಕ್ಷೇತ್ರದ ವ್ಯವಸ್ಥಿತ ಮತ್ತು ಸರ್ವತೋಮುಖ ಅಭಿವೃದ್ಧಿಗೆ ಒಂದು ಮಾರ್ಗಸೂಚಿ ಮತ್ತು ಸಮಗ್ರ ಚೌಕಟ್ಟನ್ನು ಒದಗಿಸುತ್ತದೆ. ಮುಂದಿನ 10 ವರ್ಷಗಳಲ್ಲಿ 16 ಉದ್ದೇಶಗಳನ್ನು ಸಾಧಿಸುವುದು ಈ ನೀತಿಯ ಧ್ಯೇಯವಾಗಿದ್ದು, ಇವುಗಳನ್ನು ಆರು ಕಾರ್ಯತಂತ್ರದ ಧ್ಯೇಯಗಳ ಅಡಿಯಲ್ಲಿ ವರ್ಗೀಕರಿಸಲಾಗಿದೆ. ರಾಷ್ಟ್ರೀಯ ಸಹಕಾರಿ ನೀತಿ, 2025ರ ಉದ್ದೇಶವನ್ನು ಒಂದೇ ವಾಕ್ಯದಲ್ಲಿ ಸಂಕ್ಷೇಪಿಸಿ ಹೇಳುವುದಾದರೆ, 2047ರ ವೇಳೆಗೆ ಭಾರತವನ್ನು "ಸಹಕಾರ್ ಸೇ ಸಮೃದ್ಧಿ" ಮೂಲಕ ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡುವುದು.

**ಸಹಕಾರಿ ವಿಶ್ವವಿದ್ಯಾಲಯವು ಯುವ ಪೀಳಿಗೆಯನ್ನು ಸಹಕಾರಿ ಸಂಸ್ಥೆಗಳೊಂದಿಗೆ ಸಂಪರ್ಕಿಸುತ್ತದೆ**

ಪೀಳಿಗೆಯ ಅಭಿವೃದ್ಧಿ ಎಂಬ ಮಂತ್ರದೊಂದಿಗೆ, ತ್ರಿಭುವನ್ ಸಹಕಾರಿ ವಿಶ್ವವಿದ್ಯಾಲಯವನ್ನು ಗುಜರಾತಿನಲ್ಲಿ ಸ್ಥಾಪಿಸಲಾಗಿದೆ. ಸಂಸತ್ತು ಮಾರ್ಚ್ 2025 ರಲ್ಲಿ ಇದಕ್ಕಾಗಿ ಕಾನೂನು ಜಾರಿಗೆ ತಂದಿತು. ಇದರ ಅಧಿಕಾರ ವ್ಯಾಪ್ತಿ ಭಾರತದಾದ್ಯಂತ ವಿಸ್ತರಿಸುತ್ತದೆ. ಇದು ಸಹಕಾರಿ




## ಅಮಿತ್ ಶಾ: "ಸಹಕಾರ್ ಸೇ ಸಮೃದ್ಧಿ" ಎಂಬ ಮಂತ್ರ ತಮ್ಮ ಹೃದಯಕ್ಕೆ ಹತ್ತಿರವಾಗಿದೆ

*ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಅವರು ಗುಜರಾತ್ ರಾಜಕೀಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾಗ ಸಹಕಾರಿ ಚಳವಳಿಯಲ್ಲಿ ಆಸಕ್ತಿ ಹೊಂದಿದ್ದರು. ಅವರು 18 ನೇ ವಯಸ್ಸಿನಿಂದಲೂ ಸಹಕಾರಿ ಸಂಘಗಳಲ್ಲಿ ತೊಡಗಿಸಿಕೊಂಡಿದ್ದಾರೆ ಮತ್ತು ಅದರ ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ಹತ್ತಿರದಿಂದ ಕಂಡಿದ್ದಾರೆ. 2001ರಲ್ಲಿ ರಾಜಕೀಯ ಸಂಘಟನೆಯ ಸಹಕಾರಿ ಕೋಶದ ರಾಷ್ಟ್ರೀಯ ಸಂಚಾಲಕರಾಗಿ ಸೇವೆ ಸಲ್ಲಿಸಿದಾಗ ಸಹಕಾರಿ ಚಳವಳಿಯ ಬಗ್ಗೆ ಅವರ ಆಳವಾದ ಒಳನೋಟವನ್ನು ರಾಷ್ಟ್ರೀಯವಾಗಿ ಗುರುತಿಸಲಾಯಿತು. ಎರಡು ಶಿಥಿಲಾವಸ್ಥೆಯಲ್ಲಿರುವ ಬ್ಯಾಂಕುಗಳಾದ ಅಹಮದಾಬಾದ್ ಜಿಲ್ಲಾ ಸಹಕಾರಿ ಬ್ಯಾಂಕ್ ಮತ್ತು ಅಹಮದಾಬಾದ್ ನ ಮಾಧವಪುರ ಬ್ಯಾಂಕ್ ಅನ್ನು ಪುನರುಜ್ಜೀವನಗೊಳಿಸಿದ ಕೀರ್ತಿಯೂ ಅವರಿಗೆ ಸಲ್ಲುತ್ತದೆ. ದೇಶದಲ್ಲಿ ಸಹಕಾರಕ್ಕೆ ಗಮನಾರ್ಹ ಬದಲಾವಣೆಗಳ ಅಗತ್ಯವಿತ್ತು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಸಹಕಾರ ಸಚಿವಾಲಯವನ್ನು ರಚಿಸಿದಾಗ, ಅಮಿತ್ ಶಾ ಅವರಿಗೆ ಜವಾಬ್ದಾರಿಯನ್ನು ನೀಡಲಾಯಿತು. ದೇಶದ ಮೊದಲ ಕೇಂದ್ರ ಸಹಕಾರ ಸಚಿವರಾಗಿ, ಅಲ್ಪಾವಧಿಯಲ್ಲಿಯೇ, ಹಲವಾರು ಹೊಸ ಯೋಜನೆಗಳು, ನೀತಿ ಉಪಕ್ರಮಗಳು ಮತ್ತು ಸುಧಾರಣಾ ಕ್ರಮಗಳೊಂದಿಗೆ ಆಡಳಿತ ಮತ್ತು ನೀತಿ ಮಟ್ಟದಲ್ಲಿ ವಲಯವನ್ನು ಪರಿವರ್ತಿಸಿದ್ದಾರೆ. ಸಂಸತ್ತಿನಲ್ಲಿ ಮಸೂದೆಯನ್ನು ಅಂಗೀಕರಿಸುವ ಮೂಲಕ, ಅವರು ಈ ವಲಯವನ್ನು ರಾಷ್ಟ್ರೀಯ ಚರ್ಚೆಯ ಮುಖ್ಯವಾಹಿನಿಗೆ ತಂದಿದ್ದಾರೆ. ಅವರ ಪ್ರಯತ್ನಗಳು ಮತ್ತು ಪ್ರಧಾನಿ ಮೋದಿಯವರ ದೂರದೃಷ್ಟಿಯ ಚಿಂತನೆಯ ಪರಿಣಾಮವಾಗಿ 'ಸಹಕಾರ್ ಬಸೇ ಸಮೃದ್ಧಿ' ಭಾರತದ ಆರ್ಥಿಕ ಯೋಜನೆ ಮತ್ತು ಪ್ರಗತಿಯಲ್ಲಿ ಜನಪ್ರಿಯ ಪದವಾಗಿದೆ. ಸಹಕಾರಿ ವಲಯವು ಅವರ ಹೃದಯಕ್ಕೆ ಹತ್ತಿರವಾಗಿದೆ ಮತ್ತು ರಾಷ್ಟ್ರ ಮತ್ತು ಸಮಾಜವನ್ನು ನಿರ್ಮಿಸುವಲ್ಲಿ ಅದರ ಪ್ರಾಮುಖ್ಯತೆಯು ಅವರ ಹೇಳಿಕೆಯಲ್ಲಿ ಸ್ಪಷ್ಟವಾಗಿದೆ, "ದೇಶದ ಗೃಹ ಸಚಿವರಾಗಿರುವುದು ಒಂದು ದೊಡ್ಡ ಸಾಧನೆ, ಏಕೆಂದರೆ ಸರ್ದಾರ್ ಪಟೇಲ್ ಅವರು ಗೃಹ ಸಚಿವರೂ ಆಗಿದ್ದರು. ಆದರೆ ನಾನು ಸಹಕಾರ ಸಚಿವನಾಗಿ ನೇಮಕಗೊಂಡ ದಿನ, ಗೃಹ ಸಚಿವಾಲಯಕ್ಕಿಂತ ದೊಡ್ಡ ಇಲಾಖೆಯನ್ನು ಪಡೆದಿದ್ದೇನೆ ಎಂದು ನನಗನಿಸಿತು. ಇದು ದೇಶದ ಬಡವರು, ರೈತರು, ಹಳ್ಳಿಗಳು ಮತ್ತು ಜಾನುವಾರುಗಳಿಗಾಗಿ ಕೆಲಸ ಮಾಡುವ ಸಚಿವಾಲಯವಾಗಿದೆ" ಎಂಬ ಅವರ ಹೇಳಿಕೆಯಲ್ಲಿ ಸಹಕಾರ ಕ್ಷೇತ್ರದ ನಿಕಟತೆ ಮತ್ತು ರಾಷ್ಟ್ರ ಮತ್ತು ಸಮಾಜ ನಿರ್ಮಾಣದಲ್ಲಿ ಅದರ ಪ್ರಾಮುಖ್ಯತೆ ಸ್ಪಷ್ಟವಾಗಿದೆ.*

ವಲಯಕ್ಕೆ ತರಬೇತಿ ಪಡೆದ ಸಂಪನ್ಮೂಲಗಳನ್ನು ಒದಗಿಸುತ್ತದೆ.

ಸಹಕಾರಿ ವಿಶ್ವವಿದ್ಯಾಲಯವು ಸುಮಾರು 4.5 ವರ್ಷಗಳಲ್ಲಿ ಕೇಂದ್ರ ಸರ್ಕಾರ ಸಾಧಿಸಿದ ಸಹಕಾರಿ ಅಭಿವೃದ್ಧಿಯಿಂದ ಪಡೆದ ಅನುಭವದ ಆಧಾರದ ಮೇಲೆ ಸ್ಥಾಪನೆಯಾಗಿದೆ. ಇದು ಸಹಕಾರಿ ಉದ್ಯೋಗಗಳಲ್ಲಿ ಸ್ವಜನಪಕ್ಷಪಾತವನ್ನು ತೊಡೆದುಹಾಕುತ್ತದೆ. ಬದಲಾಗಿ, ಪದವಿ ಈಗ ಸಹಕಾರಿ ವಲಯದಲ್ಲಿ ನಿರ್ಣಾಯಕ ಮಾನದಂಡವಾಗಿರುತ್ತದೆ. ಪದವಿಗಳು ಮತ್ತು ಡಿಪ್ಲೊಮಾಗಳು ಮತ್ತು ಅರ್ಹತೆ ಹೊಂದಿರುವವರು ಮಾತ್ರ ಉದ್ಯೋಗಗಳನ್ನು ಪಡೆಯುತ್ತಾರೆ. ಇದು ಹೊಸ ಸಹಕಾರಿ ಸಂಸ್ಕೃತಿಗೆ ನಾಂದಿ ಹಾಡುತ್ತದೆ. ಈ ಸಹಕಾರಿ ವಿಶ್ವವಿದ್ಯಾಲಯವು ವಾರ್ಷಿಕವಾಗಿ 800,000 ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಒದಗಿಸುತ್ತದೆ. ದೇಶಾದ್ಯಂತ ಸಂಯೋಜಿತ ಕಾಲೇಜುಗಳು ಮತ್ತು ಶಾಲೆಗಳು ತೆರೆಯಲ್ಪಡುತ್ತವೆ. ಇದು 10 ಮತ್ತು 12 ನೇ ತರಗತಿಗಳಿಗೆ ಕೋರ್ಸ್ ಗಳನ್ನು ಹಾಗೂ ಎಂಜಿನಿಯರಿಂಗ್ ಮತ್ತು ಚಾರ್ಟರ್ಡ್ ಅಕೌಂಟೆನ್ಸಿಯ ಕೋರ್ಸ್ ಗಳನ್ನು ಸಹ ನೀಡುತ್ತದೆ.

ಎಲ್ಲರಿಗೂ ಉದ್ಯೋಗ ಒದಗಿಸುವ, ಅವರ ಜೀವನ ಮಟ್ಟವನ್ನು ಹೆಚ್ಚಿಸುವ ಮತ್ತು ಉತ್ತಮ ಜೀವನವನ್ನು ಖಾತರಿಪಡಿಸುವ ಗುರಿಯನ್ನು ಸಹಕಾರಿ ಸಂಘಗಳಿಲ್ಲದೆ ಸಾಧಿಸಲಾಗುವುದಿಲ್ಲ. ಈ ಮಹತ್ವವನ್ನು ಗುರುತಿಸಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಂಟಿಯಾಗಿ ಭಾರತದಲ್ಲಿ ಸಹಕಾರಿ ಚಳವಳಿಯ ಹೊಸ ಯುಗವನ್ನು ಪ್ರಾರಂಭಿಸಿವೆ. ಸಹಕಾರಿ ಚಳವಳಿಯು ಭಾರತದ ಗ್ರಾಮೀಣ ಸಮಾಜದ ಪ್ರಗತಿಯನ್ನು ಖಚಿತಪಡಿಸುತ್ತಿದೆ ಮತ್ತು ಸಾಮಾಜಿಕ ಬಂಡವಾಳದ ಹೊಸ ಪರಿಕಲ್ಪನೆಯನ್ನು ಸೃಷ್ಟಿಸುತ್ತಿದೆ. ಸಹಕಾರ ಸಂಘಗಳ ಯಶಸ್ಸು ನಾಲ್ಕು ವಿಷಯಗಳ ಮೇಲೆ ಅವಲಂಬಿತವಾಗಿದೆ: ದೃಢನಿಶ್ಚಯ, ಸ್ಪಷ್ಟ ಉದ್ದೇಶಗಳು, ಕಠಿಣ ಪರಿಶ್ರಮ ಮತ್ತು ಏಕತೆಯ ಮನೋಭಾವ. ಈ ಮನೋಭಾವದಿಂದ, ಸಹಕಾರ ಸಂಘಗಳು ಜನಸಾಮಾನ್ಯರ ಕನಸುಗಳನ್ನು ನನಸಾಗಿಸುವ ಸಾಧನವಾಗುತ್ತಿವೆ. ●



ಧರತೀ ಆಬಾ ಭಗವಾನ್ ಬಿರ್ಸಾ ಮುಂಡಾ ಅವರ 150 ನೇ ಜನ್ಮ ದಿನಾಚರಣೆ

# ಬುಡಕಟ್ಟು ಕಲ್ಯಾಣಕ್ಕೆ ಹೆಚ್ಚಿನ ಆದ್ಯತೆ

*ದೇಶವು 'ಸಬ್ಕಾ ಸಾಥ್, ಸಬ್ಕಾ ವಿಕಾಸ್' ಎಂಬ ಮಂತ್ರವನ್ನು ಅಳವಡಿಸಿಕೊಂಡಿದೆ. ಈ ಮಂತ್ರವು ರಾಷ್ಟ್ರದ ಏಕತೆಯನ್ನು ಬಲಪಡಿಸುವಾಗ ಮತ್ತು ದಶಕಗಳಿಂದ ನಿರ್ಲಕ್ಷಿತರಾದ ಬುಡಕಟ್ಟು ಸಮುದಾಯಗಳನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಲಕ್ಷಾಂತರ ಜನರ ಜೀವನವನ್ನು ಪರಿವರ್ತಿಸಿದೆ. ನವೆಂಬರ್ 15 ರಂದು, ಭಗವಾನ್ ಬಿರ್ಸಾ ಮುಂಡಾ ಅವರ 150ನೇ ಜನ್ಮ ದಿನಾಚರಣೆಯ ಅಂಗವಾಗಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಅಭಿವೃದ್ಧಿಯ ಪಯಣದಲ್ಲಿ ಯಾರೂ ಹಿಂದೆ ಉಳಿಯದಂತೆ "ಸಬ್ಕಾ ಸಾಥ್, ಸಬ್ಕಾ ವಿಕಾಸ್" ಮಂತ್ರವನ್ನು ಬಲಪಡಿಸುವ ಪ್ರತಿಜ್ಞೆಗೆ ಕರೆ ನೀಡಿದರು.*

ರಾಷ್ಟ್ರದ ಗೌರವ, ಘನತೆ ಅಥವಾ ಸ್ವಯಂ ಆಡಳಿತಕ್ಕೆ ಧಕ್ಕೆಯಾದಾಗಲೆಲ್ಲಾ ನಮ್ಮ ಬುಡಕಟ್ಟು ಸಮಾಜವು ಮುಂಚೂಣಿಯಲ್ಲಿ ನಿಲ್ಲುತ್ತದೆ. ನಮ್ಮ ಸ್ವಾತಂತ್ರ್ಯ ಹೋರಾಟ ಇದಕ್ಕೆ ದೊಡ್ಡ ಉದಾಹರಣೆ. ಬುಡಕಟ್ಟು ಸಮುದಾಯದ ಹಲವಾರು ವೀರರು ಮತ್ತು ನಾಯಕಿಯರಾದ ತಿಲ್ಕಾ ಮಾಂಝಿ, ರಾಣಿ ಗೈಡಿನ್ಲಿಯು, ಸಿಧು-ಕನ್ಹು, ಭೈರವ್ ಮುರ್ಮು, ಬುಧು ಭಗತ್ ಮತ್ತು ಅಲ್ಲೂರಿ ಸೀತಾರಾಮ ರಾಜು ಅವರಂತಹ ಸ್ಫೂರ್ತಿದಾಯಕ ವ್ಯಕ್ತಿಗಳು ಸ್ವಾತಂತ್ರ್ಯದ ಜ್ಯೋತಿಯನ್ನು ಮುನ್ನಡೆಸಿದರು. ಅಂತೆಯೇ, ಮಧ್ಯಪ್ರದೇಶದ ತಾಂತ್ಯ ಭಿಲ್, ಛತ್ತೀಸ್ ಗಢದ ವೀರ್ ನಾರಾಯಣ್ ಸಿಂಗ್, ಜಾರ್ಖಂಡ್ ನ ತೆಲಂಗಾ ಖರಿಯಾ, ಅಸ್ಸಾಂನ ರೂಪ್ಚಂದ್ ಕೊನ್ವಾರ್ ಮತ್ತು ಒಡಿಶಾದ ಲಕ್ಷ್ಮಣ್ ನಾಯಕ್ ಸೇರಿದಂತೆ ಅನೇಕ ವೀರ ಯೋಧರು ಸ್ವಾತಂತ್ರ್ಯಕ್ಕಾಗಿ ಅಪಾರ ತ್ಯಾಗ ಮಾಡಿದರು, ದಣಿವರಿಯದೆ ಹೋರಾಡಿದರು ಮತ್ತು ಬ್ರಿಟಿಷರಿಗೆ ನೆಮ್ಮದಿಯಿಂದ ಕೂರಲು ಎಂದಿಗೂ ಬಿಡಲಿಲ್ಲ. ಬುಡಕಟ್ಟು ಸಮುದಾಯವು ಅಸಂಖ್ಯಾತ ಕ್ರಾಂತಿಗಳನ್ನು ಮುನ್ನಡೆಸಿತು ಮತ್ತು ಸ್ವಾತಂತ್ರ್ಯಕ್ಕಾಗಿ ತಮ್ಮ ರಕ್ತವನ್ನು ಹರಿಸಿತು. ಗುಜರಾತ್ ನ ದೇಡಿಯಾಪಾಡದಲ್ಲಿ ನಡೆದ ಜನಜಾತೀಯ ಗೌರವ್ ದಿನದ ಕಾರ್ಯಕ್ರಮದಲ್ಲಿ ಬುಡಕಟ್ಟು ಸಮುದಾಯದ ಕೊಡುಗೆಗಳನ್ನು ಸ್ಮರಿಸಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಸ್ವಾತಂತ್ರ್ಯ ಚಳವಳಿಯಲ್ಲಿ ಬುಡಕಟ್ಟು ಸಮುದಾಯದ ಕೊಡುಗೆಯನ್ನು ನಾವು ಮರೆಯಲು ಸಾಧ್ಯವಿಲ್ಲ ಎಂದು ಹೇಳಿದರು. 2021 ರಲ್ಲಿ, ಭಗವಾನ್ ಬಿರ್ಸಾ ಮುಂಡಾ ಅವರ ಜನ್ಮದಿನವನ್ನು ಜನಜಾತೀಯ ಗೌರವ ದಿನ ಎಂದು ಆಚರಿಸಲಾಯಿತು.

> **ಯಾವುದೇ ಸಮಾಜದ ಪ್ರಗತಿಗೆ, ಪ್ರಜಾಪ್ರಭುತ್ವದಲ್ಲಿ ಅದರ ನಿಜವಾದ ಭಾಗವಹಿಸುವಿಕೆ ಅಷ್ಟೇ ಮುಖ್ಯ. ಆದ್ದರಿಂದ, ಬುಡಕಟ್ಟು ಸಮುದಾಯದ ನಮ್ಮ ಸಹೋದರ ಸಹೋದರಿಯರು ದೇಶದಲ್ಲಿ ಉನ್ನತ ಸ್ಥಾನಗಳನ್ನು ತಲುಪುತ್ತಾರೆ ಮತ್ತು ರಾಷ್ಟ್ರವನ್ನು ಮುನ್ನಡೆಸುತ್ತಾರೆ ಎಂದು ಖಚಿತಪಡಿಸಿಕೊಳ್ಳುವುದು ನಮ್ಮ ಗುರಿಯಾಗಿದೆ. ನೀವು ನೋಡಿ, ಇಂದು ದೇಶದ ರಾಷ್ಟ್ರಪತಿಗಳು ಬುಡಕಟ್ಟು ಮಹಿಳೆಯಾಗಿದ್ದಾರೆ.**
>
> **ನರೇಂದ್ರ ಮೋದಿ, ಪ್ರಧಾನಮಂತ್ರಿ**




## ಮುಂಬೈ-ಅಹಮದಾಬಾದ್ ಹೈಸ್ಪೀಡ್ ರೈಲು ಕಾರಿಡಾರ್ ಯೋಜನೆ ಸುಗಮ ಪ್ರಗತಿ

ಗುಜರಾತ್ ನ ಸೂರತ್ ನಲ್ಲಿ ನಿರ್ಮಾಣ ಹಂತದಲ್ಲಿರುವ ಬುಲೆಟ್ ರೈಲು ನಿಲ್ದಾಣಕ್ಕೆ ಭೇಟಿ ನೀಡಿದ ಪ್ರಧಾನಮಂತ್ರಿ ಮೋದಿ ಮುಂಬೈ-ಅಹಮದಾಬಾದ್ ಹೈಸ್ಪೀಡ್ ರೈಲು ಕಾರಿಡಾರ್ ನ ಪ್ರಗತಿಯನ್ನು ಪರಿಶೀಲಿಸಿದರು. ಅವರು ಭಾರತದ ಮೊದಲ ಬುಲೆಟ್ ರೈಲು ಯೋಜನೆಯ ಹಿಂದಿನ ತಂಡದೊಂದಿಗೆ ಸಂವಾದ ನಡೆಸಿದರು ಮತ್ತು ವೇಗ ಮತ್ತು ವೇಳಾಪಟ್ಟಿಯ ಅನುಸರಣೆ ಸೇರಿದಂತೆ ಯೋಜನೆಯ ಪ್ರಗತಿಯ ಬಗ್ಗೆ ವಿಚಾರಿಸಿದರು. ಯೋಜನೆಯು ಯಾವುದೇ ತೊಂದರೆಗಳಿಲ್ಲದೆ ಸುಗಮವಾಗಿ ನಡೆಯುತ್ತಿದೆ ಎಂದು ಸಿಬ್ಬಂದಿ ಮಾಹಿತಿ ನೀಡಿದರು.

## ಕ್ಷಿಪ್ರ ಅಭಿವೃದ್ಧಿಗಾಗಿ ಉದ್ಘಾಟನೆ ಮತ್ತು ಅಡಿಪಾಯ

- ಗುಜರಾತ್ ನ ದೇಡಿಯಾಪಾಡ ಬುಡಕಟ್ಟು ಸಮುದಾಯಗಳನ್ನು ಮೇಲೆತ್ತುವ ಮತ್ತು ಈ ಪ್ರದೇಶದ ಗ್ರಾಮೀಣ ಮತ್ತು ದೂರದ ಪ್ರದೇಶಗಳಲ್ಲಿ ಮೂಲಸೌಕರ್ಯಗಳನ್ನು ಸುಧಾರಿಸುವ ಗುರಿಯನ್ನು ಹೊಂದಿರುವ ಹಲವಾರು ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ಮತ್ತು ಉದ್ಘಾಟನೆ.
- ಒಂದು ಲಕ್ಷ ಮನೆಗಳ ಗೃಹಪ್ರವೇಶ: ಪ್ರಧಾನ ಮಂತ್ರಿ ಜನಜಾತಿ ಆದಿವಾಸಿ ನ್ಯಾಯ್ ಮಹಾ ಅಭಿಯಾನ (ಪಿಎಂ-ಜನ್ಮಾನ್) ಮತ್ತು ಧರ್ತಿ ಆಬಾ ಜನಜಾತೀಯ ಗ್ರಾಮ ಉತ್ಕರ್ಷ್ ಅಭಿಯಾನ (ಡಿಎ-ಜಾಗುವಾ) ಅಡಿಯಲ್ಲಿ ಈ ಮನೆಗಳನ್ನು ನಿರ್ಮಿಸಲಾಗಿದೆ.
- ಸುಮಾರು 1,900 ಕೋಟಿ ರೂ. ವೆಚ್ಚದಲ್ಲಿ ಬುಡಕಟ್ಟು ವಿದ್ಯಾರ್ಥಿಗಳಿಗೆ ಮೀಸಲಾಗಿರುವ 42 ಏಕಲವ್ಯ ಮಾದರಿ ವಸತಿ ಶಾಲೆಗಳ (ಇಎಂಆರ್ಎಸ್) ಉದ್ಘಾಟನೆ.
- ಸಮುದಾಯ ಆಧಾರಿತ ಚಟುವಟಿಕೆಗಳ ಕೇಂದ್ರಗಳಾಗಿ ಸೇವೆ ಸಲ್ಲಿಸುತ್ತಿರುವ 228 ವಿವಿಧೋದ್ದೇಶ ಕೇಂದ್ರಗಳು, ಅಸ್ಸಾಂ ವೈದ್ಯಕೀಯ ಕಾಲೇಜಿನ ದಿಬ್ರುಗಢದಲ್ಲಿ ಸಾಮರ್ಥ್ಯ ಕೇಂದ್ರ ಮತ್ತು ಮಣಿಪುರದ ಇಂಫಾಲ್ ನಲ್ಲಿ ಬುಡಕಟ್ಟು ಸಂಸ್ಕೃತಿ ಮತ್ತು ಪರಂಪರೆಯ ಸಂರಕ್ಷಣೆಗಾಗಿ ಬುಡಕಟ್ಟು ಸಂಶೋಧನಾ ಸಂಸ್ಥೆ (ಟಿ.ಆರ್.ಐ) ಕಟ್ಟಡಗಳ ಉದ್ಘಾಟನೆ.
- ಬುಡಕಟ್ಟು ಪ್ರದೇಶಗಳಲ್ಲಿ ಸಂಪರ್ಕವನ್ನು ಸುಧಾರಿಸಲು ಗುಜರಾತ್ ನ 14 ಬುಡಕಟ್ಟು ಜಿಲ್ಲೆಗಳಿಗೆ 250 ಬಸ್ಸುಗಳಿಗೆ ಹಸಿರು ನಿಶಾನೆ ತೋರಲಾಗಿದೆ.
- ಬುಡಕಟ್ಟು ಪ್ರದೇಶಗಳಲ್ಲಿ ಸಂಪರ್ಕವನ್ನು ಹೆಚ್ಚಿಸಲು 748 ಕಿಲೋಮೀಟರ್ ಹೊಸ ರಸ್ತೆಗಳಿಗೆ ಮತ್ತು ಸಮುದಾಯ ಕೇಂದ್ರಗಳಾಗಿ ಸೇವೆ ಸಲ್ಲಿಸಲು ದಜಾಗುವಾ ಅಡಿಯಲ್ಲಿ 14 ಬುಡಕಟ್ಟು ಬಹು ಮಾರುಕಟ್ಟೆ ಕೇಂದ್ರಗಳಿಗೆ (ಟಿಎಂಎಂಸಿಗಳು) ಶಂಕುಸ್ಥಾಪನೆ ನೆರವೇರಿಸಿದರು.

**ರೂ. 2,320+** ಕೋಟಿ ವೆಚ್ಚದಲ್ಲಿ

**ಏಕಲವ್ಯ ಮಾದರಿ ವಸತಿ ಶಾಲೆಗಳ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಲಾಯಿತು.**

ಬುಡಕಟ್ಟು ಹೆಮ್ಮೆಯು ಸಾವಿರಾರು ವರ್ಷಗಳಿಂದ ಭಾರತದ ಪ್ರಜ್ಞೆಯ ಅವಿಭಾಜ್ಯ ಅಂಗವಾಗಿದೆ. ಬುಡಕಟ್ಟು ಯುವಕರಿಗೆ ಅವಕಾಶ ನೀಡಿದಾಗ, ಅವರು ಪ್ರತಿಯೊಂದು ಕ್ಷೇತ್ರದಲ್ಲೂ ಹೆಚ್ಚಿನ ಎತ್ತರವನ್ನು ಸಾಧಿಸುವ ಶಕ್ತಿಯನ್ನು ಹೊಂದಿರುತ್ತಾರೆ. ಧೈರ್ಯ, ಕಠಿಣ ಪರಿಶ್ರಮ ಮತ್ತು ಸಾಮರ್ಥ್ಯವು ಅವರ ಸಂಪ್ರದಾಯಗಳಿಂದ ಆನುವಂಶಿಕವಾಗಿ ಬಂದಿದೆ. ಬುಡಕಟ್ಟಿನ ವೀರಪುತ್ರರು ಮತ್ತು ಹೆಣ್ಣುಮಕ್ಕಳು ವಿಶ್ವಾದ್ಯಂತ ಭಾರತದ ವೈಭವವನ್ನು ಹೆಚ್ಚಿಸಲು ಹೇಗೆ ಗಮನಾರ್ಹ ಕೊಡುಗೆ ನೀಡಿದ್ದಾರೆ ಎಂಬುದನ್ನು ಕ್ರೀಡಾ ಪ್ರಪಂಚದ ಉದಾಹರಣೆ ತೋರಿಸುತ್ತದೆ. ಇದಲ್ಲದೆ, ಬುಡಕಟ್ಟು ಮಕ್ಕಳಿಗೆ ಉಜ್ವಲ ಭವಿಷ್ಯವನ್ನು ಖಚಿತಪಡಿಸಿಕೊಳ್ಳಲು ಕೇಂದ್ರ ಸರ್ಕಾರವು ಹಗಲಿರುಳು ಶ್ರಮಿಸುತ್ತಿದೆ. ಕಳೆದ ಐದರಿಂದ ಆರು ವರ್ಷಗಳಲ್ಲಿ ಕೇಂದ್ರ ಸರ್ಕಾರವು ದೇಶಾದ್ಯಂತ ಏಕಲವ್ಯ ಮಾದರಿ ವಸತಿ ಶಾಲೆಗಳಲ್ಲಿ 18,000 ಕೋಟಿ ರೂ.ಗಿಂತ ಹೆಚ್ಚು ಹೂಡಿಕೆ ಮಾಡಿದೆ ಎಂದು ಪ್ರಧಾನಮಂತ್ರಿ ಮೋದಿ ಹೇಳಿದರು. ಶಾಲೆಗಳಲ್ಲಿ ಬಾಲಕಿಯರಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗಿದೆ. ಇದರ ಪರಿಣಾಮವಾಗಿ, ಈ ಶಾಲೆಗಳಿಗೆ ದಾಖಲಾದ ಬುಡಕಟ್ಟು ಮಕ್ಕಳ ಸಂಖ್ಯೆ ಶೇಕಡಾ 60 ರಷ್ಟು ಹೆಚ್ಚಾಗಿದೆ.

### ದೇವಮೊಗ್ರ ಮಾತೆಗೆ ಪೂಜೆ

ನವೆಂಬರ್ 15 ರಂದು ಜನಜಾತೀಯ ಗೌರವ್ ದಿನದ ಅಂಗವಾಗಿ ಪ್ರಧಾನಮಂತ್ರಿ ಮೋದಿ ದೇವಮೊಗ್ರ ಮಾತಾ ದೇವಾಲಯಕ್ಕೆ ಭೇಟಿ ನೀಡಿದ್ದರು. ದೇವಮೊಗ್ರ ಮಾತೆಗೆ ಪ್ರಾರ್ಥನೆ ಸಲ್ಲಿಸಿದ ಅವರು, ಎಲ್ಲಾ ನಾಗರಿಕರ ಉತ್ತಮ ಆರೋಗ್ಯ ಮತ್ತು ಪ್ರಗತಿಗಾಗಿ ಪ್ರಾರ್ಥನೆ ಸಲ್ಲಿಸಿದರು. ಈ ಅನುಭವವನ್ನು ಪವಿತ್ರವೆಂದು ಬಣ್ಣಿಸಿದ ಪ್ರಧಾನಮಂತ್ರಿ ಮೋದಿ, ದೇವಿಯ ಆಶೀರ್ವಾದವನ್ನು ಪಡೆಯಲು ದೇವಾಲಯಕ್ಕೆ ಭೇಟಿ ನೀಡುವಂತೆ ದೇಶಾದ್ಯಂತದ ಜನರಿಗೆ ಮನವಿ ಮಾಡಿದರು.

### ಜಾರ್ಖಂಡ್ ಸಂಸ್ಥಾಪನಾ ದಿನದ ಶುಭಾಶಯ

ಜಾರ್ಖಂಡ್ ಸಂಸ್ಥಾಪನಾ ದಿನದಂದು ಪ್ರಧಾನಮಂತ್ರಿ ಮೋದಿ ಶುಭ ಕೋರಿದ್ದಾರೆ. ಜಾರ್ಖಂಡ್ ರೋಮಾಂಚಕ ಬುಡಕಟ್ಟು ಸಂಸ್ಕೃತಿಯಿಂದ ಸಮೃದ್ಧವಾದ ಅದ್ಭುತ ಭೂಮಿಯಾಗಿದೆ. ಭಗವಾನ್ ಬಿರ್ಸಾ ಮುಂಡಾ ಅವರ ಪರಂಪರೆಯನ್ನು ಸ್ಮರಿಸಿದ ಅವರು, ಈ ಪವಿತ್ರ ಭೂಮಿಯ ಇತಿಹಾಸವು ಧೈರ್ಯ, ಹೋರಾಟ ಮತ್ತು ಘನತೆಯ ಸ್ಫೂರ್ತಿದಾಯಕ ಕಥೆಗಳಿಂದ ತುಂಬಿದೆ ಎಂದರು.

ಪ್ರಧಾನಮಂತ್ರಿಯವರ ಕಾರ್ಯಕ್ರಮವನ್ನು ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.



# ಸ್ವಾವಲಂಬನೆಯತ್ತ ದಿವ್ಯಾಂಗರ ಸಬಲೀಕರಣ

*ಅಂತಾರಾಷ್ಟ್ರೀಯ ದಿವ್ಯಾಂಗರ ದಿನವು ಮಿತಿಗಳನ್ನು ಅವಕಾಶಗಳಾಗಿ ಪರಿವರ್ತಿಸುವ ಅಚಲ ದೃಢನಿಶ್ಚಯ ಮತ್ತು ಚೇತರಿಕೆಯನ್ನು ಆಚರಿಸುತ್ತದೆ. ಕಳೆದ ದಶಕದಲ್ಲಿ, ಕೇಂದ್ರ ಸರ್ಕಾರದ ಪ್ರಗತಿಪರ ನೀತಿಗಳು ಈ ಸಾಧ್ಯತೆಗಳನ್ನು ಬಲಪಡಿಸಿವೆ. ಕಳೆದ 10 ವರ್ಷಗಳಲ್ಲಿ, ಕೇಂದ್ರ ಸರ್ಕಾರವು ದಿವ್ಯಾಂಗರ ಜೀವನವನ್ನು ಗೌರವಯುತ ಮತ್ತು ಸ್ವಾವಲಂಬಿಯನ್ನಾಗಿ ಮಾಡಲು ಹೇಗೆ ಪ್ರಯತ್ನಗಳನ್ನು ಕೈಗೊಂಡಿದೆ ಎಂಬುದನ್ನು ತಿಳಿಯೋಣ.*

ಅವಕಾಶ ಮತ್ತು ನಂಬಿಕೆ ವ್ಯಕ್ತಿಗಳನ್ನು ತಮ್ಮ ಪೂರ್ಣ ಸಾಮರ್ಥ್ಯವನ್ನು ಅರಿತುಕೊಳ್ಳಲು ಸಶಕ್ತಗೊಳಿಸುತ್ತದೆ. ಜಮ್ಮು ಕಾಶ್ಮೀರದ 16 ವರ್ಷದ ಬಿಲ್ಲುಗಾರಿ ಶೀತಲ್ ದೇವಿಯ ಸಾಧನೆಯಲ್ಲಿ ಇದಕ್ಕೆ ಒಂದು ಉದಾಹರಣೆ ಕಂಡುಬರುತ್ತದೆ, ಅವಳು ಎರಡೂ ಕೈಗಳ ನ್ಯೂನತೆಯಿದ್ದರೂ ತನ್ನ ಹಲ್ಲುಗಳು ಮತ್ತು ಪಾದಗಳನ್ನು ಬಳಸಿ ಬಿಲ್ಲಿನಿಂದ ಬಾಣವನ್ನು ಹೊಡೆಯುತ್ತಾಳೆ. ಫೋಕೊಮೆಲಿಯಾ ಎಂಬ ಅಪರೂಪದ ಸ್ಥಿತಿಯೊಂದಿಗೆ ಜನಿಸಿದ ಆಕೆಯ ಸಂಯಮ ಪ್ರತಿ ಹಂತದಲ್ಲೂ ಸರ್ಕಾರದ ಬೆಂಬಲದೊಂದಿಗೆ ಫಲ ನೀಡಿತು. ಶೀತಲ್ ಭಾರತೀಯ ಸೇನೆಯ ಯುವ ಕಾರ್ಯಕ್ರಮಕ್ಕೆ ಸೇರಿದರು, ಇದು ಅವರ ಅಥ್ಲೆಟಿಕ್ ವೃತ್ತಿಜೀವನಕ್ಕೆ ಅಡಿಪಾಯ ಹಾಕಿತು. ಅವರು ಹ್ಯಾಂಗ್ಝೌ ಏಷ್ಯನ್ ಪ್ಯಾರಾ ಕ್ರೀಡಾಕೂಟದ ಬಿಲ್ಲುಗಾರಿಕೆ ಸ್ಪರ್ಧೆಯಲ್ಲಿ ಭಾಗಿಯಾದರು ಮತ್ತು ಮಹಿಳೆಯರ ವೈಯಕ್ತಿಕ ಸಂಯುಕ್ತ ಮುಕ್ತ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದರು. ದೇಶದಲ್ಲಿ ದಿವ್ಯಾಂಗರ ಅಸಂಖ್ಯಾತ ಯಶೋಗಾಥೆಗಳು ಸ್ಫೂರ್ತಿದಾಯಕವಾಗಿವೆ, ಇವೆಲ್ಲವೂ ಕೇಂದ್ರ ಸರ್ಕಾರದ ನೀತಿಗಳು, ನಿರ್ಧಾರಗಳು ಮತ್ತು ಅವರನ್ನು ಸಬಲೀಕರಣಗೊಳಿಸುವ ಉಪಕ್ರಮಗಳಿಂದ ಸಾಧ್ಯವಾಗಿದೆ.



## ಸಬಲೀಕರಣಗೊಳಿಸಲು ದಿವ್ಯಾಂಗ ಕೇಂದ್ರಿತ ಉಪಕ್ರಮಗಳು

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಅಧೀನದಲ್ಲಿರುವ ದಿವ್ಯಾಂಗರ ಸಬಲೀಕರಣ ಇಲಾಖೆಯು ಭಾರತದಾದ್ಯಂತ ದಿವ್ಯಾಂಗರ ವ್ಯಕ್ತಿಗಳ ಸಬಲೀಕರಣಕ್ಕಾಗಿ 16 ಉಪಕ್ರಮಗಳನ್ನು ಪ್ರಾರಂಭಿಸಿದೆ. ಇವುಗಳಲ್ಲಿ ಒಂದು ಸುಗಮ್ಯ ಭಾರತ ಅಭಿಯಾನ, ಇದನ್ನು 2015 ರಲ್ಲಿ ಅಂತಾರಾಷ್ಟ್ರೀಯ ದಿವ್ಯಾಂಗರ ದಿನದಂದು (ಡಿಸೆಂಬರ್ 3) ಪ್ರಾರಂಭಿಸಲಾಯಿತು. ದಿವ್ಯಾಂಗರಿಗೆ ಸಾರ್ವತ್ರಿಕ ಪ್ರವೇಶದ ಉದ್ದೇಶದಿಂದ ಪ್ರಾರಂಭಿಸಲಾದ ಈ ರಾಷ್ಟ್ರವ್ಯಾಪಿ ಉಪಕ್ರಮವು 10 ವರ್ಷಗಳನ್ನು ಪೂರೈಸಿದೆ ಮತ್ತು ಪ್ರವೇಶ ಹೆಚ್ಚಿಸಿದೆ...

1. ಸುಗಮ್ಯ ಭಾರತ ಅಭಿಯಾನ 2. ಸುಗಮ್ಯ ಭಾರತ ಯಾತ್ರೆ 3. ಪ್ರವೇಶ ಮಾರ್ಗಗಳು 4. ಹೈ-ಪವರ್ ಕನ್ನಡಕ 5. ದಿವ್ಯಾಶಾ ಇ-ಕಾಫಿ ಟೇಬಲ್ ಬುಕ್ 6. ಕದಮ್ ಮೊಣಕಾಲು ಕೀಲು 7. ಜಾಗೃತಿ  ಮತ್ತು ಪ್ರಚಾರ ಯೋಜನೆ 8. ಕೈಗೆಟಕುವ ಕಥೆ ಪುಸ್ತಕಗಳು 9. ಸ್ಟ್ಯಾಂಡರ್ಡ್ ಭಾರತಿ ಬ್ರೈಲ್ ಕೋಡ್ 10. ಬ್ರೈಲ್ ಬುಕ್ಸ್ ಪೋರ್ಟಲ್ 11. ಇನ್ಫೋಸಿಸ್ ಬಿಪಿಎಂ ನೊಂದಿಗೆ ತಿಳಿವಳಿಕೆ ಒಪ್ಪಂದ 12. ಉದ್ಯೋಗ ಕೌಶಲ್ಯ ಪುಸ್ತಕ 13. ಇನ್ಫೋಸಿಸ್ ಸ್ಪ್ರಿಂಗ್ ಬೋರ್ಡ್ ಕೌಶಲ್ಯ ಕಾರ್ಯಕ್ರಮ 14. ಶ್ರವಣ ವಿಶೇಷ ಚೇತನ  ವ್ಯಕ್ತಿಗಳಿಗೆ ಗೂಗಲ್ ವಿಸ್ತರಣೆ 15. ಇ-ಸಾನಿಧ್ಯ ಪೋರ್ಟಲ್ 16. ಸಿಕಂದರಾಬಾದ್ ನ ಎನ್ಐಇಪಿಐಡಿಯಿಂದ ಕಂಪ್ಯೂಟರ್ ಆಧಾರಿತ ಇಂಡಿಯನ್ ಇಂಟೆಲಿಜೆನ್ಸ್ ಟೆಸ್ಟ್.

### ಸುಗಮ್ಯ ಭಾರತ ಅಭಿಯಾನವು ಪ್ರತಿಯೊಂದು ಹಂತದಲ್ಲೂ ಲಭ್ಯತೆಯನ್ನು ಸುಧಾರಿಸಿದೆ



**153** ಅಂತಾರಾಷ್ಟ್ರೀಯ ಮತ್ತು ದೇಶೀಯ ವಿಮಾನ ನಿಲ್ದಾಣಗಳು ಈಗ ಗಾಲಿಕುರ್ಚಿಗಳು, ರಾಂಪ್ ಗಳು, ಪ್ರವೇಶಿಸಬಹುದಾದ ಶೌಚಾಲಯಗಳು, ಸ್ಪರ್ಶದಿಂದ ತಿಳಿಯುವ ಪಾದಚಾರಿ ರಸ್ತೆ, ಎಲಿವೇಟರ್ ಗಳು ಮತ್ತು ಮೀಸಲಾದ ಪಾರ್ಕಿಂಗ್ ಸೌಲಭ್ಯಗಳನ್ನು ಒದಗಿಸುತ್ತವೆ.

**42,000** ಕ್ಕೂ ಹೆಚ್ಚು ಬಸ್ಸುಗಳು ಭಾಗಶಃ ಪ್ರವೇಶಾರ್ಹವಾಗಿದ್ದು, 8,695 ಬಸ್ಸುಗಳು ಸಂಪೂರ್ಣವಾಗಿ ಪ್ರವೇಶಾರ್ಹವಾಗಿವೆ




**709** ರೈಲ್ವೆ ನಿಲ್ದಾಣಗಳು ಈಗ ರಾಂಪ್ ಗಳು, ಶೌಚಾಲಯಗಳು, ಎಲಿವೇಟರ್ ಗಳು, ಸಹಾಯ ಕೇಂದ್ರಗಳು, ಪಾರ್ಕಿಂಗ್ ಮತ್ತು ಕುಡಿಯುವ ನೀರಿನ ಸೌಲಭ್ಯಗಳನ್ನು ಹೊಂದಿವೆ.

**3,120** ಬಸ್ ಟರ್ಮಿನಲ್ ಗಳು ದಿವ್ಯಾಂಗ ಸ್ನೇಹಿಯಾಗಿವೆ.

### ದಿವ್ಯಾಂಗರ ಮಕ್ಕಳಿಗೆ ಉತ್ತಮ ಶಿಕ್ಷಣ...

- 1 ರಿಂದ 6 ನೇ ತರಗತಿಯ ಎನ್.ಸಿ.ಇ.ಆರ್.ಟಿ. ಪಠ್ಯಪುಸ್ತಕಗಳನ್ನು ಭಾರತೀಯ ಸಂಜ್ಞಾ ಭಾಷೆಗೆ ಪರಿವರ್ತಿಸಲಾಗಿದೆ. 1 ರಿಂದ 3ನೇ ತರಗತಿಯ ಪಠ್ಯಪುಸ್ತಕಗಳನ್ನು ಸಹ ಐಎಸ್ಎಲ್ ಆಗಿ ಪರಿವರ್ತಿಸಲಾಗಿದೆ.
- ಭಾರತೀಯ ಸಂಜ್ಞಾ ಭಾಷಾ ಸಂಶೋಧನೆ ಮತ್ತು ತರಬೇತಿ ಕೇಂದ್ರವು ರಾಷ್ಟ್ರೀಯ ಮುಕ್ತ ಶಾಲಾ ಸಂಸ್ಥೆಯ ಸಹಯೋಗದೊಂದಿಗೆ, ಮಾಧ್ಯಮಿಕ ಹಂತದಲ್ಲಿ ಐಎಸ್ಎಲ್ ಗಾಗಿ ಭಾಷಾ ವಿಷಯವಾಗಿ ಪಠ್ಯಕ್ರಮವನ್ನು ಅಭಿವೃದ್ಧಿಪಡಿಸಿದೆ.
- 10,000ಕ್ಕೂ ಹೆಚ್ಚು ಪದಗಳ ಐಎಸ್ಎಲ್ ನಿಘಂಟನ್ನು ಅಭಿವೃದ್ಧಿಪಡಿಸಲಾಗಿದೆ.

ಸುಮಾರು **1.26** ಕೋಟಿ ವಿಶೇಷ ದಿವ್ಯಾಂಗ ಗುರುತಿನ ಚೀಟಿಗಳನ್ನು ನೀಡಲಾಗಿದೆ.



## ದಿವ್ಯಾಂಗರ ಜೀವನ ಸುಗಮ

- ನಿರಾಮಯ ಆರೋಗ್ಯ ವಿಮಾ ಯೋಜನೆಯು ಕೆಲವು ವರ್ಗದ ಅಂಗವೈಕಲ್ಯಗಳಿಗೆ ದಿವ್ಯಾಂಗರಿಗೆ 1 ಲಕ್ಷ ರೂ.ಗಳವರೆಗೆ ಆರೋಗ್ಯ ರಕ್ಷಣೆಯನ್ನು ಒದಗಿಸುತ್ತದೆ.
- ಅಪರೂಪದ ಕಾಯಿಲೆಗಳ ರಾಷ್ಟ್ರೀಯ ನೀತಿ, 2021 ರ ಅಡಿಯಲ್ಲಿ 14 ನಿಗದಿಪಡಿಸಿದ ಉತ್ಕೃಷ್ಟತಾ ಕೇಂದ್ರಗಳಲ್ಲಿ 63 ಅಪರೂಪದ ಕಾಯಿಲೆಗಳ ಚಿಕಿತ್ಸೆಗಾಗಿ 50 ಲಕ್ಷ ರೂ.ಗಳವರೆಗೆ ಆರ್ಥಿಕ ನೆರವು ಒದಗಿಸುತ್ತದೆ.

**2011ರ ಜನಗಣತಿಯ ಪ್ರಕಾರ**

**2.68**

**ಕೋಟಿ ದಿವ್ಯಾಂಗರಿದ್ದಾರೆ, ಇದು ದೇಶದ ಒಟ್ಟು ಜನಸಂಖ್ಯೆಯ ಶೇ.2.21ರಷ್ಟಿದೆ.**

### ದಿವ್ಯಾಂಗರನ್ನು ಸಬಲೀಕರಣಗೊಳಿಸುವ ನಿರ್ಧಾರಗಳು ಮತ್ತು ಕ್ರಮಗಳು

- ಕಳೆದ 11 ವರ್ಷಗಳಲ್ಲಿ, 31.16 ಲಕ್ಷ ದಿವ್ಯಾಂಗರಿಗೆ 2,415 ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯದ ಸಹಾಯಕ ಸಾಧನಗಳು ಮತ್ತು ಸಹಾಯಗಳನ್ನು ಒದಗಿಸುತ್ತದೆ.
- ದಿವ್ಯಾಂಗರ ಸಬಲೀಕರಣ ಇಲಾಖೆಯು ಶಿಬಿರವನ್ನು ಆಯೋಜಿಸಿತು, ಈ ಸಮಯದಲ್ಲಿ 10 ಗಿನ್ನಿಸ್ ವಿಶ್ವ ದಾಖಲೆಗಳನ್ನು ಬರೆಯಲಾಯಿತು.
- 2014ಕ್ಕೂ ಮೊದಲು ಕೇವಲ 7 ಲಕ್ಷ ಜನರಿಗೆ ಕೃತಕ ಕೈಕಾಲುಗಳು ಮತ್ತು ಸಾಧನಗಳನ್ನು ಒದಗಿಸಲಾಗಿತ್ತು. 2014 ರಿಂದ, 3.1 ದಶಲಕ್ಷಕ್ಕೂ ಹೆಚ್ಚು ವಿಶೇಷಚೇತನರಿಗೆ 1.26 ಮಂದಿಗೆ ಕೃತಕ ಕೈಕಾಲುಗಳನ್ನು ಒದಗಿಸಲಾಗಿದೆ.

### ದಿವ್ಯಾಂಗರ  ಹಕ್ಕುಗಳ ಕಾಯ್ದೆ, 2016

- ಅಂಗವೈಕಲ್ಯ ವಿಭಾಗಗಳ ಸಂಖ್ಯೆಯನ್ನು 7 ರಿಂದ 21ಕ್ಕೆ ಹೆಚ್ಚಿಸಲಾಗಿದೆ, ಇದರಿಂದಾಗಿ ಹೆಚ್ಚಿನ ದಿವ್ಯಾಂಗರು ಪ್ರಯೋಜನ ಪಡೆಯಬಹುದು.
- ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿಯನ್ನು ಶೇ.3ರಿಂದ ಶೇ.4ಕ್ಕೆ ಹೆಚ್ಚಿಸಲಾಗಿದೆ.
- ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿಯನ್ನು ಶೇ.3ರಿಂದ ಶೇ.5ಕ್ಕೆ ಹೆಚ್ಚಿಸಲಾಗಿದೆ.




# ನ್ಯಾಯ ಪ್ರೋಷಣೆ ಸುಲಲಿತ

# ಸುಗಮ ಜೀವನ ಮತ್ತು ಸುಲಲಿತ ವ್ಯವಹಾರ

*ಜನರ ಸಾಮಾಜಿಕ ಅಥವಾ ಆರ್ಥಿಕ ಹಿನ್ನೆಲೆ ಏನೇ ಇರಲಿ ನ್ಯಾಯವು ಎಲ್ಲರಿಗೂ ಲಭ್ಯವಾದಾಗ ಮತ್ತು ಪ್ರತಿಯೊಬ್ಬ ವ್ಯಕ್ತಿಯನ್ನು ತಲುಪಿದಾಗ, ಅದು ಸಾಮಾಜಿಕ ನ್ಯಾಯದ ಅಡಿಪಾಯವಾಗಲಿದೆ. ನ್ಯಾಯದ ಈ ಮೂಲಭೂತ ಹಕ್ಕನ್ನು ಬಲಪಡಿಸಲು ಮತ್ತು ಸರಳಗೊಳಿಸಲು, "ಕಾನೂನು ನೆರವು ವಿತರಣಾ ಕಾರ್ಯವಿಧಾನ ಬಲವರ್ಧನೆ" ಎಂಬ ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನಕ್ಕೆ ನವೆಂಬರ್ 8ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಚಾಲನೆ ನೀಡಿದರು.*

ಭಾರತದ ಕಾನೂನು ವ್ಯವಸ್ಥೆಯು ಇನ್ನು ಶಿಕ್ಷೆಯ ವ್ಯವಸ್ಥೆಯ ಮೇಲೆ ಕಾರ್ಯನಿರ್ವಹಿಸುವುದಿಲ್ಲ, ಬದಲಿಗೆ ನ್ಯಾಯದ ಮೇಲೆ ಕೇಂದ್ರೀಕೃತವಾಗಿದೆ. ನ್ಯಾಯವು ಪ್ರತಿಯೊಬ್ಬ ವ್ಯಕ್ತಿಯ ಮೂಲಭೂತ ಹಕ್ಕು, ಮತ್ತು ಪ್ರತಿಯೊಬ್ಬರೂ ಅದನ್ನು ಸುಲಭವಾಗಿ ಪಡೆಯುವಂತಿರಬೇಕು. ನ್ಯಾಯ ಮತ್ತು ಕಾನೂನು ನೆರವನ್ನು ಸುಲಭವಾಗಿ ಪಡೆಯುವಂತಾಗಿಸುವಲ್ಲಿ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ (NALSA) ಪ್ರಮುಖ ಪಾತ್ರ ವಹಿಸಿದೆ. ಈ ವರ್ಷ NALSA ದ 30ನೇ ವಾರ್ಷಿಕೋತ್ಸವ. ಈ ಮೂರು ದಶಕಗಳಲ್ಲಿ, ನ್ಯಾಯಾಂಗವನ್ನು ದೇಶದ ಅತಿ ಬಡ ನಾಗರಿಕರನ್ನು ನ್ಯಾಯಾಂಗದೊಂದಿಗೆ ಸಂಪರ್ಕಿಸಲು NALSA ಗಮನಾರ್ಹ ಪ್ರಯತ್ನಗಳನ್ನು ಮಾಡಿದೆ. ರಾಷ್ಟ್ರಮಟ್ಟದಿಂದ ತಾಲ್ಲೂಕು ಮಟ್ಟದವರೆಗೆ ನ್ಯಾಯಾಂಗ ಮತ್ತು ನಾಗರಿಕರ ನಡುವೆ ಸೇತುವೆಯಾಗಿ ಕಾನೂನು ಸೇವಾ ಪ್ರಾಧಿಕಾರಗಳು ಕಾರ್ಯನಿರ್ವಹಿಸುತ್ತಿವೆ. ಪ್ರಸ್ತುತ, ಲೋಕ್ ಅದಾಲತ್ ಗಳು ಮತ್ತು ಮೊಕದ್ದಮೆ ಪೂರ್ವ ಇತ್ಯರ್ಥಗಳ ಮೂಲಕ, ಲಕ್ಷಾಂತರ ವಿವಾದಗಳನ್ನು ತ್ವರಿತವಾಗಿ, ಸೌಹಾರ್ದಯುತವಾಗಿ ಮತ್ತು ಕಡಿಮೆ ವೆಚ್ಚದಲ್ಲಿ ಪರಿಹರಿಸಲಾಗುತ್ತಿದೆ.

ಭಾರತ ಸರ್ಕಾರವು ಪ್ರಾರಂಭಿಸಿರುವ ಕಾನೂನು ನೆರವು ರಕ್ಷಣಾ ಸಲಹೆಗಾರ ವ್ಯವಸ್ಥೆಯು ಕೇವಲ ಮೂರು ವರ್ಷಗಳಲ್ಲಿ ಸುಮಾರು 8 ಲಕ್ಷ ಕ್ರಿಮಿನಲ್ ಪ್ರಕರಣಗಳನ್ನು ಪರಿಹರಿಸಿದೆ. ಸರ್ಕಾರದ ಈ ಪ್ರಯತ್ನಗಳು ದೇಶಾದ್ಯಂತ ಬಡವರು, ದಮನಿತರು, ವಂಚಿತರು ಮತ್ತು ದುರ್ಬಲ ವರ್ಗದವರಿಗೆ ನ್ಯಾಯದ ಸುಲಭ ಲಭ್ಯತೆಯನ್ನು ಖಚಿತಪಡಿಸಿವೆ. ಕಳೆದ 11 ವರ್ಷಗಳಲ್ಲಿ, ಸರ್ಕಾರವು ಸುಲಲಿತ ವ್ಯವಹಾರ ಮತ್ತು ಸುಗಮ ಜೀವನವನ್ನು ಹೆಚ್ಚಿಸುವತ್ತ ನಿರಂತರವಾಗಿ ಗಮನಹರಿಸಿದೆ. ಉದ್ಯಮ/ ವ್ಯವಹಾರಗಳಿಗೆ 40,000ಕ್ಕೂ ಹೆಚ್ಚು ಅನಗತ್ಯ ಅನುಸರಣೆಗಳನ್ನುತೆಗೆದುಹಾಕಲಾಗಿದೆ.ಜನ್‌ವಿಶ್ವಾಸ್‌ಕಾಯ್ದೆಯ ಮೂಲಕ, 3,400ಕ್ಕೂ ಹೆಚ್ಚು ಕಾನೂನು ನಿಬಂಧನೆಗಳನ್ನು ಅಪರಾಧ ಮುಕ್ತಗೊಳಿಸಲಾಗಿದೆ ಮತ್ತು 1,500ಕ್ಕೂ ಹೆಚ್ಚು ಬಳಕೆಯಲ್ಲಿಲ್ಲದ ಕಾನೂನುಗಳನ್ನು ತೆಗೆದುಹಾಕಲಾಗಿದೆ. ಸುಲಲಿತ ನ್ಯಾಯವನ್ನು ಖಚಿತಪಡಿಸಿಕೊಂಡಾಗ ಮಾತ್ರ "ಸುಲಲಿತ ವ್ಯವಹಾರ ಮತ್ತು ಸುಗಮ ಜೀವನ" ವಾಸ್ತವದಲ್ಲಿ ಸಾಧ್ಯವಾಗಲಿದೆ ಎಂದು ಪ್ರಧಾನಮಂತ್ರಿ ಮೋದಿ ಅವರು

## ಸಮುದಾಯ ಮಧ್ಯಸ್ಥಿಕೆ ಯೋಜನೆಗೆ ಚಾಲನೆ...

### ನ್ಯಾಯದ ಲಭ್ಯತೆಗಾಗಿ ಜನಾಂದೋಲನ

ಕಾನೂನು ನೆರವು ಕಾರ್ಯವಿಧಾನಗಳನ್ನು ಬಲಪಡಿಸುವ ಕುರಿತಾದ 20 ನೇ ರಾಷ್ಟ್ರೀಯ ಸಮ್ಮೇಳನದಲ್ಲಿ ಕಾನೂನು ಸೇವೆಗಳ ದಿನದ ಸ್ಮರಣಾರ್ಥ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪರಸ್ಪರ ಒಪ್ಪಿಗೆಯ ಮತ್ತು ಶಾಂತಿಯುತ ವಿವಾದ ಪರಿಹಾರಕ್ಕಾಗಿ ಸಮುದಾಯ ಮಧ್ಯಸ್ಥಿಕೆ ಯೋಜನೆಯ ಸಮುದಾಯ ಮಧ್ಯಸ್ಥಿಕೆ ತರಬೇತಿ ಮಾಡ್ಯೂಲ್ ಪ್ರಾರಂಭಿಸಿದರು. ಇದು ಜನರಿಗೆ ನ್ಯಾಯ ಮತ್ತು ಸಮುದಾಯ ಪರಿಹಾರಗಳನ್ನು ನೀಡಲಿದೆ. ಸಂವಾದ ಮತ್ತು ಒಮ್ಮತದ ಮೂಲಕ ವಿವಾದಗಳನ್ನು ಪರಿಹರಿಸುವ ಪ್ರಾಚೀನ ಭಾರತೀಯ ಸಂಪ್ರದಾಯವನ್ನು ಈ ಹೊಸ ಮಾಡ್ಯೂಲ್ ಪುನರುಜ್ಜೀವನಗೊಳಿಸುತ್ತಿದೆ ಎಂದು ಪ್ರಧಾನಮಂತ್ರಿ ಮೋದಿ ಹೇಳಿದ್ದಾರೆ. ಗ್ರಾಮ ಪಂಚಾಯತ್ ಗಳಿಂದ ಹಿಡಿದು ಗ್ರಾಮದ ಹಿರಿಯರವರೆಗೆ, ಮಧ್ಯಸ್ಥಿಕೆಯು ಸದಾ ಭಾರತದ ನಾಗರಿಕತೆಯ ಒಂದು ಭಾಗವಾಗಿದೆ. ಹೊಸ ಮಧ್ಯಸ್ಥಿಕೆ ಕಾಯ್ದೆಯು ಈ ಸಂಪ್ರದಾಯವನ್ನು ಮುನ್ನಡೆಸುತ್ತಾ ಅದನ್ನು ಆಧುನೀಕರಿಸುತ್ತಲಿದೆ. ವಿವಾದಗಳನ್ನು ಪರಿಹರಿಸಲು, ಸಾಮರಸ್ಯವನ್ನು ಕಾಪಾಡಲು ಮತ್ತು ಮೊಕದ್ದಮೆಗಳ ಸಂಖ್ಯೆಯನ್ನು ಕಡಿಮೆ ಮಾಡಲು ಪೂರಕ ಸಂಪನ್ಮೂಲಗಳನ್ನು ಸಮುದಾಯ ಮಧ್ಯಸ್ಥಿಕೆ ಸೃಜಿಸಲಿದೆ.

### 18 ಭಾರತೀಯ ಭಾಷೆಗಳಿಗೆ ತೀರ್ಪುಗಳ ಅನುವಾದ ಕಾರ್ಯ ಪ್ರಾರಂಭ

ನ್ಯಾಯದಾನವನ್ನು ಅರ್ಥವಾಗುವ ಭಾಷೆಯಲ್ಲಿ ನೀಡಬೇಕು. ಕಾನೂನು ರೂಪಿಸುವ ಸಂದರ್ಭದಲ್ಲಿ ಈ ತತ್ವವನ್ನು ಪರಿಗಣಿಸಬೇಕು. ಜನರು ತಮ್ಮ ಭಾಷೆಯಲ್ಲಿ ಕಾನೂನನ್ನು ಅರ್ಥಮಾಡಿಕೊಂಡಾಗ, ಸೂಕ್ತ ಅನುಸರಣೆಗೆ ಸಾಧ್ಯವಾಗಲಿದೆ ಮತ್ತು ವಿವಾದಗಳು ಕಡಿಮೆಯಾಗಲಿದೆ. ತೀರ್ಪುಗಳು ಮತ್ತು ಕಾನೂನು ದಾಖಲೆಗಳನ್ನು ಸ್ಥಳೀಯ ಭಾಷೆಗಳಲ್ಲಿ ಲಭ್ಯವಾಗುವಂತೆ ಮಾಡುವ ಅಗತ್ಯವನ್ನು ಒತ್ತಿ ಹೇಳಿದ ಪ್ರಧಾನಮಂತ್ರಿ ಮೋದಿ ಅವರು, 80,000 ಕ್ಕೂ ಹೆಚ್ಚು ತೀರ್ಪುಗಳನ್ನು 18 ಭಾರತೀಯ ಭಾಷೆಗಳಿಗೆ ಭಾಷಾಂತರಿಸುವ ಸುಪ್ರೀಂ ಕೋರ್ಟ್ ನ ಉಪಕ್ರಮವನ್ನು ಶ್ಲಾಘಿಸಿದರು. ಈ ಪ್ರಯತ್ನವು ಹೈಕೋರ್ಟ್ ಗಳು ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿಯೂ ಮುಂದುವರಿಯಲಿದೆ ಎಂದು ಅವರು ಸಂಪೂರ್ಣ ವಿಶ್ವಾಸ ವ್ಯಕ್ತಪಡಿಸಿದರು.

### ಸೌಹಾರ್ದಯುತ ಒಪ್ಪಂದದ ಮೂಲಕ 800,000 ಕ್ಕೂ ಹೆಚ್ಚು ಪ್ರಕರಣಗಳ ಇತ್ಯರ್ಥ

- 861,000 ಕ್ಕೂ ಹೆಚ್ಚು ಪ್ರಕರಣಗಳನ್ನು ಮಧ್ಯಸ್ಥಿಕೆಯೊಂದಿಗೆ ಸೌಹಾರ್ದಯುತ ಒಪ್ಪಂದಗಳ ಮೂಲಕ ಪರಿಹರಿಸಲಾಗಿದೆ ಮತ್ತು 1.6 ಕೋಟಿ ನಾಗರಿಕರಿಗೆ ಉಚಿತ ಕಾನೂನು ನೆರವು ನೀಡಲಾಗಿದೆ.
- ಕಳೆದ ದಶಕದಲ್ಲಿ, ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ (NALSA) ತನ್ನ ಜಾಲವನ್ನು 37 ರಾಜ್ಯ ಪ್ರಾಧಿಕಾರಗಳು, 707 ಜಿಲ್ಲಾ ಪ್ರಾಧಿಕಾರಗಳು ಮತ್ತು 2,440 ಕಾನೂನು ಸಂಘಗಳಿಗೆ ವಿಸ್ತರಿಸಿದೆ.
- ನ್ಯಾಯ ಪ್ರವೇಶ ಯೋಜನೆ 2025 ಮತ್ತು ವೀರ ಪರಿವಾರ ಸಹಾಯ ಯೋಜನೆಯ ಮೂಲಕ ಮಾನವ-ವನ್ಯಜೀವಿ ಸಂಘರ್ಷದ ಸಂತ್ರಸ್ತರಿಗೆ ನ್ಯಾಯ ಒದಗಿಸುವ ಪ್ರಕ್ರಿಯೆಯನ್ನು ಸರಳೀಕರಿಸಲು ಮತ್ತು ಸುಗಮಗೊಳಿಸಲು NALSA ಶ್ರಮಿಸಿದೆ.
- ಸುಲಲಿತ ನ್ಯಾಯ ಲಭ್ಯತೆಗಾಗಿ ನಾವಿನ್ಯತೆ ಮತ್ತು ಡಿಜಿಟಲೀಕರಣವನ್ನು NALSA ಅಳವಡಿಸಿಕೊಂಡಿದೆ.
- ದೇಶಾದ್ಯಂತ ಶಾಶ್ವತ ಲೋಕ ಅದಾಲತ್ ಗಳ ಮೂಲಕ ಮಹಿಳೆಯರು, ಮಕ್ಕಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಂಬಂಧಿಸಿದ 13.11 ಲಕ್ಷಕ್ಕೂ ಹೆಚ್ಚು ಪ್ರಕರಣಗಳನ್ನು ಪರಿಹರಿಸಲಾಗಿದೆ ಮತ್ತು ಸಂತ್ರಸ್ತರಿಗೆ ₹2,354 ಕೋಟಿಗೂ ಹೆಚ್ಚಿನ ಮೊತ್ತದ ಪರಿಹಾರವನ್ನು ನೀಡಲಾಗಿದೆ.

**ಬಡ ವ್ಯಕ್ತಿಯೊಬ್ಬರು ತಮ್ಮ ಹಕ್ಕುಗಳ ಬಗ್ಗೆ ಅರಿತುಕೊಳ್ಳದ ಹೊರತು, ಕಾನೂನನ್ನು ಅರ್ಥಮಾಡಿಕೊಳ್ಳದ ಹೊರತು ಮತ್ತು ವ್ಯವಸ್ಥೆಯ ಸಂಕೀರ್ಣತೆಯ ಭಯದಿಂದ ಹೊರಬರದ ಹೊರತು ನ್ಯಾಯವನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ದುರ್ಬಲ ಗುಂಪುಗಳು, ಮಹಿಳೆಯರು ಮತ್ತು ವೃದ್ಧರಲ್ಲಿ ಕಾನೂನಿನ ಅರಿವು ಹೆಚ್ಚಿಸುವುದು ಆದ್ಯತೆಯಾಗಿದೆ. ನಮ್ಮ ಯುವಕರು, ವಿಶೇಷವಾಗಿ ಕಾನೂನು ವಿದ್ಯಾರ್ಥಿಗಳು, ಪರಿವರ್ತನೆ ತರುವಲ್ಲಿ ಪ್ರಮುಖ ಪಾತ್ರ ವಹಿಸಬಹುದಾಗಿದೆ.**

ನರೇಂದ್ರ ಮೋದಿ, **ಪ್ರಧಾನಮಂತ್ರಿ**



ಪುನರುಚ್ಚರಿಸಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ, ಸುಲಭವಾಗಿ ನ್ಯಾಯ ಸಿಗುವಂತಾಗಲು ಹಲವಾರು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ತಂತ್ರಜ್ಞಾನವು ಈಗ ಸೇರ್ಪಡೆ ಮತ್ತು ಸಬಲೀಕರಣದ ಒಂದು ಮಾಧ್ಯಮವಾಗಿ ಕಾರ್ಯನಿರ್ವಹಿಸುತ್ತಿದೆ. ನ್ಯಾಯ ವಿತರಣೆಯಲ್ಲಿ ತಂತ್ರಜ್ಞಾನ ಬಳಕೆಯ ಮೂಲಕ ನ್ಯಾಯಾಂಗ ಪ್ರಕ್ರಿಯೆಯನ್ನು ಹೇಗೆ ಆಧುನೀಕರಿಸಬಹುದು ಮತ್ತು ಮಾನವೀಯಗೊಳಿಸಬಹುದು ಎಂಬುದನ್ನು ಇ-ಕೋರ್ಟ್ಸ್ ಯೋಜನೆ ಪ್ರದರ್ಶಿಸಿದೆ.

ಇ-ಫೈಲಿಂಗ್ ನಿಂದ ವಿದ್ಯುನ್ಮಾನ ಸಮನ್ಸ್ ಜಾರಿಯವರೆಗೆ ಹಾಗೂ ವರ್ಚುವಲ್ ವಿಚಾರಣೆಗಳಿಂದ ವೀಡಿಯೊ ಕಾನ್ಫರೆನ್ಸಿಂಗ್ ವರೆಗೆ, ತಂತ್ರಜ್ಞಾನವು ಎಲ್ಲವನ್ನೂ ಸುಲಭಗೊಳಿಸಿದೆ. ಈ ಯೋಜನೆಯ ಮೂರನೇ ಹಂತದ ಬಜೆಟ್ ಅನ್ನು ₹7,000 ಕೋಟಿಗೆ ಹೆಚ್ಚಿಸಲಾಗಿದೆ. ●

*ಪ್ರಧಾನಮಂತ್ರಿಯವರ ಸಂಪೂರ್ಣ ಕಾರ್ಯಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.*

# ಪ್ರಗತಿಯ ಹಾದಿ...

## ವಂದೇ ಭಾರತ್ ನೊಂದಿಗೆ ವೇಗದ ಪ್ರಯಾಣ

*ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಮೂಲಸೌಕರ್ಯವು ಆರ್ಥಿಕ ಬೆಳವಣಿಗೆಯ ಪ್ರಮುಖ ವಾಹಕವಾಗಿದೆ. ಭಾರತವೂ ಈ ದಿಸೆಯಲ್ಲಿ ಕ್ಷಿಪ್ರ ಪ್ರಗತಿ ಸಾಧಿಸುತ್ತಿದೆ. ಭಾರತದ ಆಧುನಿಕ ರೈಲ್ವೆ ಮೂಲಸೌಕರ್ಯವನ್ನು ವಿಸ್ತರಿಸಲು, ನಾಲ್ಕು ಹೊಸ ವಂದೇ ಭಾರತ್ ಎಕ್ಸ್ ಪ್ರೆಸ್ ರೈಲುಗಳಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನವೆಂಬರ್ 8ರಂದು ವಾರಾಣಸಿಯಿಂದ ಹಸಿರು ನಿಶಾನೆ ತೋರಿದರು.*



ದೀರ್ಘ ಕಾಲದಿಂದಲೂ ರೈಲು ಸೇವೆ ಇಲ್ಲದ, ರೈಲು ಹಳಿಗಳಿಲ್ಲದ ಮತ್ತು ನಿಲ್ದಾಣವಿಲ್ಲದ ಒಂದು ಪ್ರದೇಶವನ್ನು ಕಲ್ಪಿಸಿಕೊಳ್ಳಿ. ಹಳಿಗಳನ್ನು ಹಾಕಿ ನಿಲ್ದಾಣವನ್ನು ನಿರ್ಮಿಸಿದ ತಕ್ಷಣ, ಪಟ್ಟಣದ ಅಭಿವೃದ್ಧಿ ತಾನಾಗಿಯೇ ಪ್ರಾರಂಭವಾಗಲಿದೆ. ಅದೇ ರೀತಿ, ಅನೇಕ ವರ್ಷಗಳಿಂದ ಡಾಂಬರು ರಸ್ತೆಯಿಲ್ಲದೆ ಇರುವ ಹಳ್ಳಿಯಲ್ಲಿ ಉತ್ತಮ ರಸ್ತೆ ನಿರ್ಮಾಣವಾದ ಕೂಡಲೇ, ರೈತರ ಉತ್ಪನ್ನಗಳು ಮಾರುಕಟ್ಟೆಯನ್ನು ತಲುಪಲಿವೆ. ಮೂಲಸೌಕರ್ಯವು ಕೇವಲ ದೊಡ್ಡ ಸೇತುವೆಗಳು ಮತ್ತು ಹೆದ್ದಾರಿಗಳ ನಿರ್ಮಾಣಕ್ಕೆ ಸೀಮಿತವಾಗಿಲ್ಲ; ಅಂತಹ ಸೌಲಭ್ಯಗಳ ಅಭಿವೃದ್ಧಿಯಾದಾಗ, ಅವು ಇಡೀ ಪ್ರದೇಶದಲ್ಲಿ ಅಭಿವೃದ್ಧಿಯನ್ನು ಪೋಷಿಸಲಿವೆ. ದೇಶದಲ್ಲಿ ಕಳೆದ 11 ವರ್ಷಗಳಲ್ಲಿ, ಅನೇಕ ಹೊಸ ವಿಮಾನ ನಿಲ್ದಾಣಗಳನ್ನು ನಿರ್ಮಿಸಲಾಗಿದೆ, ಜೊತೆಗೆ ಹಲವು ವಂದೇ ಭಾರತ್ ರೈಲು ಸೇವೆಗಳನ್ನು ಪ್ರಾರಂಭಿಸಲಾಗಿದ್ದು ಇದು ಅಭಿವೃದ್ಧಿಗೆ ಹೊಸ ಆವೇಗ ನೀಡಿದೆ. ಈ ಎಲ್ಲಾ ಪ್ರಯತ್ನಗಳು ಅಭಿವೃದ್ಧಿಯೊಂದಿಗೆ ಸಮ್ಮಿಳಿತವಾಗಿವೆ ಎಂದು ವಾರಾಣಸಿಯಿಂದ ನಾಲ್ಕು ವಂದೇ ಭಾರತ್ ಎಕ್ಸ್ ಪ್ರೆಸ್ ರೈಲುಗಳಿಗೆ ಹಸಿರು ನಿಶಾನೆ ತೋರುತ್ತಾ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪ್ರತಿಪಾದಿಸಿದ್ದಾರೆ. ಪ್ರಸ್ತುತ, ಭಾರತವು ಅಭಿವೃದ್ಧಿಯ ಈ ಪಥದಲ್ಲಿ ಅತ್ಯಂತ ವೇಗವಾಗಿ ಸಾಗುತ್ತಿದೆ. ನಾಲ್ಕು ಹೊಸ ವಂದೇ ಭಾರತ್ ರೈಲು ಸೇವೆಗಳ ಆರಂಭದೊಂದಿಗೆ, ದೇಶದಲ್ಲಿ 164 ಕ್ಕೂ ಹೆಚ್ಚು ಹೊಸ ವಂದೇ ಭಾರತ್ ರೈಲುಗಳು ಈಗ ಕಾರ್ಯನಿರ್ವಹಿಸುತ್ತಿವೆ. ಶತಮಾನಗಳಿಂದ, ಭಾರತದಲ್ಲಿ ತೀರ್ಥಯಾತ್ರೆಗಳನ್ನು ಅಂತಃಪ್ರಜ್ಞೆಯ ಮೂಲವೆಂದು ಪರಿಗಣಿಸಲಾಗಿದೆ. ಈ ಯಾತ್ರೆಗಳು ಆಧ್ಯಾತ್ಮಿಕ ಅನುಭೂತಿಯ ಮಾರ್ಗ ಮಾತ್ರವಲ್ಲ, ಭಾರತದ ಚೈತನ್ಯವನ್ನು ಸಂಪರ್ಕಿಸುವ ಪವಿತ್ರ ಸಂಪ್ರದಾಯವಾಗಿದೆ. ಪ್ರಯಾಗ್ ರಾಜ್, ಅಯೋಧ್ಯಾ, ಹರಿದ್ವಾರ, ಚಿತ್ರಕೂಟ, ಕುರುಕ್ಷೇತ್ರ, ಹೀಗೆ ಅಸಂಖ್ಯಾತ ಯಾತ್ರಾ ಸ್ಥಳಗಳು ಆಧ್ಯಾತ್ಮಿಕತೆಯ ಕೇಂದ್ರಗಳಾಗಿವೆ. ಇಂದು, ಈ ಪವಿತ್ರ ಸ್ಥಳಗಳನ್ನು ವಂದೇ ಭಾರತ್ ರೈಲ್ವೆ ಜಾಲ ಸಂಪರ್ಕಿಸುತ್ತಿದ್ದು, ಇದು ಭಾರತದ ಸಂಸ್ಕೃತಿ, ನಂಬಿಕೆ ಮತ್ತು ಅಭಿವೃದ್ಧಿ ಪಯಣವನ್ನು ಸಂಪರ್ಕಿಸುವ ಕಾರ್ಯವನ್ನು ಸಹ ಪೂರೈಸುತ್ತಿದೆ. ಭಾರತದ ಪಾರಂಪರಿಕ ನಗರಗಳನ್ನು ದೇಶದ ಅಭಿವೃದ್ಧಿಯ ಸಂಕೇತವನ್ನಾಗಿ ಮಾಡುವತ್ತ ಇದು ಪ್ರಮುಖ ಹೆಜ್ಜೆಯಾಗಿದೆ. ಈ ಯಾತ್ರೆಗಳು ಆರ್ಥಿಕ ದೃಷ್ಟಿಕೋನವನ್ನು ಸಹ ಹೊಂದಿವೆ ಎಂದು ಪ್ರಧಾನಮಂತ್ರಿ ಮೋದಿ ಅವರು ಹೇಳಿದ್ದಾರೆ.

ಉತ್ತರ ಪ್ರದೇಶದಲ್ಲಿ ಕಳೆದ 11 ವರ್ಷಗಳಲ್ಲಿನ ಅಭಿವೃದ್ಧಿ

## ಹಲವು ವೈಶಿಷ್ಟ್ಯಗಳ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು

- ಗಂಟೆಗೆ 160 ಕಿಮೀ ವೇಗ ತಲುಪಲು 140 ಸೆಕೆಂಡುಗಳು.
- ಆನಂದದಾಯಕ, ಆರಾಮದಾಯಕ ಮತ್ತು ಸುರಕ್ಷಿತ ಪ್ರಯಾಣ.
- ಪ್ರತಿ ಕೋಚ್ ನಲ್ಲಿ ಮಾಹಿತಿ ಮನರಂಜನಾ ವ್ಯವಸ್ಥೆ.
- ಉತ್ತಮ ವಾತಾಯನ ಮತ್ತು ಶಾಖ ವಿತರಣೆಗಾಗಿ ಹವಾನಿಯಂತ್ರಣ ನಾಳಗಳು.
- ಸ್ಪರ್ಶ-ಮುಕ್ತ ವೈಶಿಷ್ಟ್ಯಗಳಿರುವ ಜೈವಿಕ-ನಿರ್ವಾತ ಶೌಚಾಲಯಗಳು.
- ಎಲ್ಲಾ ಕೋಚ್ ಗಳಲ್ಲಿ ವರ್ಧಿತ ಅಗ್ನಿ ಸುರಕ್ಷತಾ ಕ್ರಮಗಳು.
- ಕವಚ್ (ರೈಲು ಡಿಕ್ಕಿ ತಪ್ಪಿಸುವ ವ್ಯವಸ್ಥೆ) ನೊಂದಿಗೆ ಸಜ್ಜುಗೊಂಡಿರುವ ರೈಲು.
- ಅಂಗವಿಕಲರಿಗೆ ವಿಶೇಷ ಶೌಚಾಲಯಗಳು ಮತ್ತು ಬ್ರೈಲ್ ನಲ್ಲಿ ಮಾಹಿತಿ.
- ಎಲ್ಲಾ ಬೋಗಿಗಳಲ್ಲಿ ತುರ್ತು ಬೆಳಕು, ತುರ್ತು ಕಿಟಕಿಗಳು ಮತ್ತು ಟಾಕ್ ಬ್ಯಾಂಕ್ (ವಿವಿಧ ಸಂವಹನ ದತ್ತಾಂಶ ಸೌಲಭ್ಯ) ಘಟಕಗಳು.

### ಪ್ರವಾಸೋದ್ಯಮ ಉತ್ತೇಜನಕ್ಕೆ ಪ್ರಯಾಣಿಕ-ಸ್ನೇಹಿ ಪ್ರಯಾಣ

- ಪ್ರಾದೇಶಿಕ ಸಂಪರ್ಕ ಉತ್ತೇಜನ
- ಪ್ರಯಾಣದ ಅವಧಿ ಕಡಿತ
- ಪ್ರಯಾಣಿಕರಿಗೆ ಆಧುನಿಕ, ಆರಾಮದಾಯಕ ಮತ್ತು ಪರಿಣಾಮಕಾರಿ ಪ್ರಯಾಣ
- ಪ್ರಾದೇಶಿಕ ಅಭಿವೃದ್ಧಿ, ಪ್ರವಾಸೋದ್ಯಮ ಮತ್ತು ಆರ್ಥಿಕ ಸಮೃದ್ಧಿಯ ಉತ್ತೇಜನ

> **"ಇಂದು, ವಂದೇ ಭಾರತ್, ನಮೋ ಭಾರತ್ ಮತ್ತು ಅಮೃತ ಭಾರತ್ ನಂತಹ ರೈಲುಗಳು ಮುಂದಿನ ಪೀಳಿಗೆಯ ಭಾರತೀಯ ರೈಲ್ವೆಗೆ ಅಡಿಪಾಯ ಹಾಕುತ್ತಿವೆ. ಇದು ಭಾರತೀಯ ರೈಲ್ವೆಯನ್ನು ಪರಿವರ್ತಿಸುವ ಪರಿಪೂರ್ಣ ಅಭಿಯಾನವಾಗಿದೆ. ಭಾರತೀಯರು, ಭಾರತೀಯರಿಂದ ಮತ್ತು ಭಾರತೀಯರಿಗಾಗಿ ನಿರ್ಮಿಸಿರುವ ವಂದೇ ಭಾರತ್ ರೈಲಿನ ಬಗ್ಗೆ ಪ್ರತಿಯೊಬ್ಬ ಭಾರತೀಯನಿಗೂ ಹೆಮ್ಮೆ ಇದೆ."**
>
> **ನರೇಂದ್ರ ಮೋದಿ, ಪ್ರಧಾನಮಂತ್ರಿ**

### ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಸೇವೆಯಿಂದ ಸುಲಭ ಮತ್ತು ವೇಗದ ಪ್ರಯಾಣ...

- ಬನಾರಸ್-ಖಜುರಾಹೊ ವಂದೇ ಭಾರತ್: ಈ ಮಾರ್ಗದಲ್ಲಿ ನೇರ ಸಂಪರ್ಕ ಕಲ್ಪಿಸಲಾಗಿದೆ. ಪ್ರಸ್ತುತ ಕಾರ್ಯಾಚರಣೆಯಲ್ಲಿರುವ ರೈಲುಗಳಿಗೆ ಹೋಲಿಸಿದರೆ ಸುಮಾರು 2 ಗಂಟೆ 40 ನಿಮಿಷ ಸಮಯ ಉಳಿತಾಯವಾಗಲಿದೆ.
- ಲಕ್ನೋ-ಸಹಾರನ್ಪುರ ವಂದೇ ಭಾರತ್: ಪ್ರಯಾಣದ ಸಮಯ ಸುಮಾರು 7 ಗಂಟೆ 45 ನಿಮಿಷಗಳು. ಇದರಿಂದ ಸುಮಾರು 1 ಗಂಟೆ ಪ್ರಯಾಣದ ಸಮಯ ಉಳಿತಾಯವಾಗಲಿದೆ.
- ಫಿರೋಜ್ಪುರ-ದೆಹಲಿ ವಂದೇ ಭಾರತ್: ಈ ಮಾರ್ಗದಲ್ಲಿನ ಅತಿ ವೇಗದ ರೈಲು. ಇದು ಕೇವಲ 6 ಗಂಟೆ 40 ನಿಮಿಷಗಳಲ್ಲಿ ಪ್ರಯಾಣ ಪೂರ್ಣಗೊಳಿಸಲಿದೆ.
- ಎರ್ನಾಕುಲಂ-ಬೆಂಗಳೂರು ವಂದೇ ಭಾರತ್: ಪ್ರಯಾಣದ ಅವಧಿ 8 ಗಂಟೆ 40 ನಿಮಿಷಗಳಾಗಿದ್ದು 2 ಗಂಟೆಗಳಿಗಿಂತ ಹೆಚ್ಚಿನ ಸಮಯ ಉಳಿತಾಯವಾಗಲಿದೆ.

## ಹೊಸ ತಾಣಗಳಿಗೆ 4 ಹೊಸ ವಂದೇ ಭಾರತ್ ರೈಲು ಸೇವೆ ಆರಂಭ




ಕಾರ್ಯಗಳು ತೀರ್ಥಯಾತ್ರೆಯ ವಿಶಿಷ್ಟಾನುಭೂತಿಯನ್ನು ವರ್ಧಿಸಿದೆ. ಕಳೆದ ವರ್ಷ ಭಗವಂತ ವಿಶ್ವನಾಥನ ದರ್ಶನಕ್ಕೆ 11 ಕೋಟಿ ಭಕ್ತರು ಕಾಶಿಗೆ ಭೇಟಿ ನೀಡಿದ್ದರು. ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣವಾದಾಗಿನಿಂದ 6 ಕೋಟಿಗೂ ಹೆಚ್ಚು ಜನರು ರಾಮ ಲಲ್ಲಾಗೆ ಪ್ರಾರ್ಥನೆ ಸಲ್ಲಿಸಿದ್ದಾರೆ. ಈ ಯಾತ್ರಾರ್ಥಿಗಳಿಂದ ಉತ್ತರಪ್ರದೇಶದ ಆರ್ಥಿಕತೆಗೆ ಸಾವಿರಾರು ಕೋಟಿ ರೂಪಾಯಿಗಳ ಲಾಭವಾಗಿದೆ. ಹೋಟೆಲ್ ಗಳು, ಉದ್ದಿಮೆಗಳು, ಸಾರಿಗೆ ಕಂಪನಿಗಳು, ಸ್ಥಳೀಯ ಕಲಾವಿದರು ಮತ್ತು ದೋಣಿ ನಾವಿಕರಿಗೆ ಯಾತ್ರಾರ್ಥಿಗಳು ಸ್ಥಿರ ಆದಾಯದ ಮೂಲವಾಗಿದ್ದಾರೆ. ಇದರ ಪರಿಣಾಮವಾಗಿ, ಬನಾರಸ್ ನಲ್ಲಿ ನೂರಾರು ಯುವಕರು ಸಾರಿಗೆಯಿಂದ ಹಿಡಿದು ಬನಾರಸ್ ಸೀರೆಗಳವರೆಗೆ ಎಲ್ಲ ಕ್ಷೇತ್ರಗಳಲ್ಲಿ ಹೊಸ ವ್ಯವಹಾರಗಳನ್ನು ಪ್ರಾರಂಭಿಸುತ್ತಿದ್ದಾರೆ. ಇವೆಲ್ಲವೂ ಕಾಶಿಯ ಜೊತೆಗೆ ಉತ್ತರ ಪ್ರದೇಶಕ್ಕೆ ಸಮೃದ್ಧಿಯ ಬಾಗಿಲನ್ನು ತೆರೆಯುತ್ತಿವೆ.

*ಪ್ರಧಾನಮಂತ್ರಿಯವರ ಸಂಪೂರ್ಣ ಕಾರ್ಯಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.*




# ದೇವಭೂಮಿ ಉತ್ತರಾಖಂಡ

## ಭಾರತದ ಆಧ್ಯಾತ್ಮಿಕ ಜೀವನದ ಹೃದಯ ಬಡಿತ

*ಉತ್ತರಾಖಂಡ ರಾಜ್ಯ ಸಂಸ್ಥಾಪನೆಯಾಗಿ 25 ವರ್ಷಗಳಾಗಿದ್ದು, ಈ ಅವಧಿಯಲ್ಲಿ ರಾಜ್ಯವು ಮೂಲಸೌಕರ್ಯ, ಶಿಕ್ಷಣ, ಪ್ರವಾಸೋದ್ಯಮ, ಕೃಷಿ, ಕೌಶಲ್ಯಾಭಿವೃದ್ಧಿ ಮತ್ತು ವ್ಯವಹಾರವನ್ನು ಒಳಗೊಂಡಂತೆ ತನ್ನ ಶ್ರೀಮಂತ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಪಸರಿಸುತ್ತಾ ತನ್ನ ಪರ್ವತಗಳ ಗಡಿ ಮೀರಿ ವಿಸ್ತರಣೆ ಕಂಡಿದೆ. ಅದಕ್ಕಾಗಿಯೇ, ಉತ್ತರಾಖಂಡದ ರಾಜ್ಯ ನಿರ್ಧರಿಸಿದಲ್ಲಿ, ಮುಂಬರುವ ವರ್ಷಗಳಲ್ಲಿ ಅದನ್ನು "ವಿಶ್ವದ ಆಧ್ಯಾತ್ಮಿಕ ರಾಜಧಾನಿ"ಯಾಗಿಸಬಹುದು ಎಂದು ರಜತ ಮಹೋತ್ಸವ ಸಮಾರಂಭದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪ್ರತಿಪಾದಿಸಿದ್ದಾರೆ...*

ಉತ್ತರಾಖಂಡದಲ್ಲಿ ಸುದೀರ್ಘ ಮತ್ತು ಪ್ರತ್ಯೇಕ ಸಮರ್ಪಿತ ಹೋರಾಟದ ನಂತರ 25 ವರ್ಷಗಳ ಹಿಂದೆ ನವೆಂಬರ್ 9 ರಂದು ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಕೇಂದ್ರ ಸರ್ಕಾರ ಅದರ ರಾಜ್ಯ ಸ್ಥಾನಮಾನದ ಬೇಡಿಕೆಯನ್ನು ಈಡೇರಿಸಿತು. ಪ್ರಸ್ತುತ ಉತ್ತರಾಖಂಡ ತಲುಪಿರುವ ಎತ್ತರವನ್ನು ಆ ರಾಜ್ಯ ರಚನೆಗಾಗಿ ಹೋರಾಡಿದವರು ನೋಡಿ ಸಂತಸಪಡುವರು. ರಾಜ್ಯದ ಸಾಮರ್ಥ್ಯವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಬದ್ಧತೆಯ ಬಗ್ಗೆ ತೃಪ್ತಿ ವ್ಯಕ್ತಪಡಿಸಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಉತ್ತರಾಖಂಡ ರಾಜ್ಯ ಸಂಸ್ಥಾಪನೆಯ ಬೆಳ್ಳಿ ಮಹೋತ್ಸವ ಕಾರ್ಯಕ್ರಮದಲ್ಲಿ (ನವೆಂಬರ್ 9 ರಂದು) ₹8,140 ಕೋಟಿಗೂ ಹೆಚ್ಚು ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿ, ಶಂಕುಸ್ಥಾಪನೆ ನೆರವೇರಿಸಿದರು.

ಶಿಕ್ಷಣ, ಆರೋಗ್ಯ, ಪ್ರವಾಸೋದ್ಯಮ ಮತ್ತು ಕ್ರೀಡೆಗಳಿಗೆ ಸಂಬಂಧಿಸಿದ ಹಲವು ಯೋಜನೆಗಳ ಉದ್ಘಾಟನೆ ಮತ್ತು ಶಿಲಾನ್ಯಾಸವನ್ನು ಸಹ ಪ್ರಧಾನಮಂತ್ರಿ ನೆರವೇರಿಸಿದರು. ಇದು ರಾಜ್ಯದ ಅಭಿವೃದ್ಧಿ ಪ್ರಯಾಣವನ್ನು ವೇಗಗೊಳಿಸಲಿದೆ. ಈ ಯೋಜನೆಗಳು ಹೊಸ ಉದ್ಯೋಗಾವಕಾಶಗಳನ್ನು ಸಹ ಸೃಜಿಸಲಿವೆ. ಡೆಹ್ರಾಡೂನ್ ಮತ್ತು ಹಲ್ದ್ವಾನಿಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸುವಲ್ಲಿ ಜಮರಾಣಿ ಮತ್ತು ಸಾಂಗ್ ಅಣೆಕಟ್ಟು ಯೋಜನೆಗಳು ನಿರ್ಣಾಯಕ ಪಾತ್ರ ವಹಿಸಲಿವೆ.

ರಾಜ್ಯದಲ್ಲಿ ಪ್ರಸ್ತುತ ₹2 ಲಕ್ಷ ಕೋಟಿಗೂ ಹೆಚ್ಚು ಮೌಲ್ಯದ ಯೋಜನೆಗಳು ಪ್ರಗತಿಯಲ್ಲಿವೆ ಎಂದು ಪ್ರಧಾನಮಂತ್ರಿ ಮೋದಿ ಹೇಳಿದರು. ಋಷಿಕೇಶ-ಕರ್ಣಪ್ರಯಾಗ ರೈಲು ಯೋಜನೆ ಪ್ರಗತಿಯಲ್ಲಿದೆ ಮತ್ತು ದೆಹಲಿ-ಡೆಹ್ರಾಡೂನ್ ಎಕ್ಸ್ ಪ್ರೆಸ್ ವೇ ಬಹುತೇಕ ಪೂರ್ಣಗೊಂಡಿದೆ. ಗೌರಿಕುಂಡ್-ಕೇದಾರನಾಥ ಮತ್ತು ಗೋವಿಂದಘಾಟ್-ಹೇಮಕುಂಡ್ ಸಾಹಿಬ್ ರೋಪ್ ವೇಗಳಿಗೆ ಅಡಿಪಾಯ ಹಾಕಲಾಗಿದೆ ಎಂದು ತಿಳಿಸಿದ ಅವರು, ಈ ಯೋಜನೆಗಳು ಉತ್ತರಾಖಂಡದಲ್ಲಿ ಅಭಿವೃದ್ಧಿಗೆ ವೇಗ ನೀಡಿವೆ ಎಂದು ಅಭಿಪ್ರಾಯಪಟ್ಟರು.

**ಕಳೆದ 25 ವರ್ಷಗಳಲ್ಲಿ ಅಭಿವೃದ್ಧಿಗೆ ವೇಗ...**

ರಾಜ್ಯ ಮತ್ತು ಅಲ್ಲಿನ ಜನರೊಂದಿಗಿನ ತಮ್ಮ ಆಳವಾದ ಭಾವನಾತ್ಮಕ ಬಾಂಧವ್ಯವನ್ನು ಹಂಚಿಕೊಳ್ಳುತ್ತಾ, ಈ ಪ್ರದೇಶಕ್ಕೆ ತಮ್ಮ ಆಧ್ಯಾತ್ಮಿಕ ಪಯಣವನ್ನು ಸ್ಮರಿಸಿದ ಪ್ರಧಾನಮಂತ್ರಿ ಮೋದಿ ಅವರು, ಪರ್ವತ ಪ್ರದೇಶಗಳಲ್ಲಿ ವಾಸಿಸುವ ತಮ್ಮ ಸಹೋದರ ಸಹೋದರಿಯರ ಹೋರಾಟಗಳು, ಕಠಿಣ ಪರಿಶ್ರಮ ಮತ್ತು ದೃಢಸಂಕಲ್ಪ ಸದಾ ತಮಗೆ ಸ್ಫೂರ್ತಿ ನೀಡಿವೆ ಎಂದು ಹೇಳಿದರು. 25 ವರ್ಷಗಳ ಹಿಂದೆ, ಉತ್ತರಾಖಂಡ ಹೊಸದಾಗಿ ರೂಪುಗೊಂಡಾಗ, ಅಗಾಧ ಸವಾಲುಗಳಿದ್ದವು ಎಂದು ಹೇಳಿದ ಪ್ರಧಾನಮಂತ್ರಿ ಮೋದಿ ಅವರು, ಆಗ ಸಂಪನ್ಮೂಲಗಳು ಸೀಮಿತವಾಗಿದ್ದವು, ರಾಜ್ಯ ಬಜೆಟ್ ಕಿರಿದಾಗಿತ್ತು, ಆದಾಯದ ಮೂಲಗಳು ವಿರಳವಾಗಿದ್ದವು ಮತ್ತು ಬಹುತೇಕ ಅಗತ್ಯಗಳನ್ನು ಕೇಂದ್ರ ನೆರವಿನ ಮೂಲಕ ಪೂರೈಸಲಾಗುತ್ತಿತ್ತು ಎಂದು ಸ್ಮರಿಸಿದರು. 25 ವರ್ಷಗಳ ಹಿಂದೆ, ಉತ್ತರಾಖಂಡದ ಬಜೆಟ್ ಕೇವಲ ₹4,000

## ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮನವಿ

- ಉತ್ತರಾಖಂಡದ ಪ್ರತಿ ವಿಧಾನಸಭಾ ಕ್ಷೇತ್ರವೂ ವಿದೇಶಿ ಪ್ರವಾಸಿಗರನ್ನು ಆಕರ್ಷಿಸಬಲ್ಲ ಯೋಗ ಕೇಂದ್ರಗಳು, ಆಯುರ್ವೇದ ಕೇಂದ್ರಗಳು ಮತ್ತು ಪ್ರಕೃತಿ ಚಿಕಿತ್ಸಾ ಸಂಸ್ಥೆಗಳಿರುವ ಸಂಪೂರ್ಣ ಪ್ಯಾಕೇಜ್ ಒಳಗೊಂಡಿರಬೇಕು.
- ಉತ್ತರಾಖಂಡದ ಪ್ರತಿಯೊಂದು ರೋಮಾಂಚಕ ಗ್ರಾಮದಲ್ಲಿ ಹೋಂ ಸ್ಟೇಗಳು, ಸ್ಥಳೀಯ ಪಾಕಪದ್ಧತಿ ಮತ್ತು ಸಂಸ್ಕೃತಿಯನ್ನು ಉತ್ತೇಜಿಸುತ್ತಾ, ಆ ಗ್ರಾಮಗಳನ್ನು ಕಿರು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಬೇಕು.
- ನಂದಾ ದೇವಿ, ಜೌಲ್ಜೀವಿ, ಬಾಗೇಶ್ವರದ ಉತ್ತರಾಯಣಿ, ದೇವಿಧುರ, ಶ್ರಾವಣಿ ಮತ್ತು ಬೆಣ್ಣೆ ಉತ್ಸವದಂತಹ ಸ್ಥಳೀಯ ಹಬ್ಬಗಳು ಮತ್ತು ಸಂಪ್ರದಾಯಗಳನ್ನು ವಿಶ್ವ ಭೂಪಟಕ್ಕೆ ತರಲು "ಒಂದು ಜಿಲ್ಲೆ ಒಂದು ಉತ್ಸವ"ದಂತಹ ಅಭಿಯಾನಗಳನ್ನು ಪ್ರಾರಂಭಿಸಬೇಕು.
- ಹಣ್ಣಿನ ಕೃಷಿಯ ಸಾಮರ್ಥ್ಯವನ್ನು ಪರಿಗಣಿಸಿ, ಉತ್ತರಾಖಂಡದ ಎಲ್ಲಾ ಗುಡ್ಡಗಾಡು ಜಿಲ್ಲೆಗಳನ್ನು ತೋಟಗಾರಿಕಾ ಕೇಂದ್ರಗಳನ್ನಾಗಿ ಅಭಿವೃದ್ಧಿಪಡಿಸಬೇಕು.
- "ಭಾರತದಲ್ಲೇ ವರಿಸಿ" (ವೆಡ್ ಇನ್ ಇಂಡಿಯಾ) ಉಪಕ್ರಮದನ್ವಯ ನೂತನ ವಧು ವರರು ತಮ್ಮ ವಿವಾಹಕ್ಕಾಗಿ ಭಾರತದಲ್ಲೇ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಲು ಉತ್ತರಾಖಂಡ ರಾಜ್ಯವು ಬೃಹತ್ ಪ್ರಮಾಣದಲ್ಲಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಬೇಕು ಮತ್ತು ಐದರಿಂದ ಏಳು ಪ್ರಮುಖ ತಾಣಗಳನ್ನು ಗುರುತಿಸಿ ಅಭಿವೃದ್ಧಿಪಡಿಸಬೇಕು.

## ಈ ಯೋಜನೆಗಳಿಂದ ರಾಜ್ಯದ ಅಭಿವೃದ್ಧಿಗೆ ವೇಗ...

ಕುಡಿಯುವ ನೀರು, ನೀರಾವರಿ, ತಾಂತ್ರಿಕ ಶಿಕ್ಷಣ, ಇಂಧನ, ನಗರಾಭಿವೃದ್ಧಿ, ಕ್ರೀಡೆ ಮತ್ತು ಕೌಶಲ್ಯ ಅಭಿವೃದ್ಧಿ ಸೇರಿದಂತೆ ವಿವಿಧ ವಲಯಗಳಲ್ಲಿ ₹7,210 ಕೋಟಿಗೂ ಹೆಚ್ಚು ಮೌಲ್ಯದ ಯೋಜನೆಗಳಿಗೆ ಪ್ರಧಾನಮಂತ್ರಿ ಮೋದಿ ಅವರು ಶಂಕುಸ್ಥಾಪನೆ ನೆರವೇರಿಸಿದರು ಮತ್ತು ₹930 ಕೋಟಿಗೂ ಹೆಚ್ಚು ಮೌಲ್ಯದ ಯೋಜನೆಗಳನ್ನು ಉದ್ಘಾಟಿಸಿದರು.

ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ

**28,000**

ಕ್ಕೂ ಹೆಚ್ಚು ರೈತರು ತಮ್ಮ ಬ್ಯಾಂಕ್ ಖಾತೆಗಳಲ್ಲಿ ನೇರವಾಗಿ ₹62 ಕೋಟಿ ನೆರವನ್ನು ಪಡೆದಿದ್ದಾರೆ.



## ಉದ್ಘಾಟನೆಗಳು

ಅಮೃತ್ ಯೋಜನೆಯಡಿಯಲ್ಲಿನ

**23** ಪ್ರದೇಶಗಳ ಪೈಕಿ ಡೆಹ್ರಾಡೂನ್ ನಲ್ಲಿ ನೀರು ಸರಬರಾಜು ವ್ಯಾಪ್ತಿ, ಪಿಥೋರ್ ಗಢ ಜಿಲ್ಲೆಯಲ್ಲಿ ವಿದ್ಯುತ್ ಉಪಕೇಂದ್ರ, ಸರ್ಕಾರಿ ಕಟ್ಟಡಗಳಲ್ಲಿ ಸೌರಶಕ್ತಿ ಸ್ಥಾವರಗಳು ಮತ್ತು ನೈನಿತಾಲ್ ನ ಹಲ್ ದ್ವಾನಿ ಕ್ರೀಡಾಂಗಣದಲ್ಲಿ ಆಸ್ಟ್ರೋ ಟರ್ಫ್ ಹಾಕಿ ಮೈದಾನ ಸೇರಿವೆ.

## ಶಂಕುಸ್ಥಾಪನೆ

ಸಾಂಗ್ ಅಣೆಕಟ್ಟು ಕುಡಿಯುವ ನೀರಿನ ಯೋಜನೆಯು ಡೆಹ್ರಾಡೂನ್ ಗೆ 150 MLD (ಪ್ರತಿದಿನ ದಶಲಕ್ಷ ಲೀಟರ್) ಕುಡಿಯುವ ನೀರನ್ನು ಒದಗಿಸುತ್ತದೆ ಮತ್ತು ನೈನಿತಾಲ್ ನಲ್ಲಿ ಜಮರಾಣಿ ಅಣೆಕಟ್ಟು ಬಹುಪಯೋಗಿ ಯೋಜನೆಯನ್ನು, ಚಂಪಾವತ್ ನಲ್ಲಿ ಮಹಿಳಾ ಕ್ರೀಡಾ ಕಾಲೇಜು ಮತ್ತು ನೈನಿತಾಲ್ ನಲ್ಲಿ ಅತ್ಯಾಧುನಿಕ ಡೈರಿ ಘಟಕವನ್ನು ನಿರ್ಮಿಸಲಾಗುವುದು.

ಕೋಟಿಯಷ್ಟಿತ್ತು, ಅದು ಈಗ ₹1 ಲಕ್ಷ ಕೋಟಿ ದಾಟಿದೆ ಎಂದು ಹೇಳಿದ ಪ್ರಧಾನಮಂತ್ರಿ ಅವರು, ಈ ಅವಧಿಯಲ್ಲಿ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ನಾಲ್ಕು ಪಟ್ಟು ಹೆಚ್ಚಾಗಿದೆ ಮತ್ತು ರಸ್ತೆಗಳ ಉದ್ದ ದ್ವಿಗುಣಗೊಂಡಿದೆ. ಈ ಹಿಂದೆ ಆರು ತಿಂಗಳಲ್ಲಿ ಕೇವಲ 4,000 ಜನರು ವಿಮಾನದಲ್ಲಿ ಪ್ರಯಾಣಿಸುತ್ತಿದ್ದು, ಈಗ ಒಂದೇ ದಿನದಲ್ಲಿ 4,000 ಕ್ಕೂ ಹೆಚ್ಚು ಪ್ರಯಾಣಿಕರು ವಿಮಾನ ಪ್ರಯಾಣ ಕೈಗೊಳ್ಳುತ್ತಿದ್ದಾರೆ ಎಂದು ಅಂಕಿಅಂಶ ನೀಡಿದರು.

ಮೂಲಸೌಕರ್ಯ, ಶಿಕ್ಷಣ, ಕೈಗಾರಿಕೆ, ಪ್ರವಾಸೋದ್ಯಮ, ಆರೋಗ್ಯ, ಇಂಧನ ಮತ್ತು ಗ್ರಾಮೀಣಾಭಿವೃದ್ಧಿಯಂತಹ ಕ್ಷೇತ್ರಗಳಲ್ಲಿ ರಾಜ್ಯ ಹಲವು ಪ್ರೇರಣಾದಾಯಕ ಯಶೋಗಾಥೆಗಳನ್ನು ಹೊಂದಿದೆ. ಕಳೆದ 25 ವರ್ಷಗಳಲ್ಲಿ, ಉತ್ತರಾಖಂಡದಲ್ಲಿನ ಎಂಜಿನಿಯರಿಂಗ್ ಕಾಲೇಜುಗಳ ಸಂಖ್ಯೆ ಹತ್ತು ಪಟ್ಟು ಹೆಚ್ಚಾಗಿದೆ. ಈ ಹಿಂದೆ, ರಾಜ್ಯದಲ್ಲಿ ಒಂದೇ ಒಂದು ವೈದ್ಯಕೀಯ ಕಾಲೇಜಿದ್ದು, ಈಗ 10 ವೈದ್ಯಕೀಯ ಕಾಲೇಜುಗಳಿವೆ. ಲಸಿಕೆ ಪಡೆದವರ ಸಂಖ್ಯೆ ಶೇಕಡ 25 ಕ್ಕಿಂತ ಕಡಿಮೆಯಿತ್ತು, ಆದರೆ ಈಗ ಉತ್ತರಾಖಂಡದ ಬಹುತೇಕ ಎಲ್ಲ ಹಳ್ಳಿಗಳೂ ಲಸಿಕಾ ವ್ಯಾಪ್ತಿಯಡಿ ಸೇರಿವೆ.

*ಪ್ರಧಾನಮಂತ್ರಿಯವರ ಸಂಪೂರ್ಣ ಕಾರ್ಯಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.*



# ಪರಮಾಣು ವಿದ್ಯುತ್ ಸ್ಥಾವರಗಳು ಎಲ್ಲಾ ರೀತಿಯ ವಿಪತ್ತುಗಳಿಂದ ಸುರಕ್ಷಿತ

*ಅಣು ಮತ್ತು ಪರಮಾಣು ಸ್ಥಾವರಗಳ ಸುರಕ್ಷತೆಯೇ ಇಂದಿನ ಪ್ರಮುಖ ಕಾಳಜಿಗಳಲ್ಲಿ ಒಂದಾಗಿದೆ. ಹಾಗಾಗಿ, ಭಾರತದಲ್ಲಿರುವ ಈ ಸ್ಥಾವರಗಳು ಮತ್ತು ಅವುಗಳ ಸುತ್ತಮುತ್ತಲ ಪ್ರದೇಶಗಳನ್ನು ರಕ್ಷಿಸಲಾಗಿದೆ ಮತ್ತು ಸುರಕ್ಷಿತಗೊಳಿಸಲಾಗಿದೆ, ಇದು ಅತ್ಯಂತ ಹೆಚ್ಚಿನ ಮಾನದಂಡ ಮತ್ತು ಗುಣಮಟ್ಟವನ್ನು ಅನುಸರಿಸುತ್ತದೆ. ರಿಕ್ಟರ್ ಮಾಪಕದಲ್ಲಿ 8.6 ರಿಂದ 9.0ರ ವರೆಗಿನ ಹೆಚ್ಚಿನ ತೀವ್ರತೆಯ ಭೂಕಂಪ ಸಂಭವಿಸಿದರೂ ಸಹ ದೇಶದ ಪರಮಾಣು ಸ್ಥಾವರಗಳಿಗೆ ಹಾನಿಯಾಗುವುದಿಲ್ಲ. ಶಾಂತಿಯುತ ಬಳಕೆಗಾಗಿ ಪರಮಾಣು ಶಕ್ತಿಯನ್ನು ಬಳಸಿಕೊಳ್ಳುವಾಗ, ಅದರ ಸುತ್ತಮುತ್ತಲ ಜನರ ಸುರಕ್ಷತೆ ಮತ್ತು ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ವಿಶೇಷ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.*

ಭಾರತದ ಪರಮಾಣು ಇಂಧನ ಉತ್ಪಾದನಾ ಸಾಮರ್ಥ್ಯವು ಪ್ರಸ್ತುತ ಅಸ್ತಿತ್ವದಲ್ಲಿರುವ 24 ರಿಯಾಕ್ಟರ್‌ಗಳಿಂದ 8,780 ಮೆಗಾವ್ಯಾಟ್ ಆಗಿದ್ದು, 13,600 ಮೆಗಾವ್ಯಾಟ್ ಉತ್ಪಾದನಾ ಸಾಮರ್ಥ್ಯ ಸಾಧಿಸಲು ನಿರಂತರ ಪ್ರಯತ್ನಗಳು ನಡೆಯುತ್ತಿವೆ. ದೇಶದಲ್ಲಿರುವ ಪರಮಾಣು ವಿದ್ಯುತ್ ಸ್ಥಾವರಗಳ ಪೈಕಿ, ರಷ್ಯಾದ ಸಹಕಾರದೊಂದಿಗೆ 2,000 ಮೆಗಾವ್ಯಾಟ್ ಮತ್ತು ಅಮೆರಿಕ ಸಹಕಾರದಲ್ಲಿ 320 ಮೆಗಾವ್ಯಾಟ್ ಸಾಮರ್ಥ್ಯದ ಸ್ಥಾವರಗಳನ್ನು ಸ್ಥಾಪಿಸಲಾಗಿದೆ. ದೇಶದ ಒಟ್ಟು ವಿದ್ಯುತ್ ಉತ್ಪಾದನೆಯಲ್ಲಿ ಪರಮಾಣು ಇಂಧನದ ಪ್ರಮಾಣ 3% ಇದೆ. ಕಟ್ಟುನಿಟ್ಟಾದ ಸುರಕ್ಷತೆ ಮತ್ತು ಭದ್ರತಾ ಮಾನದಂಡಗಳನ್ನು ನಿಯಮಿತವಾಗಿ ಮೌಲ್ಯಮಾಪನ ಮಾಡುತ್ತಾ ಮತ್ತು ನಿರ್ವಹಿಸುತ್ತಾ ದೇಶದಲ್ಲಿ ಪರಮಾಣು ಇಂಧನ ಉತ್ಪಾದನೆಯನ್ನು ಹೆಚ್ಚಿಸಲು ಭಾರತ ಸರ್ಕಾರವು ಪರಮಾಣು ಶಕ್ತಿ ಮಿಷನ್ ಅನ್ನು ಅನುಸರಿಸುತ್ತಿದೆ. ಇತ್ತೀಚೆಗೆ ಪರಮಾಣು ಇಂಧನ ಇಲಾಖೆಯ ರಾಜ್ಯ ಸಚಿವರು ಸಂಸತ್ತಿನಲ್ಲಿ ನೀಡಿದ ಉತ್ತರದಲ್ಲಿ, ಜಗತ್ತಿನಲ್ಲಿ ಪರಮಾಣು ಸುರಕ್ಷತೆಗೆ ಸಂಬಂಧಿಸಿದ ಪ್ರಮುಖ ಘಟನೆಗಳ ನಂತರ, ಭಾರತದಲ್ಲಿ ಸ್ಥಾವರಗಳ ಸುರಕ್ಷತೆಯ ಮರುಮೌಲ್ಯಮಾಪನವನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು.

2011ರಲ್ಲಿ ಜಪಾನಿನ ಫುಕುಶಿಮಾ ಡೈಚಿ ಪರಮಾಣು ಸ್ಥಾವರ ಅಪಘಾತ ಸೇರಿದಂತೆ ರಷ್ಯಾ ಮತ್ತು ಜಪಾನ್‌ನಲ್ಲಿ ಸಂಭವಿಸಿದ ವಿನಾಶಕಾರಿ ಭೂಕಂಪಗಳ ನಂತರ, ಭಾರತದ

**2024-25ನೇ ಹಣಕಾಸು ವರ್ಷದಲ್ಲಿ ದೇಶದ ಪರಮಾಣು ವಿದ್ಯುತ್ ಸ್ಥಾವರಗಳು ಸರಿಸುಮಾರು 56,581 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದಿಸಿವೆ.**

ಪರಮಾಣು ಶಕ್ತಿ ನಿಯಂತ್ರಣ ಮಂಡಳಿಯು ಭಾರತದ ಪರಮಾಣು ವಿದ್ಯುತ್ ಸ್ಥಾವರಗಳ ಸಮಗ್ರ ಮೌಲ್ಯಮಾಪನ ಕೈಗೊಂಡಿದ್ದು ಭೂಕಂಪಗಳು, ಪ್ರವಾಹಗಳು ಮತ್ತು ಇತರೆ ಪ್ರಮುಖ ನೈಸರ್ಗಿಕ ವಿಕೋಪಗಳನ್ನು ತಡೆದುಕೊಳ್ಳುವ ಸಾಮರ್ಥ್ಯ ಮತ್ತು ಸಿದ್ಧತೆಯನ್ನು ನಿರ್ಣಯಿಸಿದೆ. ಭಾರತದ ಪರಮಾಣು ವಿದ್ಯುತ್ ಸ್ಥಾವರಗಳಲ್ಲಿ ಇರುವ ಸುರಕ್ಷತಾ ವ್ಯವಸ್ಥೆಗಳು ರಿಕ್ಟರ್ ಮಾಪಕದಲ್ಲಿ ಅಳೆಯಬಹುದಾದ 9.0ರ ವರೆಗಿನ ತೀವ್ರತೆಯ ಭೂಕಂಪನ ಸಂದರ್ಭದಲ್ಲೂ ಸಹ ಪರಿಣಾಮ ಬೀರದಂತೆ ಉಳಿಯುವಷ್ಟು ಬಲಿಷ್ಠವಾಗಿವೆ ಎಂದು ಮೌಲ್ಯಮಾಪನದಲ್ಲಿ ತೀರ್ಮಾನಿಸಲಾಗಿದೆ. ಆದಾಗ್ಯೂ, ಮಾರ್ಗಸೂಚಿಗಳಿಗೆ ಅನುಗುಣವಾಗಿ ಸುರಕ್ಷತಾ ಮೌಲ್ಯಮಾಪನಗಳನ್ನು ನಿಯಮಿತವಾಗಿ ನಡೆಸಲಾಗುತ್ತಿದೆ. ಕರಾವಳಿ ಪ್ರದೇಶಗಳಲ್ಲಿರುವ ಪ್ರತಿಯೊಂದು ಪರಮಾಣು ವಿದ್ಯುತ್ ಸ್ಥಾವರವನ್ನು ಭೂಕಂಪಗಳು, ಸುನಾಮಿಗಳು, ಚಂಡಮಾರುತಗಳು ಮತ್ತು ಪ್ರವಾಹಗಳನ್ನು ತಡೆದುಕೊಳ್ಳಲು ಅಗತ್ಯವಾದ ಪ್ರಮಾಣಿತ ತಾಂತ್ರಿಕ ನಿಯತಾಂಕಗಳೊಂದಿಗೆ ವಿನ್ಯಾಸಗೊಳಿಸಲಾಗಿದೆ

## ಪರಮಾಣು ತುರ್ತು ಪರಿಸ್ಥಿತಿ ನಿರ್ವಹಣೆಗಾಗಿ ಸದೃಢವಾದ ಮಾರ್ಗಸೂಚಿ

ಭಾರತದಲ್ಲಿ ಪರಮಾಣು ವಿದ್ಯುತ್ ಸ್ಥಾವರಗಳ(ಎನ್‌ಪಿಪಿಗಳು) ವಿನ್ಯಾಸವು ಸಮಗ್ರ ಸುರಕ್ಷತಾ ಪರಿಕಲ್ಪನೆಗಳು, ವೈಶಿಷ್ಟ್ಯಗಳು ಮತ್ತು ವ್ಯವಸ್ಥೆಗಳನ್ನು ಸಂಯೋಜಿಸಿದೆ. ಜತೆಗೆ, ಸ್ಥಾಪಿತ ಕಾರ್ಯಾಚರಣೆ ಕಾರ್ಯವಿಧಾನಗಳೊಂದಿಗೆ ಕಟ್ಟುನಿಟ್ಟಾದ ಅನುಸರಣೆಯು ಗಂಭೀರ ಅಪಘಾತಗಳ ಸಾಧ್ಯತೆಯನ್ನು ಬಹಳವಾಗಿ ಕಡಿಮೆ ಮಾಡುತ್ತದೆ. ಪರಮಾಣು ಸ್ಥಾವರಗಳ ತುರ್ತು ಪರಿಸ್ಥಿತಿಗಳನ್ನು ನಿರ್ವಹಿಸಲು ಸದೃಢವಾದ ಅಥವಾ ಉತ್ಕೃಷ್ಟ ಮಾರ್ಗಸೂಚಿಗಳು ಜಾರಿಯಲ್ಲಿವೆ. ಪರಮಾಣು ವಿದ್ಯುತ್ ಸ್ಥಾವರಗಳ ಬಳಿ ವಾಸಿಸುವ ಸಮುದಾಯಗಳ ಸುರಕ್ಷತೆ ಖಚಿತಪಡಿಸಲು ಸಮಗ್ರ ಕ್ರಮಗಳನ್ನು ಸ್ಥಾಪಿಸಲಾಗಿದೆ, ಇವುಗಳನ್ನು ಈ ಕೆಳಗಿನವುಗಳನ್ನು ಒಳಗೊಂಡಿರುವ ಉತ್ತಮವಾಗಿ ನಿರ್ವಹಿಸಲಾದ ತುರ್ತು ಪ್ರತಿಕ್ರಿಯೆ ಅಥವಾ ಸ್ಪಂದನೆ ವ್ಯವಸ್ಥೆಗಳಿಂದ ಬೆಂಬಲಿತವಾಗಿವೆ:

- ಪರಮಾಣು ವಿದ್ಯುತ್ ಸ್ಥಾವರಕ್ಕೆ ಸ್ಥಳ ಆಯ್ಕೆ, ನಿರ್ಮಾಣ ಮತ್ತು ಕಾರ್ಯಾಚರಣೆಯನ್ನು ಪರಮಾಣು ಶಕ್ತಿ ನಿಯಂತ್ರಣ ಮಂಡಳಿಯು ನಿಗದಿಪಡಿಸಿದ ಕಟ್ಟುನಿಟ್ಟಾದ ನಿಯಂತ್ರಕ ಮತ್ತು ಸುರಕ್ಷತಾ ಮಾನದಂಡಗಳಿಗೆ ಅನುಗುಣವಾಗಿ ನಡೆಸಲಾಗುತ್ತದೆ.
- ತುರ್ತು ಪರಿಸ್ಥಿತಿ ಸಂದರ್ಭಗಳಲ್ಲಿ ಸಾರ್ವಜನಿಕ ಪ್ರದೇಶಗಳ ಮೇಲೆ ವಿಕಿರಣಗಳ ಹೊರಸೂಸುವಿಕೆಯಿಂದ ಉಂಟಾಗುವ ಸಂಭಾವ್ಯ ಪರಿಣಾಮವನ್ನು ಕಡಿಮೆ ಮಾಡಲು, ಪರಮಾಣು ವಿದ್ಯುತ್ ಸ್ಥಾವರದ ಸುತ್ತಲೂ ಒಂದು ನಿಯಂತ್ರಣ(ಕಂಟೈನ್‌ಮೆಂಟ್) ವಲಯ ಗುರುತಿಸಲಾಗಿದೆ. ಇದು ತಕ್ಷಣದ ಮುನ್ನೆಚ್ಚರಿಕೆ ಮತ್ತು ತ್ವರಿತ ರಕ್ಷಣಾತ್ಮಕ ಕ್ರಮಗಳನ್ನು ಖಚಿತಪಡಿಸುತ್ತದೆ.
- ಪರಮಾಣು ವಿದ್ಯುತ್ ಸ್ಥಾವರಗಳು ಸ್ಥಾಪನೆಯಾಗುವ ಜಿಲ್ಲೆಗಳು ಅಥವಾ ರಾಜ್ಯಗಳು ಜಿಲ್ಲಾ ಮತ್ತು ರಾಜ್ಯ ಮಟ್ಟದ ವಿಪತ್ತು ನಿರ್ವಹಣಾ ಯೋಜನೆಗಳನ್ನು ಹೊಂದಿವೆ, ಇವುಗಳನ್ನು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಮನ್ವಯದಿಂದ ಅಭಿವೃದ್ಧಿಪಡಿಸಲಾಗಿದೆ.
- ಪ್ರತಿಯೊಂದು ಪರಮಾಣು ಸ್ಥಾವರ ಸೌಲಭ್ಯವು 1.5 ಕಿಲೋಮೀಟರ್ ನಿಷೇಧಿತ ವಲಯ, 5 ಕಿಲೋಮೀಟರ್ ನಿಷ್ಕ್ರಿಯಗೊಳಿಸುವ ವಲಯ ಮತ್ತು 16 ಕಿಲೋಮೀಟರ್ ತುರ್ತು ಯೋಜನಾ ವಲಯವನ್ನು ಹೊಂದಿದೆ.



**2047ರ ವೇಳೆಗೆ ದೇಶದ ಪರಮಾಣು ವಿದ್ಯುತ್ ಉತ್ಪಾದನೆ ಸಾಮರ್ಥ್ಯವನ್ನು 10 ಪಟ್ಟು ಹೆಚ್ಚಿಸುವ ಸಂಕಲ್ಪದೊಂದಿಗೆ ನಾವು ಮುಂದುವರಿಯುತ್ತಿದ್ದೇವೆ. 2030ರ ಗುರಿಗಿಂತ 5 ವರ್ಷ ಮುಂಚಿತವಾಗಿ, ಅಂದರೆ 2025ರಲ್ಲಿ ನಾವು 50% ಶುದ್ಧ ಇಂಧನ ಉತ್ಪಾದನೆ ಗುರಿ ಸಾಧಿಸಿದ್ದೇವೆ.**

**- ನರೇಂದ್ರ ಮೋದಿ, ಪ್ರಧಾನ ಮಂತ್ರಿ**

ಎಂದು ದೃಢಪಡಿಸಲಾಗಿದೆ. ಇದಲ್ಲದೆ, ಅಂತಹ ಸಂದರ್ಭಗಳಿಗೆ ಪ್ರತಿಕ್ರಿಯಿಸಲು ಅಥವಾ ಸ್ಪಂದಿಸಲು ಸಿಬ್ಬಂದಿಗೆ ಸೂಕ್ತ ತರಬೇತಿ ನೀಡಲಾಗುತ್ತಿದೆ. ಕಳೆದ 2 ವರ್ಷಗಳಲ್ಲಿ ಪರಮಾಣು ಶಕ್ತಿ ನಿಯಂತ್ರಣ ಮಂಡಳಿಯು ಕಾರ್ಯಾಚರಣೆಯಲ್ಲಿರುವ ಸ್ಥಾವರಗಳಲ್ಲಿ 86 ತಪಾಸಣೆಗಳನ್ನು ನಡೆಸಿದೆ. ಈ ತಪಾಸಣೆಗಳಲ್ಲಿ ವಿಕಿರಣಗಳ ತ್ಯಾಜ್ಯ ನಿರ್ವಹಣೆ ಅಥವಾ ತುರ್ತು ಸಿದ್ಧತೆ ಯೋಜನೆಗಳಲ್ಲಿ ಯಾವುದೇ ನ್ಯೂನತೆಗಳು ಕಂಡುಬಂದಿಲ್ಲ.

### ಪರಮಾಣು ವಿದ್ಯುತ್ ಉತ್ಪಾದನೆಯಲ್ಲಿ ಖಾಸಗಿ ವಲಯದ ಪಾಲುದಾರಿಕೆ

ಪರಮಾಣು ಶಕ್ತಿ ಮಿಷನ್ 2047ರ ವೇಳೆಗೆ 100 ಗಿಗಾವ್ಯಾಟ್ ಪರಮಾಣು ಇಂಧನ ಉತ್ಪಾದಿಸುವ ಗುರಿ ಹೊಂದಿದ್ದು, ಖಾಸಗಿ ವಲಯದ ಭಾಗವಹಿಸುವಿಕೆಗೆ ಅನುಮತಿ ನೀಡಲಾಗಿದೆ. ಅಲ್ಲದೆ, ಪರಮಾಣು ವಿದ್ಯುತ್ ಸ್ಥಾವರ ನಿರ್ಮಾಣ, ಮಾಲೀಕತ್ವ, ಕಾರ್ಯಾಚರಣೆ, ಪರಮಾಣು ಸುರಕ್ಷತೆ, ಭದ್ರತೆ ಮತ್ತು ತ್ಯಾಜ್ಯ ನಿರ್ವಹಣೆಯ ಅಂಶಗಳನ್ನು ಪರಿಗಣಿಸಲು ಪರಮಾಣು ಶಕ್ತಿ ಇಲಾಖೆಯು ಒಂದು ಕಾರ್ಯನಿರತ ಗುಂಪು ರಚಿಸಿದೆ. ಸರ್ಕಾರದ ಅಸ್ತಿತ್ವದಲ್ಲಿರುವ ವಿದೇಶಿ ನೇರ ಹೂಡಿಕೆ(ಎಫ್‌ಡಿಐ) ನೀತಿಗೆ ಅನುಗುಣವಾಗಿ ಪರಮಾಣು ಶಕ್ತಿ ವಲಯದಲ್ಲಿ ವಿದೇಶಿ ಪಾಲುದಾರರನ್ನು ಉಳಿಸಿಕೊಳ್ಳಲು ಅನುವು ಮಾಡಲಾಗಿದೆ.

### ಇಂಗಾಲ ಹೊರಸೂಸುವಿಕೆಯನ್ನು ನಿವ್ವಳ ಶೂನ್ಯಕ್ಕೆ ತರಲು ಪರಮಾಣು ವಿದ್ಯುತ್ ಸ್ಥಾವರಗಳು ಸಹಾಯಕ

ಕಳೆದ 5 ವರ್ಷಗಳಲ್ಲಿ 2,100 ಮೆಗಾವ್ಯಾಟ್ ಪರಮಾಣು ಇಂಧನ ಸಾಮರ್ಥ್ಯವನ್ನು ಗ್ರಿಡ್‌ಗೆ ಸಂಪರ್ಕಿಸಲಾಗಿದೆ. ಈ ಅವಧಿಯಲ್ಲಿ ಪರಮಾಣು ವಿದ್ಯುತ್ ಸ್ಥಾವರಗಳಿಂದ ಸುಮಾರು 241 ಶತಕೋಟಿ ಯೂನಿಟ್ ಶುದ್ಧ ವಿದ್ಯುತ್ ಉತ್ಪಾದಿಸಲಾಗಿದೆ. ಇದು 20.7 ಕೋಟಿ ಟನ್‌ಗಳಿಗಿಂತ ಹೆಚ್ಚಿನ ಇಂಗಾಲದ ಡೈಆಕ್ಸೈಡ್($CO2$)ಗೆ ಸಮವಾದ ಹೊರಸೂಸುವಿಕೆಯನ್ನು ಪರಿಸರಕ್ಕೆ ಕಡಿಮೆ ಮಾಡಿದೆ. ದೀರ್ಘಾವಧಿಯಲ್ಲಿ, ಪರಮಾಣು ಶಕ್ತಿಯು ಶುದ್ಧ ವಿದ್ಯುತ್ ಲಭ್ಯತೆಯನ್ನು ಹೆಚ್ಚಿಸುತ್ತದೆ, ಇದು ದೇಶದ ಇಂಧನ ಸುರಕ್ಷತೆಯನ್ನು ಖಚಿತಪಡಿಸುವುದಲ್ಲದೆ, 2070ರ ವೇಳೆಗೆ ಇಂಗಾಲ ಹೊರಸೂಸುವಿಕೆಯ ನಿವ್ವಳ ಶೂನ್ಯ ಗುರಿ ಸಾಧಿಸಲು ಸಹಾಯ ಮಾಡುತ್ತದೆ.

**ಐಸಿಸಿ ಮಹಿಳಾ ವಿಶ್ವಕಪ್ ಚಾಂಪಿಯನ್‌ಗಳ ಜತೆ ಪ್ರಧಾನ ಮಂತ್ರಿ ಮೋದಿ ಸಂವಾದ**

# ನವ ಭಾರತದ ಕ್ರೀಡಾ ಚೈತನ್ಯದ ಸಂಕೇತ

*ಅಂತಾರಾಷ್ಟ್ರೀಯ ವೇದಿಕೆಯಿಂದ ಹಿಡಿದು ಕ್ರೀಡಾ ಕ್ಷೇತ್ರದವರೆಗೆ, ಭಾರತದ ಧ್ವಜ ಇಂದು ಎಲ್ಲೆಡೆ ಎತ್ತರದಲ್ಲಿ ಹಾರುತ್ತಿದೆ. ಈ ವೈಭವಕ್ಕೆ ಮತ್ತೊಂದು ಸುವರ್ಣ ಅಧ್ಯಾಯ ಸೇರಿಸಿರುವ ರಾಷ್ಟ್ರದ ದಿಟ್ಟ ಹೆಣ್ಣು ಮಕ್ಕಳು, 2025ರ ಐಸಿಸಿ ಮಹಿಳಾ ವಿಶ್ವಕಪ್ ಗೆಲ್ಲುವ ಮೂಲಕ ಭಾರತದ ಹೆಮ್ಮೆಯನ್ನು ಹೆಚ್ಚಿಸಿದರು. ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ವಿಶ್ವಕಪ್ ವಿಜೇತ ಮಹಿಳಾ ಕ್ರಿಕೆಟಿಗರನ್ನು ಭೇಟಿಯಾಗಿ ಅವರ ಉತ್ಸಾಹ, ಕಠಿಣ ಪರಿಶ್ರಮ ಮತ್ತು ಧೈರ್ಯವನ್ನು ಶ್ಲಾಘಿಸಿದರು...*

ಭಾರತದ ಆಟಗಾರ್ತಿಯರು ಮೈದಾನದಲ್ಲಿ ಆಡುವಾಗ, ಇಡೀ ರಾಷ್ಟ್ರವು ಅವರ ಹಿಂದೆ ಸದೃಢವಾಗಿ ನಿಂತಿತ್ತು. ಭಾರತದ ಉತ್ಸಾಹದ ಘರ್ಜನೆ ಕ್ರೀಡಾಂಗಣದಲ್ಲಿ ಪ್ರತಿಧ್ವನಿಸುತ್ತಿತ್ತು, ಪ್ರತಿಯೊಂದು ಗೆಲುವು ಸಹ ಪ್ರತಿಯೊಬ್ಬ ನಾಗರಿಕನ ಹೆಮ್ಮೆಯನ್ನು ಹೆಚ್ಚಿಸುತ್ತದೆ. ಅದಕ್ಕಾಗಿಯೇ, 2014ರಲ್ಲಿ ದೇಶದ ಅಧಿಕಾರ ವಹಿಸಿಕೊಂಡಾಗಿನಿಂದ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಕ್ರೀಡಾಪಟುಗಳಿಗೆ ಅಗತ್ಯವಿರುವ ಎಲ್ಲಾ ಸೌಲಭ್ಯಗಳು ಮತ್ತು ನಿರಂತರ ಪ್ರೇರಣೆ ಒದಗಿಸಲು ನಿರಂತರವಾಗಿ ಕೆಲಸ ಮಾಡುತ್ತಿದ್ದಾರೆ. ಅವರ ದೃಷ್ಟಿಕೋನದಿಂದ ಪ್ರೇರಿತರಾಗಿ, ಕ್ರೀಡೆಗಳು ಇನ್ನು ಮುಂದೆ ಕೇವಲ ಮೈದಾನಕ್ಕೆ ಸೀಮಿತವಾಗಿರದೆ, ಅವು ನವ ಭಾರತದ ಆಂದೋಲನವಾಗಿ ಮಾರ್ಪಟ್ಟಿವೆ.

ಈ ಪ್ರೋತ್ಸಾಹ ಮನೋಭಾವ ಮುಂದುವರೆಸುತ್ತಾ, ನವೆಂಬರ್ 6ರಂದು ತಮ್ಮ ನಿವಾಸದಲ್ಲಿ ಐಸಿಸಿ ಮಹಿಳಾ ವಿಶ್ವಕಪ್ 2025 ಚಾಂಪಿಯನ್‌ಗಳೊಂದಿಗಿನ ಭೇಟಿ ಸಂದರ್ಭದಲ್ಲಿ ಪ್ರಧಾನಮಂತ್ರಿ ಹೀಗೆ ಹೇಳಿದರು, "ನಿಜವಾಗಿಯೂ, ನೀವೆಲ್ಲರೂ ಗಮನಾರ್ಹವಾದದ್ದನ್ನು ಮಾಡಿದ್ದೀರಿ. ಭಾರತದಲ್ಲಿ ಕ್ರಿಕೆಟ್ ಕೇವಲ ಕ್ರೀಡೆಯಲ್ಲ - ಅದು ಜನರ ಜೀವನದ ಒಂದು ಭಾಗವಾಗಿದೆ. ಕ್ರಿಕೆಟ್ ಅಭಿವೃದ್ಧಿ ಹೊಂದಿದಾಗ, ಭಾರತವು ಚೆನ್ನಾಗಿರುತ್ತದೆ, ಆದರೆ ಕ್ರಿಕೆಟ್‌ನಲ್ಲಿನ ಸಣ್ಣದೊಂದು ಹಿನ್ನಡೆ ಕೂಡ ಇಡೀ ರಾಷ್ಟ್ರವನ್ನು ವಿಚಲಿತಗೊಳಿಸುತ್ತದೆ. ನಿಮ್ಮೆಲ್ಲರಿಗೂ ನನ್ನ ಶುಭಾಶಯಗಳು."

### ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಪ್ರೇರಣೆಯೇ ನಿಜವಾದ ತಿರುವು

2017ರಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಸೋತ ನಂತರ ಮಹಿಳಾ ಕ್ರಿಕೆಟಿಗರು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಭೇಟಿಯಾದ ಕ್ಷಣವನ್ನು ನೆನಪಿಸಿಕೊಂಡರು, ಆಗ ಅವರಿಂದ ಪಡೆದ ಪ್ರೇರಣೆ ಇಂದಿಗೂ ಸ್ಫೂರ್ತಿ ನೀಡುತ್ತಿದೆ ಎಂದು ಹೇಳಿದರು. ಪ್ರಧಾನಮಂತ್ರಿ ಅವರೊಂದಿಗಿನ ಸಂಭಾಷಣೆ ಅಥವಾ ಸಂವಾದ ಸಮಯದಲ್ಲಿ ನಾಯಕಿ ಹರ್ಮನ್‌ಪ್ರೀತ್ ಕೌರ್ ಮಾತನಾಡಿ, "ನಮಗೆ ಇನ್ನೊಂದು ಅವಕಾಶ ಸಿಕ್ಕಾಗಲೆಲ್ಲಾ ನಾವು ನಮ್ಮ ಅತ್ಯುತ್ತಮ





## ಭಾರತೀಯ ಮಹಿಳಾ ಕ್ರಿಕೆಟ್ ತಂಡದ ಸದಸ್ಯರಿಂದ ರಾಷ್ಟ್ರಪತಿ ಭೇಟಿ

ಐಸಿಸಿ ಮಹಿಳಾ ಕ್ರಿಕೆಟ್ ವಿಶ್ವಕಪ್-2025 ಗೆದ್ದ ಮಹಿಳಾ ಕ್ರಿಕೆಟ್ ತಂಡದ ಸದಸ್ಯರು 2025 ನವೆಂಬರ್ 6ರಂದು ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿಯಾದರು. ಭಾರತೀಯ ಮಹಿಳಾ ಕ್ರಿಕೆಟ್ ತಂಡದ ಪ್ರತಿಯೊಬ್ಬ ಸದಸ್ಯರನ್ನು ರಾಷ್ಟ್ರಪತಿಗಳು ಅಭಿನಂದಿಸಿದರು, ವಿಶ್ವಕಪ್ ಕ್ರಿಕೆಟ್ ಗೆಲ್ಲುವ ಮೂಲಕ ಅವರು ಇತಿಹಾಸ ನಿರ್ಮಿಸಿದ್ದಾರೆ. ದೇಶ ಮತ್ತು ವಿದೇಶಗಳ ಮೂಲೆ ಮೂಲೆಯಲ್ಲಿರುವ ಲಕ್ಷಾಂತರ ಭಾರತೀಯರು ಈ ವಿಜಯವನ್ನು ಸಂಭ್ರಮಿಸುತ್ತಿದ್ದಾರೆ. ನಮ್ಮ ಮಹಿಳಾ ತಂಡದ ಸದಸ್ಯರು ಮಾದರಿಯಾಗಿದ್ದಾರೆ ಎಂದು ರಾಷ್ಟ್ರಪತಿ ಶ್ಲಾಘಿಸಿದರು. ಯುವ ಪೀಳಿಗೆ, ಅದರಲ್ಲೂ ವಿಶೇಷವಾಗಿ ಹೆಣ್ಣು ಮಕ್ಕಳು ಜೀವನದಲ್ಲಿ ಮುಂದುವರಿಯಲು ನಿಜವಾದ ಸ್ಫೂರ್ತಿ ಪಡೆಯುತ್ತಾರೆ ಎಂದರು.



**"ಸರ್, ನೀವು ತುಂಬಾ ಹೊಳೆಯುತ್ತಿದ್ದೀರಿ..."**

ಕ್ರಿಕೆಟ್ ಆಟಗಾರ್ತಿ ಹರ್ಲೀನ್ ಕೌರ್ ಡಿಯೋಲ್ ಅವರು ಪ್ರಧಾನ ಮಂತ್ರಿ ಜತೆಗಿನ ಸಂವಾದದಲ್ಲಿ ಮಾತನಾಡಿ, "ಸರ್, ನಿಮ್ಮ ಚರ್ಮ(ತ್ವಚೆ)ದ ಆರೈಕೆ ದಿನಚರಿಯ ಬಗ್ಗೆ ನಾನು ಕೇಳಲು ಬಯಸುತ್ತೇನೆ. ನಿಮ್ಮ ಮುಖ ತುಂಬಾ ಹೊಳೆಯುತ್ತಿರುತ್ತದೆ... ನೀವು ತುಂಬಾ ಹೊಳೆಯುತ್ತಿದ್ದೀರಿ ಸರ್." ಎಂದಾಗ, ಪ್ರಧಾನ ಮಂತ್ರಿ ಅವರು ಸಾಧಾರಣ ಪ್ರತಿಕ್ರಿಯೆ ನೀಡಿದರು, ಆ ವಿಷಯದ ಬಗ್ಗೆ ತಾವು ಹೆಚ್ಚು ಗಮನ ಹರಿಸಿಲ್ಲ ಎಂದರು. ಆಗ, ಕೋಟ್ಯಂತರ ಭಾರತೀಯರ ಪ್ರೀತಿಯೇ ತಮ್ಮನ್ನು ಹೊಳೆಯುವಂತೆ ಮಾಡುತ್ತಿದೆ ಎಂದು ಒಬ್ಬ ಆಟಗಾರ್ತಿ ಹೇಳಿದರು. ಸಮಾಜದಿಂದ ಸಿಗುವ ಅಂತಹ ಪ್ರೀತಿ ನಿಜಕ್ಕೂ ಒಂದು ದೊಡ್ಡ ಶಕ್ತಿ ಎಂದು ಪ್ರಧಾನ ಮಂತ್ರಿ ಒಪ್ಪಿಕೊಂಡರು. ಸರ್ಕಾರದ ಮುಖ್ಯಸ್ಥರಾಗಿ ಹಾಗೂ ಸರ್ಕಾರ(ಸಾರ್ವಜನಿಕ ಜೀವನ)ದಲ್ಲಿ 25 ವರ್ಷಗಳನ್ನು ಪೂರೈಸಿದ್ದೇನೆ. ಹಾಗಾಗಿ, ಇಷ್ಟು ದೀರ್ಘಾವಧಿಯ ನಂತರ ಅಂತಹ ಆಶೀರ್ವಾದಗಳನ್ನು ಪಡೆಯುತ್ತಿರುವುದರಿಂದ ಶಾಶ್ವತ ಪರಿಣಾಮ ಬೀರುತ್ತಿದೆ ಎಂದು ಪ್ರಧಾನ ಮಂತ್ರಿ ಅವರು ಸ್ಪಷ್ಟನೆ ನೀಡಿದರು.

> **"ಟೀಮ್ ಇಂಡಿಯಾದ ವಿಶ್ವಕಪ್ ಗೆಲುವಿನ ಬಗ್ಗೆ ಪ್ರತಿಯೊಬ್ಬ ಭಾರತೀಯನೂ ಅತ್ಯಂತ ಹೆಮ್ಮೆಪಡುತ್ತಾನೆ. ಮಹಿಳಾ ಕ್ರಿಕೆಟ್ ತಂಡದೊಂದಿಗೆ ಸಂವಾದ ನಡೆಸಿದ್ದು ನಿಜಕ್ಕೂ ಅದ್ಭುತವಾಗಿತ್ತು."**
>
> **- ನರೇಂದ್ರ ಮೋದಿ, ಪ್ರಧಾನಮಂತ್ರಿ**

ಪ್ರಯತ್ನ ಮಾಡಬೇಕೆಂದು ನೀವು(ಪ್ರಧಾನಮಂತ್ರಿ) ನಮಗೆ ಹೇಳಿದ್ದಿರಿ. ಇಂದು, ನಾವು ಫೈನಲ್ ಗೆದ್ದ ನಂತರ ಹಿಂತಿರುಗಿದ್ದೇವೆ, ನಿಮ್ಮನ್ನು ಮತ್ತೆ ಭೇಟಿಯಾಗುತ್ತಿರುವುದು ಅದ್ಭುತ ಎನಿಸುತ್ತದೆ" ಎಂದರು. ಉಪನಾಯಕಿ ಸ್ಮೃತಿ ಮಂಧಾನ ಅವರು 2017ರ ಸಭೆಯನ್ನು ಪ್ರಸ್ತಾಪಿಸಿದರು, ಆ ಸಂವಾದದಿಂದ ಅವರು ಪಡೆದ ಪ್ರಯೋಜನಗಳು ಮತ್ತು ಸ್ಫೂರ್ತಿಯ ಬಗ್ಗೆ ಮಾತನಾಡಿದರು.

### ಫಿಟ್ ಇಂಡಿಯಾ ಉತ್ತೇಜಿಸಿ

ಸಂವಾದ ಸಂದರ್ಭದಲ್ಲಿ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು, ತಮ್ಮ ಯಶಸ್ಸಿನ ಹಿಂದೆ ಹೆಚ್ಚಿನ ಪ್ರೇರಣಾ ಶಕ್ತಿ ಇದೆ ಎಂದರು. ಮನೆಗೆ ಹಿಂದಿರುಗಿದ ನಂತರ, ನೀವೆಲ್ಲರೂ ತಾವು ಓದಿದ ಶಾಲೆಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಒಂದು ದಿನ ಸಂವಾದ ನಡೆಸಬೇಕು ಎಂದು ಸಲಹೆ ನೀಡಿದರು. ಮಕ್ಕಳು ಅನೇಕ ಪ್ರಶ್ನೆಗಳನ್ನು ಕೇಳುತ್ತಾರೆ, ಅವುಗಳನ್ನು ಜೀವನಪರ್ಯಂತ ನೆನಪಿಸಿಕೊಳ್ಳುತ್ತಾರೆ. ಆ ಅನುಭವವೇ ಆಟಗಾರರನ್ನು ಪ್ರೇರೇಪಿಸುತ್ತದೆ ಎಂದರು. ನಂತರ ಪ್ರಧಾನಮಂತ್ರಿ ಮೋದಿ ಅವರು, 3 ಶಾಲೆಗಳನ್ನು ಆಯ್ಕೆ ಮಾಡಿ ಪ್ರತಿ ವರ್ಷ ಒಂದು ಶಾಲೆಗೆ ಭೇಟಿ ನೀಡುವಂತೆ ಸಲಹೆ ನೀಡಿದರು. ಇದು ಆಟಗಾರರು ಮತ್ತು ವಿದ್ಯಾರ್ಥಿಗಳನ್ನು ಪ್ರೇರೇಪಿಸುತ್ತದೆ ಎಂದರಲ್ಲದೆ, ಫಿಟ್ ಇಂಡಿಯಾ ಆಂದೋಲನಕ್ಕೆ ಕೊಡುಗೆ ನೀಡುವ ಮಹತ್ವವಿದೆ ಎಂದು ಪ್ರಧಾನಮಂತ್ರಿ ಉಲ್ಲೇಖಿಸಿದರು. ವಿಶೇಷವಾಗಿ ಬೊಜ್ಜು ಕರಗಿಸಲು ಅಡುಗೆ ಎಣ್ಣೆ ಬಳಕೆಯನ್ನು ಶೇ. 10ರಷ್ಟು ಕಡಿಮೆ ಮಾಡಬೇಕು ಎಂದು ಸಲಹೆ ನೀಡಿ, ಆಟಗಾರರಿಂದ ಅಂತಹ ಸಂದೇಶಗಳನ್ನು ಕೇಳುವುದು ಪ್ರಬಲವಾದ ಪರಿಣಾಮ ಬೀರುತ್ತದೆ. ಫಿಟ್ ಇಂಡಿಯಾಕ್ಕಾಗಿ ವಿಶೇಷವಾಗಿ ಹೆಣ್ಣು ಮಕ್ಕಳಿಗಾಗಿ ಸಕ್ರಿಯವಾಗಿ ಕೊಡುಗೆ ನೀಡುವಂತೆ ಪ್ರಧಾನಮಂತ್ರಿ ಅವರು ಕ್ರಿಕೆಟಿಗರನ್ನು ಪ್ರೋತ್ಸಾಹಿಸಿದರು.

### ತಂಡದ ಉತ್ಸಾಹ(ಚೈತನ್ಯ) ಯಶಸ್ಸು ತರುತ್ತದೆ

ಮಹಿಳಾ ಕ್ರಿಕೆಟಿಗರ ಭೇಟಿ ಸಂದರ್ಭದಲ್ಲಿ ಪ್ರಧಾನಮಂತ್ರಿ ಮೋದಿ ಅವರು ತಂಡದ ಉತ್ಸಾಹ ಅಥವಾ ಚೈತನ್ಯ ಮನೋಭಾವದ ಮಹತ್ವದ ಬಗ್ಗೆ ಮಾತನಾಡಿದರು. ಕ್ರೀಡೆಯಲ್ಲಿ ತಂಡದ ಉತ್ಸಾಹ ಮನೋಭಾವ ಬಹಳ ಮುಖ್ಯ. ಇದು ಮೈದಾನದಲ್ಲಿ ಮಾತ್ರ ಇರಬೇಕಾದ ವಿಷಯವಲ್ಲ. ನೀವು 24 ತಾಸುಗಳ ಕಾಲ ಒಟ್ಟಿಗೆ ಕಳೆದಾಗ, ಒಂದು ರೀತಿಯ ಬಾಂಧವ್ಯ ಬೆಳೆಯುತ್ತದೆ. ಪ್ರತಿಯೊಬ್ಬರೂ ಪರಸ್ಪರರ ದೌರ್ಬಲ್ಯ ಮತ್ತು ಸಾಮರ್ಥ್ಯಗಳನ್ನು ತಿಳಿದುಕೊಳ್ಳುತ್ತಾರೆ. ಆಗ ದೌರ್ಬಲ್ಯಗಳನ್ನು ಕಡಿಮೆ ಮಾಡಿ, ಸಾಮರ್ಥ್ಯಗಳನ್ನು ಹೆಚ್ಚಿಸುವ ಪ್ರಯತ್ನಗಳು ನಡೆಯುತ್ತವೆ. ಆಗ ನಾವು ದೌರ್ಬಲ್ಯಗಳನ್ನು ಕಡಿಮೆ ಮಾಡಲು ಮತ್ತು ಸಾಮರ್ಥ್ಯಗಳನ್ನು ಪ್ರದರ್ಶಿಸಲು ಮತ್ತು ಹೆಚ್ಚಿಸಲು ಪ್ರಯತ್ನಿಸುತ್ತೇವೆ ಎಂದರು. ●



# ಭಾರತ ಮತ್ತು ಭೂತಾನ್

## ಜತೆಗೂಡಿ ಗಡಿಗಳಿಗೆ ತಡೆಗೋಡೆ ಹಾಕುತ್ತಿವೆ, ಸಂಸ್ಕೃತಿ ಹಂಚಿಕೊಳ್ಳುತ್ತಿವೆ

*ಹಿಮಾಲಯದ ತಪ್ಪಲಲ್ಲಿ ನೆಲೆಗೊಂಡಿರುವ ಭೂತಾನ್‌ನೊಂದಿಗಿನ ಭಾರತದ ಸಂಬಂಧಗಳು ಗಡಿಗಳಿಗೆ ಮಾತ್ರ ಸೀಮಿತವಾಗದೆ, ಹಂಚಿಕೆಯ ಸಂಸ್ಕೃತಿ ಮತ್ತು ಭಾವನೆಗಳಿಂದಲೂ ವ್ಯಾಖ್ಯಾನಿಸಲ್ಪಟ್ಟಿವೆ. ದಶಕಗಳಿಂದ ಮುಂದುವರಿದಿರುವ ಈ ಬಾಂಧವ್ಯವು ನಂಬಿಕೆ, ಸಹಕಾರ ಮತ್ತು ಪರಸ್ಪರ ಸಮೃದ್ಧಿಯ ಹಾದಿಯಲ್ಲಿ ಬೆಳೆಯುತ್ತಲೇ ಇದೆ. ಈ ಸಂಬಂಧಗಳನ್ನು ಮತ್ತಷ್ಟು ಉನ್ನತೀಕರಿಸಲು, ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ನವೆಂಬರ್ 11 ಮತ್ತು 12ರಂದು ಭೂತಾನ್‌ಗೆ ಭೇಟಿ ನೀಡಿದ್ದರು. ಈ ಭೇಟಿ ಸಮಯದಲ್ಲಿ, ಎರಡೂ ದೇಶಗಳ ನಡುವೆ ಹಲವಾರು ಪ್ರಮುಖ ನಿರ್ಧಾರಗಳು ಮತ್ತು ಒಪ್ಪಂದಗಳು ಏರ್ಪಟ್ಟವು....*

ಭಾರತ ಮತ್ತು ಭೂತಾನ್ ನಡುವಿನ ಸ್ನೇಹ ಮತ್ತು ಸಹಕಾರದ ಶಾಶ್ವತ ಬಾಂಧವ್ಯವು ಆಳವಾದ ಪರಸ್ಪರ ನಂಬಿಕೆ, ತಿಳಿವಳಿಕೆ ಮತ್ತು ಸದ್ಭಾವನೆಯ ಆಧಾರದ ಮೇಲೆ ಅಸ್ತಿತ್ವದಲ್ಲಿದೆ. ಈ ಪಾಲುದಾರಿಕೆಯು ಭಾರತದ 'ನೆರೆಹೊರೆ ಮೊದಲು' ನೀತಿಯ ಮೂಲಾಧಾರವಾಗಿದೆ, ನೆರೆಯ ದೇಶದೊಂದಿಗಿನ ಸ್ನೇಹ ಸಂಬಂಧಗಳಿಗೆ ಒಂದು ಮಾದರಿಯಾಗಿದೆ. ಆದ್ದರಿಂದ, ಭೂತಾನ್ ದೊರೆ ಜಿಗ್ಮೆ ಖೇಸರ್ ನಮ್ಗ್ಯೆಲ್ ವಾಂಗ್ಚುಕ್ ಅವರ ಆಹ್ವಾನದ ಮೇರೆಗೆ, ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು 2 ದಿನಗಳ ಭೂತಾನ್ ಭೇಟಿ ನೀಡಿದ್ದರು. ತಮ್ಮ ಭೇಟಿ ಸಮಯದಲ್ಲಿ ಪ್ರಧಾನ ಮಂತ್ರಿ ಮೋದಿ ಅವರು ಥಿಂಪುವಿನಲ್ಲಿ ನಡೆದ 4ನೇ ಡ್ರಕ್ ಗಯಾಲ್ಪೊ(ದೊರೆ) ಜಿಗ್ಮೆ ಸಿಂಗ್ಯೆ ವಾಂಗ್ಚುಕ್ ಅವರ 70ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು, ಅಲ್ಲದೆ ಜಾಗತಿಕ ಶಾಂತಿ ಪ್ರಾರ್ಥನಾ ಉತ್ಸವದಲ್ಲಿಯೂ ಭಾಗವಹಿಸಿದ್ದರು. ಭಾರತದ ಪೂರ್ವಜರು "ವಸುಧೈವ ಕುಟುಂಬಕಂ" ಎಂಬ ತತ್ವದಿಂದ ಪ್ರೇರಿತರಾಗಿದ್ದಾರೆ, ಅಂದರೆ ಇಡೀ ಜಗತ್ತೇ ಒಂದು ಕುಟುಂಬ. ಪರಿಣಾಮವಾಗಿ, ಅವರು "ಸರ್ವೇ ಭವಂತು ಸುಖಿನಃ" ಎಂಬ ಮಂತ್ರದ ಮೂಲಕ ಎಲ್ಲರ ಸಂತೋಷಕ್ಕಾಗಿ ಪ್ರಾರ್ಥಿಸಿದರು. ಭೂತಾನ್‌ನ 4ನೇ ದೊರೆಗೆ ಗೌರವ ಸಲ್ಲಿಸಿದ ಪ್ರಧಾನ ಮಂತ್ರಿ ಮೋದಿ, ಬುದ್ಧಿವಂತಿಕೆ, ಸರಳತೆ, ಧೈರ್ಯ ಮತ್ತು ರಾಷ್ಟ್ರಕ್ಕೆ ನಿಸ್ವಾರ್ಥ ಸೇವೆಯ ಮಿಶ್ರಣವೇ ಅವರ ಜೀವನ ಎಂದು ಬಣ್ಣಿಸಿದರು. 16ನೇ ವಯಸ್ಸಿನಲ್ಲಿ, ಅವರು ಅಗಾಧವಾದ ಜವಾಬ್ದಾರಿ ವಹಿಸಿಕೊಂಡು, ತಮ್ಮ ದೂರದೃಷ್ಟಿಯ ನಾಯಕತ್ವದಿಂದ ದೇಶವನ್ನು ಮುನ್ನಡೆಸಿದರು ಎಂದು ಬಣ್ಣಿಸಿದರು. ತಮ್ಮ 34 ವರ್ಷಗಳ ಸುದೀರ್ಘ ಆಳ್ವಿಕೆಯಲ್ಲಿ, ಅವರು ಭೂತಾನಿನ ಪರಂಪರೆ ಮತ್ತು ಅಭಿವೃದ್ಧಿ ಎರಡನ್ನೂ ಸಮರ್ಥಿಸಿಕೊಂಡರು. ಗಡಿ ಪ್ರದೇಶಗಳಲ್ಲಿ ಪ್ರಜಾಪ್ರಭುತ್ವ ಸಂಸ್ಥೆಗಳನ್ನು ಸ್ಥಾಪಿಸುವಲ್ಲಿ ಮತ್ತು ಶಾಂತಿಯನ್ನು ಉತ್ತೇಜಿಸುವಲ್ಲಿ ಅವರು ನಿರ್ಣಾಯಕ ಪಾತ್ರ ವಹಿಸಿದರು. ರಾಷ್ಟ್ರ ನಿರ್ಮಾಣವು ಒಟ್ಟು ಆಂತರಿಕ ಉತ್ಪನ್ನ(ಜಿಡಿಪಿ)ದಿಂದ ಮಾತ್ರ ನಡೆಸಲ್ಪಡುವುದಿಲ್ಲ, ಬದಲಾಗಿ ಮಾನವತೆಯ ಯೋಗಕ್ಷೇಮದಿಂದ ನಡೆಸಲ್ಪಡುತ್ತದೆ. ಭಾರತ ಮತ್ತು ಭೂತಾನಿನ ನಡುವಿನ ಸ್ನೇಹ ಬಲಪಡಿಸುವಲ್ಲಿ








## ಘೋಷಣೆಗಳು...

**1,200 ಮೆಗಾವ್ಯಾಟ್** ಸಾಮರ್ಥ್ಯದ ಪುನತ್ಸಂಗ್ಚು-I ಜಲವಿದ್ಯುತ್ ಯೋಜನೆ: ಮುಖ್ಯ ಅಣೆಕಟ್ಟು ನಿರ್ಮಾಣ ಕೆಲಸ ಪುನಾರಂಭಿಸಲು ಅನುಮೋದನೆ ನೀಡಲಾಗಿದೆ

- ವಾರಾಣಸಿಯಲ್ಲಿ ಭೂತಾನಿನ ದೇವಾಲಯ/ಬೌದ್ಧ ಮಠ ಮತ್ತು ಅತಿಥಿ ಗೃಹ ನಿರ್ಮಾಣಕ್ಕೆ ಭೂಮಿ ಮಂಜೂರು.
- ಗೆಲೆಫುವಿನಾದ್ಯಂತ ಹತಿಸರ್‌ನಲ್ಲಿ ವಲಸೆ ತಪಾಸಣಾ ಠಾಣಾ(ಚೆಕ್‌ಪಾಯಿಂಟ್) ಸ್ಥಾಪಿಸಲು ನಿರ್ಧಾರ.
- ಭೂತಾನ್‌ಗೆ 4,000 ಕೋಟಿ ರೂ. ಸಾಲ.

## ಎರಡೂ ದೇಶಗಳ ನಡುವೆ ಸಹಿ ಹಾಕಲಾದ ಒಪ್ಪಂದಗಳು

- ನವೀಕರಿಸಬಹುದಾದ ಇಂಧನ, ಮಾನಸಿಕ ಆರೋಗ್ಯ ಸೇವೆಗಳು ಮತ್ತು ಎರಡೂ ದೇಶಗಳ ನಡುವೆ ಆರೋಗ್ಯ ಸಂರಕ್ಷಣೆ.
- ನವೀಕರಿಸಬಹುದಾದ ಇಂಧನ, ಆರೋಗ್ಯ ಮತ್ತು ವೈದ್ಯಕೀಯ ವಲಯಗಳು.
- PEMA(ಭೂತಾನಿನ ಮಾನಸಿಕ ಆರೋಗ್ಯ ಉತ್ತೇಜನ ಮತ್ತು ಸೇವೆಗಳ ರಾಷ್ಟ್ರೀಯ ನೋಡಲ್ ಸಂಸ್ಥೆ) ಸಚಿವಾಲಯ ಮತ್ತು ಭಾರತ ಸರ್ಕಾರದ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ ನಡುವೆ ಸಾಂಸ್ಥಿಕ ಸಂಪರ್ಕಗಳ ಸ್ಥಾಪನೆ.

## ದೆಹಲಿ ಘಟನೆಯ ನಂತರ ಭೂತಾನ್‌ನ ಒಗ್ಗಟ್ಟಿಗೆ ಧನ್ಯವಾದಗಳು

ಭೂತಾನ್ ರಾಜ ಮನೆತನ ಮತ್ತು ವಿಶ್ವ ಶಾಂತಿಯಲ್ಲಿ ನಂಬಿಕೆ ಇಟ್ಟಿರುವ ಎಲ್ಲರಿಗೂ ಇಂದು ಮಹತ್ವದ ದಿನವಾಗಿದ್ದರೂ, ಒಂದು ದಿನದ ಹಿಂದೆ ದೆಹಲಿಯಲ್ಲಿ ನಡೆದ ಭಯಾನಕ ಘಟನೆ ಎಲ್ಲರಿಗೂ ತೀವ್ರ ನೋವುಂಟು ಮಾಡಿದೆ, ಆದರೂ ಅವರು ಭಾರದ ಹೃದಯ ಹೊತ್ತು ಇಲ್ಲಿಗೆ ಬಂದಿದ್ದೇನೆ ಎಂದು ಪ್ರಧಾನ ಮಂತ್ರಿ ಮೋದಿ ಹೇಳಿದರು. ತನಿಖೆಯಲ್ಲಿ ಭಾಗಿಯಾಗಿರುವ ಎಲ್ಲಾ ಸಂಸ್ಥೆಗಳೊಂದಿಗೆ ರಾತ್ರಿಯಿಡೀ ನಿರಂತರ ಸಂಪರ್ಕದಲ್ಲಿದ್ದೆ. ನಮ್ಮ ಸಂಸ್ಥೆಗಳು ಈ ಪಿತೂರಿಯ ಆಳವನ್ನು ಪತ್ತೆ ಮಾಡಲಿವೆ, ಇದರ ಹಿಂದಿರುವ ಅಪರಾಧಿಗಳನ್ನು ಬಿಡುವ ಪ್ರಶ್ನೆಯೇ ಇಲ್ಲ, ಈ ಅಪರಾಧಕ್ಕೆ ಹೊಣೆಗಾರರಾದ ಎಲ್ಲರನ್ನು ನ್ಯಾಯಾಲಯದ ಮುಂದೆ ತರಲಾಗುವುದು. ದೆಹಲಿ ಘಟನೆಯ ನಂತರ ಭೂತಾನ್ ತೋರಿದ ಒಗ್ಗಟ್ಟಿನ ಮನೋಭಾವಕ್ಕೆ ಪ್ರಧಾನ ಮಂತ್ರಿ ಕೃತಜ್ಞತೆ ಸಲ್ಲಿಸಿದರು.

> **"ದೆಹಲಿಯಲ್ಲಿ ನಡೆದ ಸ್ಫೋಟದ ಹಿನ್ನೆಲೆಯಲ್ಲಿ ಭೂತಾನಿನ ಜನರು ಭಾರತದ ಜನರೊಂದಿಗೆ ಒಗ್ಗಟ್ಟು ವ್ಯಕ್ತಪಡಿಸಿದ್ದು, 4ನೇ ದೊರೆಯ 70ನೇ ಹುಟ್ಟುಹಬ್ಬ ಆಚರಣೆ ಕಾರ್ಯಕ್ರಮದಲ್ಲಿ ವಿಶಿಷ್ಟ ಪ್ರಾರ್ಥನೆಯ ಮೂಲಕ ತಮ್ಮ ಬೆಂಬಲ ವ್ಯಕ್ತಪಡಿಸಿದರು. ಈ ಒಗ್ಗಟ್ಟನ್ನು ನಾನು ಎಂದಿಗೂ ಮರೆಯುವುದಿಲ್ಲ."**
>
> **ನರೇಂದ್ರ ಮೋದಿ, ಪ್ರಧಾನ ಮಂತ್ರಿ**

ಭೂತಾನಿನ 4ನೇ ದೊರೆ ಮಹತ್ವದ ಪಾತ್ರ ವಹಿಸಿದ್ದರು ಎಂದು ಮೋದಿ ಸ್ಮರಿಸಿದರು. ಅವರು ಹಾಕಿದ ಭದ್ರ ಅಡಿಪಾಯದ ಮೇಲೆ ಎರಡೂ ದೇಶಗಳ ನಡುವಿನ ಸ್ನೇಹ ಮುಂದುವರೆದಿದೆ.

ಭಾರತ-ಭೂತಾನ್ ಜಲವಿದ್ಯುತ್ ಸಹಕಾರಕ್ಕೆ 4ನೇ ದೊರೆಯ ನೇತೃತ್ವದಲ್ಲಿ ಅಡಿಪಾಯ ಹಾಕಲಾಯಿತು. ಈ ದೂರದೃಷ್ಟಿಯ ಅಡಿಪಾಯವು ಭೂತಾನ್ ಅನ್ನು ವಿಶ್ವದ ಮೊದಲ ಇಂಗಾಲ-ಮುಕ್ತ ದೇಶವಾಗಲು ಅನುವು ಮಾಡಿಕೊಟ್ಟಿದೆ. ಇದೊಂದು ಅಸಾಧಾರಣ ಸಾಧನೆಯಾಗಿದೆ ಎಂದು ಪ್ರಧಾನ ಮಂತ್ರಿ ಮೋದಿ ಹೇಳಿದರು.

ನವೀಕರಿಸಬಹುದಾದ ಇಂಧನ ಮೂಲಗಳ ತಲಾ ಉತ್ಪಾದನೆಯಲ್ಲಿ ಭೂತಾನ್ ಜಾಗತಿಕವಾಗಿ ಅತಿ ಹೆಚ್ಚು ಸ್ಥಾನ ಪಡೆದಿದೆ. ಪ್ರಸ್ತುತ ನವೀಕರಿಸಬಹುದಾದ ಇಂಧನ ಮೂಲಗಳಿಂದ 100% ವಿದ್ಯುತ್ ಉತ್ಪಾದಿಸುತ್ತಿದೆ. ಈ ಸಾಮರ್ಥ್ಯವನ್ನು ಮತ್ತಷ್ಟು ವಿಸ್ತರಿಸುತ್ತಾ, 1,000 ಮೆಗಾವ್ಯಾಟ್ ದಾಟಿದ ಹೊಸ ಜಲವಿದ್ಯುತ್ ಯೋಜನೆಯನ್ನು ಇಂದು ಪ್ರಾರಂಭಿಸಲಾಗುತ್ತಿದೆ, ಇದು ಭೂತಾನ್‌ನ ಜಲವಿದ್ಯುತ್ ಸಾಮರ್ಥ್ಯವನ್ನು 40% ಹೆಚ್ಚಿಸುತ್ತದೆ. ಈ ಪಾಲುದಾರಿಕೆಯು ಜಲವಿದ್ಯುತ್ ಉತ್ಪಾದನೆಗೆ ಮಾತ್ರ ಸೀಮಿತವಾಗಿರದೆ, ಭಾರತ ಮತ್ತು ಭೂತಾನ್ ಈಗ ಸೌರಶಕ್ತಿಯಲ್ಲೂ ಒಟ್ಟಾಗಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿವೆ. ಎರಡೂ ದೇಶಗಳು ಸಂಪರ್ಕವನ್ನು ಹೆಚ್ಚಿಸುವತ್ತ ಗಮನ ಹರಿಸುತ್ತಿವೆ. ಗೆಲೆಫು ಮತ್ತು ಸ್ಯಾಮ್ಸೆ ನಗರಗಳನ್ನು ಭಾರತದ ವಿಶಾಲ ರೈಲು ಜಾಲಕ್ಕೆ

*ಭಾರತ ಮತ್ತು ಭೂತಾನ್ ಸರ್ಕಾರದ ನಡುವಿನ ದ್ವಿಪಕ್ಷೀಯ ಒಪ್ಪಂದದ ಅಡಿ ನಿರ್ಮಿಸಲಾದ 1,020 ಮೆಗಾವ್ಯಾಟ್ ಸಾಮರ್ಥ್ಯದ ಪುನತ್ಸಂಗ್ಚು II ಜಲವಿದ್ಯುತ್ ಯೋಜನೆಯ ಉದ್ಘಾಟನೆ.*

ಸಂಪರ್ಕಿಸಲು ನಿರ್ಧಾರ ತೆಗೆದುಕೊಳ್ಳಲಾಗಿದೆ. ಪೂರ್ಣಗೊಂಡ ನಂತರ, ಈ ಯೋಜನೆಯು ಭೂತಾನ್ ಕೈಗಾರಿಕೆಗಳು ಮತ್ತು ರೈತರಿಗೆ ಭಾರತದ ವಿಶಾಲ ಮಾರುಕಟ್ಟೆಗೆ ಹೆಚ್ಚಿನ ಪ್ರವೇಶ ಒದಗಿಸುತ್ತದೆ. ಪ್ರವಾಸಿಗರು ಮತ್ತು ಹೂಡಿಕೆದಾರರಿಗೆ ಅನುಕೂಲವಾಗುವಂತೆ ಭಾರತವು ಶೀಘ್ರದಲ್ಲೇ ಗೆಲೆಫು ಬಳಿ ವಲಸೆ ತಪಾಸಣಾ ಠಾಣಾ(ಚೆಕ್‌ಪಾಯಿಂಟ್)ವನ್ನು ಸ್ಥಾಪಿಸಲಿದೆ. ಕಳೆದ ವರ್ಷ, ಭೂತಾನ್‌ನ 5 ವರ್ಷಗಳ ಯೋಜನೆಗಾಗಿ ಭಾರತ 1,000 ಕೋಟಿ ರೂ. ನೆರವು ಪ್ಯಾಕೇಜ್ ಘೋಷಿಸಿತ್ತು. ಈ ಹಣವನ್ನು ರಸ್ತೆಗಳಿಂದ ಹಿಡಿದು ಕೃಷಿಯಿಂದ ಹಣಕಾಸು ಮತ್ತು ಆರೋಗ್ಯ ರಕ್ಷಣೆ ಮತ್ತು ಇತರೆ ಕ್ಷೇತ್ರಗಳಲ್ಲಿ ಬಳಸಲಾಗುತ್ತಿದೆ. ಇದು ಭೂತಾನ್ ನಾಗರಿಕರಿಗೆ ಜೀವನವನ್ನು ಸುಲಭಗೊಳಿಸುತ್ತದೆ.

*ಪ್ರಧಾನಮಂತ್ರಿಯವರ ಸಂಪೂರ್ಣ ಕಾರ್ಯಕ್ರಮ ವೀಕ್ಷಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.*

**ಕೇಂದ್ರ ಸಚಿವ ಸಂಪುಟ ನಿರ್ಧಾರಗಳು**

# ರಫ್ತು ಉತ್ತೇಜನಾ ಮಿಷನ್‌ಗೆ ಅನುಮೋದನೆ

## ಸುಸ್ಥಿರತೆ ಮತ್ತು ಸ್ವಾವಲಂಬನೆ ಉತ್ತೇಜನ

*ಜಾಗತಿಕ ಸ್ಪರ್ಧಾತ್ಮಕತೆ ಬಲಪಡಿಸಲು ಮತ್ತು ಆತ್ಮನಿರ್ಭರ ಭಾರತದ ಕಡೆಗೆ ಪ್ರಗತಿಯನ್ನು ವೇಗಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸಚಿವ ಸಂಪುಟವು ರಫ್ತು ಉತ್ತೇಜನಾ ಮಿಷನ್ ಮತ್ತು ರಫ್ತುದಾರರಿಗೆ ಕ್ರೆಡಿಟ್ ಗ್ಯಾರಂಟಿ ಯೋಜನೆಗೆ ಅನುಮೋದನೆ ನೀಡಿದೆ. ಇದು ರಫ್ತು ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುತ್ತದೆ, ಪೂರೈಕೆ ಸರಪಳಿಯನ್ನು ಬಲಪಡಿಸುತ್ತದೆ ಮತ್ತು ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ. ಈ ನಿರ್ಧಾರವು ಜಾಗತಿಕವಾಗಿ "ಮೇಡ್ ಇನ್ ಇಂಡಿಯಾ" ಪ್ರಭಾವವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಗ್ರ್ಯಾಫೈಟ್, ಸೀಸಿಯಮ್, ರುಬಿಡಿಯಮ್ ಮತ್ತು ಜಿರ್ಕೋನಿಯಮ್ ಎಂಬ 4 ನಿರ್ಣಾಯಕ ಖನಿಜಗಳಿಗೆ ರಾಜಧನ(ರಾಯಲ್ಟಿ) ದರಗಳನ್ನು ತರ್ಕಬದ್ಧಗೊಳಿಸುವ ಪ್ರಸ್ತಾಪಕ್ಕೂ ಕೇಂದ್ರ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.*

ನಿರ್ಧಾರ: **ಭಾರತದ ರಫ್ತು ವಹಿವಾಟಿನ ಪರಿಸರ ವ್ಯವಸ್ಥೆ ಬಲಪಡಿಸಲು 25,060 ಕೋಟಿ ರೂ. ವೆಚ್ಚದ ರಫ್ತು ಉತ್ತೇಜನ ಮಿಷನ್‌ಗೆ ಅನುಮೋದನೆ ನೀಡಲಾಗಿದೆ.**

ಪರಿಣಾಮ: ಈ ಮಿಷನ್ 2025-26ರಿಂದ 2030-31ರ ವರೆಗಿನ ಹಣಕಾಸು ವರ್ಷಗಳ ತನಕ ರಫ್ತು ಉತ್ತೇಜನಕ್ಕಾಗಿ ಸಮಗ್ರ, ಹೊಂದಿಕೊಳ್ಳುವ ಮತ್ತು ಡಿಜಿಟಲ್ ಚಾಲಿತ ಮಾರ್ಗಸೂಚಿಯನ್ನು ಒದಗಿಸುತ್ತದೆ. ಜಾಗತಿಕ ವ್ಯಾಪಾರ ಸವಾಲುಗಳು ಮತ್ತು ಉದಯೋನ್ಮುಖ ರಫ್ತುದಾರರ ಅಗತ್ಯಗಳನ್ನು ಪರಿಹರಿಸಬಲ್ಲ ಬಹು ಯೋಜನೆಗಳಿಂದ ಫಲಿತಾಂಶ-ಆಧಾರಿತ ಮತ್ತು ಹೊಂದಾಣಿಕೆಯ ಪರಿಸರ ವ್ಯವಸ್ಥೆಗೆ ಕಾರ್ಯತಂತ್ರ ಬದಲಾವಣೆಗಳನ್ನು ಈ ಮಿಷನ್ ಗುರುತಿಸುತ್ತದೆ. ಭಾರತದ ರಫ್ತುಗಳನ್ನು ಬಲಪಡಿಸಲು, ವಿಶೇಷವಾಗಿ ಮೊದಲ ಬಾರಿಯ ರಫ್ತುದಾರರು ಮತ್ತು ಎಂಎಸ್‌ಎಂಇ ಕಾರ್ಮಿಕ-ತೀವ್ರ ವಲಯಗಳಿಗೆ ಈ ವರ್ಷದ ಬಜೆಟ್‌ನಲ್ಲಿ ಈ ಮಹತ್ವಾಕಾಂಕ್ಷಿ ಉಪಕ್ರಮವನ್ನು ಘೋಷಿಸಲಾಗಿದೆ.

ನಿರ್ಧಾರ: **ರಫ್ತುದಾರರಿಗೆ ಕ್ರೆಡಿಟ್ ಗ್ಯಾರಂಟಿ ಯೋಜನೆ(ಸಿಜಿಎಸ್‌ಇ) ಪ್ರಾರಂಭಿಸಲು ಅನುಮೋದನೆ.**

ಪರಿಣಾಮ: ಈ ಯೋಜನೆಯಡಿ, “ನ್ಯಾಷನಲ್ ಕ್ರೆಡಿಟ್ ಗ್ಯಾರಂಟಿ ಟ್ರಸ್ಟಿ ಕಂಪನಿ ಲಿಮಿಟೆಡ್” ಸಾಲ ನೀಡುವ ಸದಸ್ಯ ಸಂಸ್ಥೆಗಳಿಗೆ 100% ಕ್ರೆಡಿಟ್ ಗ್ಯಾರಂಟಿ ವ್ಯಾಪ್ತಿ ಒದಗಿಸುತ್ತದೆ. ಇದು ಎಂಎಸ್‌ಎಂಇಗಳು ಸೇರಿದಂತೆ ಅರ್ಹ ರಫ್ತುದಾರರಿಗೆ 20,000 ಕೋಟಿ ರೂ. ತನಕ ಹೆಚ್ಚುವರಿ ಸಾಲ ಸೌಲಭ್ಯಗಳನ್ನು ಸಕ್ರಿಯಗೊಳಿಸುತ್ತದೆ.

- ಈ ಯೋಜನೆಯು ಭಾರತೀಯ ರಫ್ತುದಾರರ ಜಾಗತಿಕ ಸ್ಪರ್ಧಾತ್ಮಕತೆ ಹೆಚ್ಚಿಸುತ್ತದೆ, ಹೊಸ ಮತ್ತು ಉದಯೋನ್ಮುಖ ಮಾರುಕಟ್ಟೆಗಳಲ್ಲಿ ವೈವಿಧ್ಯೀಕರಣವನ್ನು ಉತ್ತೇಜಿಸುತ್ತದೆ ಎಂದು ನಿರೀಕ್ಷಿಸಲಾಗಿದೆ.
- ಇದು ಉದ್ಯೋಗವನ್ನು ಹೆಚ್ಚಿಸುತ್ತದೆ ಮತ್ತು ವಿಕಸಿತ ಭಾರತದತ್ತ ಸಾಗುವ ದೇಶದ ಪ್ರಯಾಣವನ್ನು ಮತ್ತಷ್ಟು ಬಲಪಡಿಸುತ್ತದೆ.

ನಿರ್ಧಾರ: **ಹಸಿರು ಇಂಧನ ಉತ್ಪಾದನೆಗೆ ಮುಖ್ಯವಾಗಿ ಬೇಕಾದ ಗ್ರ್ಯಾಫೈಟ್, ಸೀಸಿಯಂ, ರುಬಿಡಿಯಮ್ ಮತ್ತು ಜಿರ್ಕೋನಿಯಂ ಖನಿಜಗಳಿಗೆ ರಾಜಧನ(ರಾಯಲ್ಟಿ) ದರಗಳನ್ನು ತರ್ಕಬದ್ಧಗೊಳಿಸಲು ಅನುಮೋದನೆ.**

ಪರಿಣಾಮ: ಈ ನಿರ್ಧಾರವು ಸೀಸಿಯಮ್, ರುಬಿಡಿಯಮ್ ಮತ್ತು ಜಿರ್ಕೋನಿಯಮ್ ಹೊಂದಿರುವ ಖನಿಜ ಬ್ಲಾಕ್‌ಗಳ ಹರಾಜನ್ನು ಉತ್ತೇಜಿಸುತ್ತದೆ. ಇದು ಈ ಖನಿಜಗಳನ್ನು ಮಾತ್ರವಲ್ಲದೆ, ಅವುಗಳ ಜತೆಗೆ ಕಂಡುಬರುವ ಲಿಥಿಯಂ, ಟಂಗ್‌ಸ್ಟನ್, ರೀಸ್, ನಿಯೋಬಿಯಂ ಮುಂತಾದ ನಿರ್ಣಾಯಕ ಖನಿಜಗಳನ್ನು ಸಹ ಬಳಸಿಕೊಳ್ಳಲು ಅನುವು ಮಾಡಿಕೊಡುತ್ತದೆ. ಈ ಖನಿಜಗಳ ಸ್ಥಳೀಯ ಉತ್ಪಾದನೆ ಹೆಚ್ಚಿಸುವುದರಿಂದ ಆಮದು ಮತ್ತು ಪೂರೈಕೆ ಸರಪಳಿ ಅಡಚಣೆಗಳು ಕಡಿಮೆಯಾಗುತ್ತವೆ, ದೇಶದಲ್ಲಿ ಅಪಾರ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವೆ. ಗ್ರ್ಯಾಫೈಟ್, ಸೀಸಿಯಮ್, ರುಬಿಡಿಯಮ್ ಮತ್ತು ಜಿರ್ಕೋನಿಯಮ್ ಖನಿಜಗಳು ಉನ್ನತ ತಂತ್ರಜ್ಞಾನದ ಅನ್ವಯಿಕೆಗಳು ಮತ್ತು ಇಂಧನ ಪರಿವರ್ತನೆಗೆ ನಿರ್ಣಾಯಕವಾಗಿವೆ.

- ವಿದ್ಯುತ್ ವಾಹನ(ಇವಿ) ಬ್ಯಾಟರಿಗಳ ತಯಾರಿಕೆಗೆ ಗ್ರಾಫೈಟ್ ನಿರ್ಣಾಯಕ ಖನಿಜಾಂಶವಾಗಿದೆ. ಇದನ್ನು ಪ್ರಾಥಮಿಕವಾಗಿ ಆನೋಡ್ ಎಲೆಕ್ಟ್ರೋಡ್ ಕಚ್ಚಾವಸ್ತುವಾಗಿ ಬಳಸಲಾಗುತ್ತದೆ.
- ಜಿರ್ಕೋನಿಯಮ್ ಅನ್ನು ಪರಮಾಣು ಶಕ್ತಿ, ಬಾಹ್ಯಾಕಾಶ, ಆರೋಗ್ಯ ರಕ್ಷಣೆ ಮತ್ತು ಉತ್ಪಾದನೆ ಸೇರಿದಂತೆ ವಿವಿಧ ಕೈಗಾರಿಕೆಗಳಲ್ಲಿ ಬಳಸಲಾಗುತ್ತದೆ.
- ಸೀಸಿಯಂ ಅನ್ನು ಪ್ರಾಥಮಿಕವಾಗಿ ಹೈಟೆಕ್ ಎಲೆಕ್ಟ್ರಾನಿಕ್ಸ್‌ನಲ್ಲಿ ಬಳಸಲಾಗುತ್ತದೆ.
- ಫೈಬರ್ ಆಪ್ಟಿಕ್ಸ್, ದೂರಸಂಪರ್ಕ ವ್ಯವಸ್ಥೆಗಳು, ರಾತ್ರಿ ದೃಷ್ಟಿ ಸಾಧನಗಳು ಮತ್ತು ಇನ್ನೂ ಹೆಚ್ಚಿನವುಗಳಲ್ಲಿ ಬಳಸುವ ವಿಶೇಷ ಕನ್ನಡಕಗಳ ತಯಾರಿಕೆಯಲ್ಲಿ ರುಬಿಡಿಯಮ್ ಅನ್ನು ಬಳಸಲಾಗುತ್ತದೆ.



ಸಚಿವ ಸಂಪುಟದ ನಿರ್ಧಾರಗಳ ಮಾಧ್ಯಮಗೋಷ್ಠಿಯನ್ನು ವೀಕ್ಷಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ.



Narendra Modi
@narendramodi

This Cabinet decision will boost sustainability and self-reliance. It will strengthen supply chains and create job opportunities as well.

pib.gov.in/PressReleasePa...



रक्षा मंत्री कार्यालय/ RMO India
@DefenceMinIndia

Technology is not only a tool but a culture. It is a way of doing things better, faster and more intelligently. It is about ensuring that data moves faster than doubt, that decision-making is informed by evidence and that the soldier, the scientist and the civil servant all work in synergy through shared platforms: Raksha Mantri Shri @rajnathsingh



Amit Shah
@AmitShah

दो लाख से अधिक आबादी वाले सभी शहरों में एक अर्बन कोऑपरेटिव बैंक बनाया जायेगा।



Nitin Gadkari
@nitin_gadkari

On this #WorldScienceDay, let's celebrate the power of knowledge and innovation that shape a sustainable future. May science continue to guide us toward solutions for our planet's greatest challenges—advancing progress, equity, and hope for generations to come. Happy World Science Day!



Shivraj Singh Chouhan
@ChouhanShivraj

घटिया बीज एक समस्या है, इसे बेचने वालों को रोकने के लिए हम सीड एक्ट ला रहे हैं...



Manohar Lal
@mlkhattar

Urban Invest Window (UIWin) सतत, समावेशी और भविष्य के लिए तैयार शहरों के रोडमैप की दृष्टिकोण से एक गेमचेंजर साबित होगा..

# Bullet train experiences being logged for future projects: PM

TRIBUNE NEWS SERVICE

NEW DELHI, NOVEMBER 16

Prime Minister Narendra Modi on Sunday visited the under-construction bullet train station at Surat in Gujarat and reviewed the progress of the Mumbai–Ahmedabad high-speed rail corridor.

He also interacted with the team of India's first bullet train project and enquired about the progress of the project, including adherence to speed and timetable targets. Workers assured him that the project was advancing smoothly without any difficulties.

They told the PM about the rigorous design and engineering control processes. Modi said as the experiences gained in the bullet train project were being recorded and compiled like a reference book, the country could move decisively towards large-scale implementation of bullet trains. Maintaining such records could benefit future students and contribute to nation-building, he added.



PM Narendra Modi during a visit to an under-construction bullet train station in Surat. PTI

The Mumbai–Ahmedabad High-Speed Rail Corridor spans approximately 508 km, covering 352 km in Gujarat and Dadra & Nagar Haveli and 156 km in Maharashtra.

It will connect major cities, including Sabarmati, Ahmedabad, Anand, Vadodara, Bharuch, Surat, Bilimora, Vapi, Boisar, Virar, Thane and Mumbai, marking a transformative step in India's transportation infrastructure.

Built with advanced engineering techniques on a par with international standards, the project features 465 km (about 85 per cent of the route) on viaducts, ensuring minimal land disturbance and enhanced safety. So far, 326 km of viaduct work has been completed, and 17 of the 25 river bridges have been constructed.

Upon completion, the bullet train will reduce travel time between Mumbai and Ahmedabad to nearly two hours. The project is expected to boost business, tourism and economic activity along the entire corridor, catalysing regional development.

# Justice begins in school

FROM LITIGATION TO DIALOGUE — LESSONS FROM PM





ASHOK K PANDEY

**ON NOVEMBER 8, 2025,** PM Narendra Modi addressed a conference on 'Strengthening Legal Aid Delivery Mechanisms' at the Supreme Court. The PM stressed that India's legal system must draw inspiration from its ancient roots, favouring dialogue and consensus over confrontation. He shared that nearly 800,000 criminal cases have been resolved in the last three years through the Legal Aid Defence Counsel System, demonstrating a revolution in justice delivery that holds meaning for another sacred institution: our schools.

### The climate of trust

The sacred trust between teacher, learner, and parent is under stress. Litigation involving schools and teachers has multiplied, with incidents once resolved through conversation now leading to police cases — from a school bus accident to a fee non-payment issue. Principals are being arrested for mishaps they neither intended nor could have prevented. Teachers live in anxiety, and parents feel unheard, clouding the educational climate with fear and suspicion.

### Dialogue as justice

The PM's call to revive dialogue as the foundation of justice invites a parallel transformation in education. If millions of disputes can be resolved among citizens through compassion and conversation, we must bring the same spirit to our schools. We can create mechanisms like a trust circle — a space for teachers, parents, and students to discuss grievances, listen, and seek reconciliation. The goal is not to win, but to heal the wound of dispute.

### A call to action

The legal services authorities promote early, good-faith mediation and are approaching schools to sensitise students and teachers. These interventions should become a lived experience. Voluntary sittings to resolve school-level disputes save time, preserve relationships, and reduce costs. This habit of mediation before litigation can lighten the load on the justice system.

### Accountability

This is not about shielding wrongdoing; when negligence or harm occurs, due process must proceed. Justice must be firm with wrongdoing and generous with understanding. We urge schools and families to try a structured space for listening and restoration before adversarial conflict begins. True justice lies in learning, reconciliation, and growth.

### Culture of learning justice

If the legal system seeks renewal through India's timeless wisdom, our education system must rediscover its own roots in dialogue and compassion. Every school should become a place where justice is lived each day, in the tone of the teacher and the dignity offered to every child. When fear gives way to faith, and suspicion to understanding, we will reclaim what was once sacred in learning.

*The author is fellow, Global Peace Foundation*



Prime Minister Narendra Modi joins Bhutan King Jigme Khesar Namgyel Wangchuck and his wife Jetsun Pema at the Grand Kuenrey Hall in Thimphu on Wednesday. PTI

# Tribal pride crucial part of India's consciousness: PM

HTC and agencies
letters@hindustantimes.com

**NEW DELHI:** Tribal pride has been an integral part of India's consciousness for thousands of years and the country cannot forget the tribal society's contribution in the freedom movement, Prime Minister Narendra Modi said on Saturday on the occasion of Janjatiya Gaurav Diwas, which coincides with the 150th birth anniversary of Birsa Munda.

Addressing an event in Gujarat's Narmada district, where he laid foundation stone of development projects worth over ₹9,700 crore, PM Modi said: "Tribal pride has been an integral part of India's consciousness for thousands of years. Whenever the question of the country's honour, self-respect, and self-rule has arisen... our tribal society has stood at the forefront. We cannot forget the contribution of tribal society in the freedom movement."

He added that the Janjatiya Gaurav Diwas "reminds us of the of our tribal brothers and sisters".

"The Congress which ruled the country for six decades, left the tribal communities to their fate. Our tribal regions faced issues like malnutrition, lack of health care, inadequate education, and poor connectivity. These deficiencies in a way became the identity of the tribal regions but the Congress did nothing about it."

Noting that tribal welfare has always been the highest priority for the ruling Bharatiya Janata Party (BJP), he said: "For the first time when Atal Bihari Vajpayee became the Prime Minister in the BJP-led government, a separate ministry for tribal affairs was established. After his government, when Congress got an opportunity to serve the country for ten years, they neglected this ministry. It was completely forgotten."

During his day-long visit to Gujarat, PM Modi also offered prayers to Pandori Mata, a deity of the tribal community, at a temple in Devmogra village.

Tribal Pride Day, the entire nation is reverently remembering the unparalleled contribution of the great freedom fighter of the country, Lord Birsa Munda Ji, in protecting the pride of the motherland," he said on X.

President Droupadi Murmu, the first tribal to hold the post, paid floral tributes at the Birsa Munda statue on Parliament premises.

Vice President CP Radhakrishnan, Lok Sabha Speaker Om Birla and several lawmakers also attended the event.

Union home minister Amit Shah, too, paid tributes to Birsa Munda, saying: "Bhagwan Birsa Munda is the pride not just of the tribal community, but of the entire nation. Today, the whole country is celebrating his 150th birth anniversary and 'Janjatiya Gaurav Diwas' (Tribal Pride Day) with great joy."

In 2021, the central government declared November 15 as "Janjatiya Gaurav Divas" to mark the birth anniversary of Birsa Munda and remember the contri-

# Indonesia interested in buying BrahMos missiles, says Rajnath

Press Trust of India
letters@hindustantimes.com

**LUCKNOW:** Indonesia has made a bid to purchase the BrahMos missiles, defence minister Rajnath Singh said on Saturday.

"Indonesia has requested to purchase the BrahMos missile being manufactured in Lucknow," Singh said, addressing Bharatiya Janata Party (BJP) workers in Lucknow.

Singh and Uttar Pradesh chief minister Yogi Adityanath flagged off the first batch of BrahMos missiles manufactured at the BrahMos Aerospace unit here on October 18.

The manufacturer of the BrahMos supersonic missile system has produced the first batch of missiles at its new integration and test facility in Lucknow.

The state-of-the-art unit, inaugurated on May 11, is fully



**Defence minister Rajnath Singh said that Indonesia has made a bid to purchase the BrahMos missile.**

operational now.

The ₹300-crore unit, located in the state capital's Bhatgaon in Sarojini Nagar, is one of the most ambitious projects of the Uttar Pradesh Defence Corridor.

The assembly, integration, and testing of missiles here is carried out according to high-tech standards, according to an official release.

On the National Democratic Alliance's (NDA) victory in the Bihar elections, Singh said the people of the state did a wonderful job. "... all records have been broken, and no caste or religion has mattered."

Singh said Prime Minister Narendra Modi has raised India's prestige worldwide, and now, when India speaks, the world listens, which was not the case earlier.

"This image of India has been built on the strength of our leadership and the hard work of our workers," he said.

Singh, in his speech, also exhorted the BJP workers to not ever lose their self-respect and work for the party with dedication."I tell all my workers to follow the rules. Lord Ram also followed the rules, hence he is called Maryada Purushottam," he said, according to the statement.

# India reaffirms its support to Bhutan's 13th five-year-plan

Press Trust of India
*Thimphu, November 12*

INDIA ON Wednesday reaffirmed its "unwavering" support to Bhutan's 13th five-year-plan as Prime Minister Narendra Modi held talks with former king Jigme Singye Wangchuck and joined Bhutanese leadership to attend the Kalachakra initiation ceremony, hosted as part of the

with our Act East Policy," Modi said on social media.

In the morning, Modi inaugurated the "Kalacakra Wheel of Time Empowerment" at the Global Peace Prayer Festival that was attended by top Bhutanese leadership, including Bhutan King Jigme Khesar Namgyel Wangchuck and Singye.

"This is an important ritual with great cultural significance for Buddhists around the

# 70ನೇ ಮಹಾಪರಿನಿರ್ವಾಣ ದಿನ

**ಡಿಸೆಂಬರ್ 6, 2025**



ದೆಹಲಿಯಲ್ಲಿರುವ ಡಾ. ಅಂಬೇಡ್ಕರ್ ಅಂತಾರಾಷ್ಟ್ರೀಯ ಕೇಂದ್ರ

ಸಾಮಾಜಿಕ ನ್ಯಾಯದ ಪ್ರವರ್ತಕ, ಭಾರತೀಯ ಸಂವಿಧಾನದ ಮುಖ್ಯ ಶಿಲ್ಪಿ ಮತ್ತು ಭಾರತ ರತ್ನ ಪ್ರಶಸ್ತಿ ಪುರಸ್ಕೃತ ಡಾ. ಬಾಬಾಸಾಹೇಬ್ ಭೀಮರಾವ್ ಅಂಬೇಡ್ಕರ್ ಅವರ ಮಾರ್ಗದರ್ಶನದಲ್ಲಿ ರಚಿಸಲಾದ ಭಾರತೀಯ ಸಂವಿಧಾನವು ಕೇವಲ ಒಂದು ದಾಖಲೆಯಾಗದೆ, ರಾಷ್ಟ್ರ ನಿರ್ಮಾಣದ ನಿಜವಾದ ಮಂತ್ರವಾಗಿದೆ. ಇದು ಪ್ರತಿಯೊಬ್ಬ ಭಾರತೀಯನ ಕನಸುಗಳನ್ನು ಹಕ್ಕುಗಳು ಮತ್ತು ಅವಕಾಶಗಳಾಗಿ ಪರಿವರ್ತಿಸಲು ಸ್ಪಷ್ಟ ದಾರಿ ಮಾಡಿಕೊಟ್ಟಿತು. 1956 ಡಿಸೆಂಬರ್ 6ರಂದು, ಬಾಬಾಸಾಹೇಬ್ ಅಂಬೇಡ್ಕರ್ ಅವರು ಮಹಾಪರಿನಿರ್ವಾಣ ಪಡೆದರು. ನಮ್ಮ ಘನತೆ ಮತ್ತು ಸಮಾನತೆ ಖಾತ್ರಿಪಡಿಸುವ ಸಂವಿಧಾನವನ್ನು ನಮಗೆ ನೀಡಿದರು. ಈ ಪೀಳಿಗೆಯ ಭಾರತೀಯರು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ ಎಂದೆಂದಿಗೂ ಕೃತಜ್ಞರಾಗಿರುತ್ತಾರೆ... ನಮ್ಮ ರಾಷ್ಟ್ರದ ಹೆಮ್ಮೆಯ ಬಾಬಾಸಾಹೇಬ್ ಅವರಿಗೆ ಹೃತ್ಪೂರ್ವಕ ನಮನಗಳು.



ಬಾಬಾಸಾಹೇಬರ ಜನ್ಮಸ್ಥಳವಾದ ಮೊವ್‌ನಲ್ಲಿರುವ ಸ್ಮಾರಕ



ನಾಗಪುರದ ದೀಕ್ಷಾ ಭೂಮಿ



ಮುಂಬೈನ ಚೈತ್ಯ ಭೂಮಿ



ಲಂಡನ್‌ನಲ್ಲಿರುವ ಶಿಕ್ಷಾ ಭೂಮಿ


**NEW INDIA SAMACHAR FORTNIGHTLY**

**DELKAN/2020/78828** **December 1-15, 2025**

RNI Registered No DELKAN/2020/78828, Delhi Postal License No DL(S)-1/3543/2023-25, WPP NO U(S)-91/2023-25, posting at BPC, Market Road, New Delhi-110001 on 26-30 advance Fortnightly (Publishing Date: November 18, 2025, Pages -52)

**EDITOR IN CHIEF**
**Dhirendra Ojha**
Principal Director General, Press Information Bureau, New Delhi

**PUBLISHED & PRINTED BY:**
**Kanchan Prasad**
Director General, on behalf of Central Bureau Of Communication

**PUBLISHED FROM:**
Room No–278, Central Bureau Of Communication, 2nd Floor, Soochna Bhawan, New Delhi -110003

**Printed at**
**Kaveri Print Process Pvt. Ltd.**
**A-104 Sector-65, Noida-201301 U.P.**

Kannada Vol.6 Issue-11